ಶ್ರೀ ಕೃಷ್ಣ ಆಲನಹಳ್ಳಿಯವರ 'ಕಾಡು' ಮತ್ತು ಪಿ.ಲಂಕೇಶರ 'ಅಕ್ಕ' ಕಾದಂಬರಿಗಳಲ್ಲಿ ನಿರೂಪಣಾ ತಂತ್ರ

ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ

ಮಾರ್ಗದರ್ಶಕರು

ಡಾ|| ಕೆ.ವಿ. ಚಂದ್ರಣ್ಣಗೌಡ ಎಂ.ಎ., ಎಲ್.ಎಲ್.ಬಿ. ಪಿ ಹೆಚ್.ಡಿ.
ಉಪ ಪ್ರಾಚಾರ್ಯರು, ಮುಖ್ಯಸ್ಥರು,
ಕನ್ನಡ ವಿಭಾಗ,ವಿ.ವಿ. ಪುರಂ ಸಂಜೆ ಕಾಲೇಜು,
ಕೆ.ಆರ್. ರಸ್ತೆ, ಬೆಂಗಳೂರು - **560004**

ಸಂಶೋಧಕರು

ಕುಸುಮ ಸಿ.ಆರ್.

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕಾವ್ಯ ಮಂಡಲ, ಸಾಂಸ್ಕೃತಿಕ ಅಧ್ಯಯನ ಕೇಂದ್ರ
ಕನ್ನಡ ವಿಶ್ವವಿದ್ಯಾಲಯ, ಬೆಂಗಳೂರು - 04

2008

ಶ್ರೀ ಕೃಷ್ಣ ಆಲನಹಳ್ಳಿಯವರ 'ಕಾಡು' ಮತ್ತು ಪಿ.ಲಂಕೇಶರ 'ಅಕ್ಕ' ಕಾದಂಬರಿಗಳಲ್ಲಿ ನಿರೂಪಣಾ ತಂತ್ರ

ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ

ಮಾರ್ಗದರ್ಶಕರು
ಡಾ|| ಕೆ.ವಿ. ಚಂದ್ರಣ್ಣಗೌಡ ಎಂ.ಎ., ಎಲ್.ಎಲ್.ಬಿ. ಪಿ ಹೆಚ್.ಡಿ.
ಉಪ ಪ್ರಾಚಾರ್ಯರು, ಮುಖ್ಯಸ್ಥರು,
ಕನ್ನಡ ವಿಭಾಗ,ವಿ.ವಿ. ಪುರಂ ಸಂಜೆ ಕಾಲೇಜು,
ಕೆ.ಆರ್. ರಸ್ತೆ, ಬೆಂಗಳೂರು - **560004**

ಸಂಶೋಧಕರು
ಕುಸುಮ ಸಿ.ಆರ್.

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕಾವ್ಯ ಮಂಡಲ, ಸಾಂಸ್ಕೃತಿಕ ಅಧ್ಯಯನ ಕೇಂದ್ರ
ಕನ್ನಡ ವಿಶ್ವವಿದ್ಯಾಲಯ, ಬೆಂಗಳೂರು - 04
2008

ಅರಿಕೆ

ಡಾ|| ಕೆ.ವಿ. ಚಂದ್ರಣ್ಣಗೌಡ ಅವರನ್ನು ಎಂ.ಫಿಲ್. ಪದವಿಗಾಗಿ ಮಾರ್ಗದರ್ಶನ ನೀಡಲು ವಿನಂತಿಸಿಕೊಂಡಾಗ ನನಗೆ 'ಶ್ರೀ ಕೃಷ್ಣ ಆಲನಹಳ್ಳಿಯವರ 'ಕಾಡು' ಮತ್ತು ಪಿ.ಲಂಕೇಶ್‌ರ 'ಅಕ್ಕ' ಕಾದಂಬರಿಗಳಲ್ಲಿ ನಿರೂಪಣಾ ತಂತ್ರ ಎಂಬ ವಿಷಯದಲ್ಲಿ ಸಂಶೋಧನೆ ಕಾರ್ಯ ಮಾಡಲು ಒಪ್ಪಿಗೆ ಪತ್ರ ನೀಡಿದರು. ನನ್ನ ಸಂಪ್ರಬಂಧವನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವವರೆಗೂ ನನಗೆ ಮಾರ್ಗದರ್ಶನ ನೀಡಿ, ನನ್ನ ಬರವಣಿಗೆಯ ಲೋಪಗಳನ್ನು ತಿದ್ದಿದ್ದಾರೆ. ಸಂಪ್ರಬಂಧ ರಚಿಸಲು ಎಲ್ಲಾ ರೀತಿಯ ನೆರವು ಸಹಕಾರ ನೀಡಿ, ಉಪಕರಿಸಿದ್ದಾರೆ. ನನ್ನ ಮಾರ್ಗದರ್ಶಕರಾದ ಡಾ|| ಕೆ.ವಿ.ಚಂದ್ರಣ್ಣಗೌಡ ಅವರಿಗೆ ನಾನು ಹೃದಯಪೂರ್ವಕವಾಗಿ ಕೃತಜ್ಞತೆ ಸಲ್ಲಿಸುತ್ತೇನೆ.

ಕಾವ್ಯ ಮಂಡಲ ಸಾಂಸ್ಕೃತಿಕ ಅಧ್ಯಯನ ಕೇಂದ್ರದ ನಿರ್ದೇಶಕರು ಹಾಗೂ ನಿವೃತ್ತ ಪ್ರಾಧ್ಯಾಪಕರಾದ ಪ್ರೊ|| ಕಿ.ರಂ. ನಾಗರಾಜು ಅವರು ನನ್ನ ಸಂಶೋಧನೆ ಕಾರ್ಯಕ್ಕೆ ಅನೇಕ ರೀತಿಯ ಪ್ರೋತ್ಸಾಹ ಪ್ರೇರಣೆ ನೀಡಿ, ಬೇಗನೆ ಸಂಶೋಧನೆ ಪೂರ್ಣಗೊಳಿಸಬೇಕೆಂದು ತಿಳಿಸಿದ್ದಾರೆ. ಅವರಿಗೆ ಅನಂತ ಧನ್ಯವಾದಗಳನ್ನು ಹೇಳುತ್ತೇನೆ. ಕಾವ್ಯಮಂಡಲದ ಸಾಂಸ್ಕೃತಿಕ ಅಧ್ಯಯನ ಕೇಂದ್ರದಲ್ಲಿ ನನ್ನ ಸಂಶೋಧನೆಗೆ ದಾರಿ ತೋರಿಸಿದ ಎಲ್ಲಾ ಪ್ರಾಧ್ಯಾಪಕರುಗಳಿಗೂ ನಾನು ಆಭಾರಿಯಾಗಿದ್ದೇನೆ.

ಸದಾ ನನ್ನ ಯಶಸ್ಸನ್ನು ಬಯಸುತ್ತಿರುವ ನನ್ನ ತಂದೆ ತಾಯಿಗಳಿಗೆ ಹಾಗೂ ನನಗೆ ಪರೋಕ್ಷವಾಗಿ ಮಾರ್ಗದರ್ಶನ ನೀಡಿದ ನನ್ನ ಗುರುಗಳಾದ ಡಾ. ಜಿ.ಎಸ್. ರಮೇಶ್, ಪ್ರೊ|| ಟಿ.ಎಸ್. ನಾಗರಾಜಶೆಟ್ಟಿ ಮತ್ತು ನನ್ನ ಸಂಶೋಧನೆಗೆ ಗ್ರಂಥಗಳ ಸಹಾಯ ಮಾಡಿ ಮಾರ್ಗದರ್ಶನ ನೀಡಿದ ಗ್ರಂಥಪಾಲಕರಾದ ಜಿ.ತಿಪ್ಪೇಸ್ವಾಮಿಯವರಿಗೆ ನನ್ನ ತುಂಬು ಹೃದಯದ ಕೃತಜ್ಞತೆಯನ್ನು ತಿಳಿಸುತ್ತೇನೆ.

ದಿನಾಂಕ : ಕುಸುಮ ಸಿ.ಆರ್.

ಸ್ಥಳ : ಸಂಶೋಧನಾ ವಿದ್ಯಾರ್ಥಿನಿ

ಯೋಗ್ಯತಾ ಪತ್ರ

ಕುಮಾರಿ ಕುಸುಮ ಸಿ.ಆರ್. ಅವರು ಕನ್ನಡ ವಿಶ್ವವಿದ್ಯಾಲಯದ ಅಂಗಸಂಸ್ಥೆಯಾದ ಕಾವ್ಯ ಮಂಡಲ ಸಾಂಸ್ಕೃತಿಕ ಆಧ್ಯಯನ ಕೇಂದ್ರದಲ್ಲಿ ಎಂ.ಫಿಲ್. ಪದವಿಗಾಗಿ "ಶ್ರೀಕೃಷ್ಣ ಆಲನಹಳ್ಳಿಯವರ 'ಕಾಡು' ಮತ್ತು ಪಿ.ಲಂಕೇಶ್‌ರ 'ಅಕ್ಕ' ಕಾದಂಬರಿಗಳಲ್ಲಿ ನಿರೂಪಣಾ ತಂತ್ರ" ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ನನ್ನ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ, ಸದರಿ ಸಂಶೋಧನಾ ಸಂಪ್ರಬಂಧವನ್ನು ರಚಿಸಿದ್ದಾರೆ. ಇವರ ಸಂಪ್ರಬಂಧವು ಬೇರೆ ಯಾವುದೇ ವಿಶ್ವವಿದ್ಯಾಲಯದಲ್ಲಿ ಸಂಶೋಧಕ ಪದವಿಗಾಗಲಿ ಅಥವಾ ಇನ್ನಿತರ ಯಾವುದೇ ಪದವಿಗಾಗಿ ಒಪ್ಪಿಸಿಲ್ಲವೆಂದು ಈ ಮೂಲಕ ದೃಢಪಡಿಸುತ್ತೇನೆ.

ದಿನಾಂಕ:
ಸ್ಥಳ:

ಡಾ|| ಕೆ.ವಿ. ಚಂದ್ರಣ್ಣಗೌಡ ಎಂ.ಎ., ಎಲ್.ಎಲ್.ಬಿ. ಪಿ.ಹೆಚ್.ಡಿ.
ಉಪಪ್ರಾಚಾರ್ಯರು, ಮುಖ್ಯಸ್ಥರು,
ಕನ್ನಡ ವಿಭಾಗ, ವಿ.ವಿ.ಪುರಂ, ಕಲೆ ಮತ್ತು
ವಾಣಿಜ್ಯ ಸಂಜೆ ಕಾಲೇಜು, ಬೆಂಗಳೂರು – 04
ದೂರವಾಣಿ : 26675472

ದೃಢೀಕರಣ ಪತ್ರ

"ಶ್ರೀ ಕೃಷ್ಣ ಆಲನಹಳ್ಳಿಯವರ 'ಕಾಡು' ಮತ್ತು ಲಂಕೇಶರ 'ಅಕ್ಕ' ಕಾದಂಬರಿಗಳಲ್ಲಿ ನಿರೂಪಣಾ ತಂತ್ರ ಎಂಬ ವಿಷಯ ಕುರಿತು ಕನ್ನಡ ವಿಶ್ವವಿದ್ಯಾಲಯದ ಅಂಗಸಂಸ್ಥೆಯಾದ ಕಾವ್ಯಮಂಡಲ ಸಾಂಸ್ಕೃತಿಕ ಅಧ್ಯಯನ ಕೇಂದ್ರದಲ್ಲಿ ಸಂಶೋಧಕ (ಎಂ.ಫಿಲ್.) ಪದವಿಗಾಗಿ ಸಮರ್ಪಿಸಿದ ಈ ಸಂಶೋಧನ ಸಂಪ್ರಬಂಧವನ್ನು ಡಾ|| ಕೆ.ವಿ. ಚಂದ್ರಣ್ಣಗೌಡ ಎಂ.ಎ.ಎಲ್.ಎಲ್.ಬಿ. ಪಿ.ಹೆಚ್‌ಡಿ. ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ, ಸಿದ್ಧಪಡಿಸಿದ್ದೇನೆ. ಈ ಸಂಶೋಧನ ಸಂಪ್ರಬಂಧವನ್ನು ಹಿಂದೆ ಯಾವುದೇ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಪದವಿಗಾಗಿ ಅಥವಾ ಇನ್ನಿತರ ಯಾವುದೇ ಪದವಿಯ ಉದ್ದೇಶಕ್ಕಾಗಿ ಸಲ್ಲಿಸಿಲ್ಲವೆಂದು ಈ ಮೂಲಕ ವಿಶ್ವವಿದ್ಯಾಲಯದ ಗಮನಕ್ಕೆ ತರುತ್ತಾ, ದೃಢೀಕರಿಸಿ, ಪ್ರಮಾಣೀಕರಿಸುತ್ತೇನೆ.

ದಿನಾಂಕ :

ಸ್ಥಳ :

ಕುಸುಮ ಸಿ.ಆರ್.

ಕುಸುಮ ಸಿ.ಆರ್.
ಸಂಶೋಧನಾ ವಿದ್ಯಾರ್ಥಿ
ಕಾವ್ಯಮಂಡಲ ಸಾಂಸ್ಕೃತಿಕ
ಅಧ್ಯಯನ ಕೇಂದ್ರ,
ಕನ್ನಡ ವಿಶ್ವವಿದ್ಯಾಲಯ
ಬೆಂಗಳೂರು – 560 004.

ಅಧ್ಯಾಯಗಳು

1.	ಕಾದಂಬರಿ ಬೆಳೆದು ಬಂದ ಬಗೆ	1–5
2.	ಕಾದಂಬರಿ ಸಾಹಿತ್ಯ ಪ್ರಕಾರದ ಒಂದು ಸಮೀಕ್ಷೆ	2–13
3.	ನವ್ಯ ಕಾಲಘಟ್ಟದಲ್ಲಿ ಶ್ರೀಕೃಷ್ಣ ಆಲನಹಳ್ಳಿ ಮತ್ತು ಪಿ. ಲಂಕೇಶರ ಕಾದಂಬರಿಗಳು.	14–23
4.	ಶ್ರೀ ಕೃಷ್ಣ ಆಲನಹಳ್ಳಿಯವರ 'ಕಾಡು' ಮತ್ತು ಲಂಕೇಶರ 'ಅಕ್ಕ' ಕಾದಂಬರಿಗಳಲ್ಲಿ ನಿರೂಪಣಾ ತಂತ್ರ.	24–38
5.	ನವ್ಯಕಾಲಘಟ್ಟದ ಪ್ರಮುಖ ಕಾದಂಬರಿಕಾರರಲ್ಲಿ ಶ್ರೀಕೃಷ್ಣ ಆಲನಹಳ್ಳಿ ಮತ್ತು ಪಿ. ಲಂಕೇಶ್.	39–54
	ಸಾರರೂಪ	55–57
	ಗ್ರಂಥಋಣ	

1. ಕಾದಂಬರಿ ಬೆಳೆದು ಬಂದ ಬಗೆ

ಕಾದಂಬರಿ ಪ್ರಕಾರ ಸಾಹಿತ್ಯದ ಇತರ ಪ್ರಕಾರಗಳಿಗಿಂತ ಬಹು ಜನಪ್ರಿಯವಾದುದಾಗಿದೆ. ಅದಕ್ಕೆ ಕಾರಣ ಈ ಪ್ರಕಾರದ ರೂಪ. ಸರಳವಾಗಿ ಓದಿಸಿಕೊಳ್ಳುತ್ತಾ ಓದುಗನ ತಲ್ಲೀನತೆಯನ್ನು ಕಾಯ್ದುಕೊಳ್ಳುತ್ತ ಆಸಕ್ತಿಯನ್ನುಳಿಸಿ ಕೊಂಡು ಬೆಳೆಯುವುದೇ ಕಾದಂಬರಿಯ ಜೀವವಾಗಿರು ವುದರಿಂದ ಮತ್ತು ಬದುಕಿನ ಹಲವಾರು ಮಜಲುಗಳ ಚಿತ್ರಣವನ್ನು ಭಾಷೆಯಲ್ಲಿ ಹಿಡಿದಿಡಲು ಸಾಧ್ಯವಾಗಿರುವುದರಿಂದ ಇದು ಇತರ ಸಾಹಿತ್ಯ ಪ್ರಕಾರಗಳಿಗಿಂತ ಭಿನ್ನ ಮತ್ತು ಪ್ರಸಿದ್ಧವಾಗಿದೆ. "ಕಾದಂಬರಿಯನ್ನು ಇಪ್ಪತ್ತನೆಯ ಶತಮಾನದ ಸಾಹಿತ್ಯ ಪ್ರತಿನಿಧಿಯೆಂದು ನಾವು ಕರೆಯಬಹುದು. ಇಪ್ಪತ್ತನೆಯ ಶತಮಾನದ ಜೀವನ, ಯಾಂತ್ರಿಕ ನಾಗರೀಕತೆಯ ಪ್ರಭಾವ ಬಹುಸಂಖ್ಯಾತವಾಗಿ ಬೆಳೆದ ಅಕ್ಷರತೆ ಕಾದಂಬರಿಯ ಬೆಳೆಗೆ ವಿಶೇಷವಾಗಿ ಇಂಬುಗೊಟ್ಟು ಅದನ್ನು ಈ ಶತಮಾನದ ಪ್ರಾತಿನಿಧಿಕ ಸಾಹಿತ್ಯ ಸ್ವರೂಪವನ್ನಾಗಿ ಮಾಡಿತು"*1 ಎನ್ನುವ ಮಾತು ಕಾದಂಬರಿಯ ಬೆಳವಣಿಗೆಯ ಹಿನ್ನೆಲೆಯಲ್ಲಿ ಸಮರ್ಪಕವಾದ ವ್ಯಾಖ್ಯಾನವಾಗಿದೆ.

ಈ ಸಾಹಿತ್ಯ ಪ್ರಕಾರವು 18 ನೇ ಶತಮಾನದಲ್ಲಿ ಯುರೋಪಿನಲ್ಲಿ ಹುಟ್ಟಿಕೊಂಡಿತು. ಕೈಗಾರಿಕಾ ಕ್ರಾಂತಿಯ ಫಲವಾಗಿ ಇದು ಹುಟ್ಟಿಕೊಂಡಿದ್ದು, ಮೊದಲಿನ ಸಣ್ಣಕತೆಗಳು ಹಿಗ್ಗಿ ದೀರ್ಘ ಬರಹಗಳಾಗಿ ಕಾದಂಬರಿ ಎನಿಸಿಕೊಂಡವು. ಯುರೋಪಿನ ಪ್ರಥಮ ಕಾದಂಬರಿಯೆಂದು ಗುರುತಿಸಲಾದ ಸರ್ವಾಂಟೇಸ್‌ನ 'ಡಾನ್ ಕೀ ಹೋತೆ' ಯುರೋಪಿನ ಮಧ್ಯಕಾಲೀನ ಸಾಂಸ್ಕೃತಿಕ ಮಾದರಿಗಳನ್ನು ಗೇಲಿ ಮಾಡುವುದಕ್ಕೆಂದೇ ಹುಟ್ಟಿಕೊಂಡಿತು. ಈ ಶ್ರೇಷ್ಠ ಕೃತಿಯೊಂದಿಗೆ ರೋಮಾನ್ಸ್‌ಗಳ ಕಾಲ ಮುಗಿದು ಕಾದಂಬರಿಯ ಯುಗ ಪ್ರಾರಂಭವಾಯಿತು.

ಭಾರತದಲ್ಲಿನ ಕಾದಂಬರಿಯು ಫ್ಯೂಡಲ್ ವ್ಯವಸ್ಥೆಯನ್ನು ವಿರೋಧಿಸುತ್ತಲೇ ಬಂದಿದೆ ಎನ್ನಬಹುದಾದರೂ ಅದರ ನೇರ ಸಂಬಂಧವಿರುವುದು ವಸಾಹತುವಾದದ ಅನುಭವದೊಡನೆ. ಭಾರತದಲ್ಲಿ ಯುರೋಪಿಯನ್ನರ, ಮುಖ್ಯವಾಗಿ ಬ್ರಿಟಿಷರ ಆಗಮನದ ನಂತರ, ನಡೆದ ವ್ಯಾಪಕ ಮುಖಾಮುಖಿಯ ಪರಿಣಾಮಗಳು ಭಾರತೀಯ ಸಂಸ್ಕೃತಿಯಲ್ಲಿ ಕ್ರಾಂತಿಕಾರಕ ಪರಿವರ್ತನೆಗಳನ್ನುಂಟು ಮಾಡಿದವು. ಇದರಿಂದ ಭಾರತೀಯರು ತಮ್ಮ ಸಂಸ್ಕೃತಿಯನ್ನು ಅನ್ಯ ಸಂಸ್ಕೃತಿಯ ಮೌಲ್ಯಗಳ ಬೆಳಕಿನಲ್ಲಿ

ಪರೀಕ್ಷಿಸುತ್ತ ಇತಿಹಾಸಕ್ಕೆ ಚಾಲನೆಯುಂಟುಮಾಡಿ, ಈ ಪರಿವರ್ತನೆಯ ಪ್ರಕ್ರಿಯೆ ವೈಯಕ್ತಿಕ ಹಾಗೂ ಸಾಮಾಜಿಕ ಜೀವನದ ಎಲ್ಲ ಸ್ತರಗಳನ್ನೂ ವ್ಯಾಪಿಸಿಕೊಂಡು ಭಾರತೀಯ ಸಮಾಜದಲ್ಲಿ ಅತ್ಯಂತ ಅರ್ಥಪೂರ್ಣವಾದ ಸಂವಾದ ಹುಟ್ಟಿಕೊಳ್ಳುವುದಕ್ಕೆ ಕಾರಣವಾಯಿತು. ಇದು ಸಾಹಿತ್ಯದ ಮೇಲೂ ಪ್ರಭಾವ ಬೀರತೊಡಗಿತು. ಕಾದಂಬರಿಯು ಇವೆಲ್ಲದರ ಪ್ರಭಾವದಿಂದಾಗಿ ನಮ್ಮ ನಾಗರಿಕತೆಯ ಅದರಲ್ಲೂ ಮುದ್ರಣದ ಮಗುವಾಗಿ ಬೆಳೆದು ಬಂದಿತು.

ಈ ಸಾಹಿತ್ಯ ಪ್ರಕಾರ ಯುರೋಪಿನಲ್ಲಿ 'ನಾವೆಲ್'ಎಂಬ ಹೆಸರಿನಿಂದ ಪ್ರಚಾರ ಪಡೆದಿದ್ದು, ಭಾರತಕ್ಕೆ ಇದು ಆಮದಾಗಿ ಬಂದಾಗ ಬೇರೆ ಬೇರೆ ಹೆಸರು ಪಡೆದುಕೊಂಡಿತು. ಬಂಗಾಲಿ ಹಿಂದಿಗಳಲ್ಲಿ 'ಉಪನ್ಯಾಸ' ತೆಲಗಿನಲ್ಲಿ 'ನವಲ್ಲು', ಕನ್ನಡದಲ್ಲಿ 'ಕಾದಂಬರಿ' ಎಂದು ಹೆಸರು ಪಡೆಯಿತು.

ಕನ್ನಡಿಗರು 'ಕಾದಂಬರಿ'ಎಂದು ಕರೆದುಕೊಂಡಿದ್ದಕ್ಕೆ ಒಂದು ಹಿನ್ನೆಲೆ ಇದೆ. ಸಂಸ್ಕೃತದ ಸುಪ್ರಸಿದ್ಧ ಕೃತಿ ಬಾಣನ 'ಕಾದಂಬರಿ' ಕನ್ನಡಿಗರಿಗೆ ಪರಿಚಯವಿದ್ದದ್ದು, ಅದರ ದೀರ್ಘ ಕಾಲ್ಪನಿಕ ಗದ್ಯ ಕಥನ ಶೈಲಿಯನ್ನು ನೆನಪಿಸುವ 'ನಾವೆಲ್' ಅವರಿಗೆ ಕಾದಂಬರಿ ತರಹದ ಕಥನಕೃತಿ ಎನಿಸಿತು. ಆದ್ದರಿಂದ ಕಾದಂಬರಿ ಎಂದು ಕನ್ನಡದಲ್ಲಿ ನಾಮಕರಣವಾಯಿತು.

'ಕಾದಂಬರಿ' ಪದವನ್ನು ಯಾರು? ಎಂದು? ಖಚಿತವಾಗಿ ಬಳಸಿದರೆಂದು ಹೇಳಲು ಸಾಧ್ಯವಾಗದಿದ್ದರೂ 'ಸೂರ್ಯಕಾಂತಿ' ಕಾದಂಬರಿಯನ್ನು ಬರೆದ ಲಕ್ಷ್ಮಣ ಭೀಮರಾವ್ ಗದಗಕರರೇ ಮೊದಲಿಗರೆಂದು ಶ್ರೀನಿವಾಸ ಹಾವನೂರರು ಅಭಿಪ್ರಾಯ ಪಡುತ್ತಾರೆ. 'ಕಾದಂಬರಿ' ಎಂದು ಹೆಚ್ಚು ಬಳಕೆಗೆ ಬರುವ ಮುನ್ನ 'ಕಲ್ಪಿತ –ಕಥಾ' , 'ನಾವೆಲ್ಲು', 'ಉಪನ್ಯಾಸ', 'ವಿಚಿತ್ರನೂತನ ಪ್ರಬಂಧ' , ನವನ್ಯಾಸ ಮುಂತಾದ ಹೆಸರುಗಳಿಂದ ಕರೆಯುತ್ತಿದ್ದುದು ಕಂಡುಬರುತ್ತದೆ. ಕನ್ನಡ ಸಾಹಿತ್ಯದ ಆರಂಭದ ಕಾಲದಲ್ಲಿ ಇಂಗ್ಲೀಷ್ ಸಾಹಿತ್ಯದ ನೇರ ಪ್ರಭಾವ ನಮ್ಮ ಕಾವ್ಯ ಪ್ರಕಾರಕ್ಕೆ ತಟ್ಟಿದ್ದು ನಿಧಾನವಾಗಿ, ಇತರ ಸಾಹಿತ್ಯ ಪ್ರಕಾರಗಳನ್ನು ತನ್ನ ಪ್ರಭಾವಕ್ಕೆ ಒಳಪಡಿಸಿಕೊಂಡಿತು. ಇದಕ್ಕೆ ಮಂಗಳೂರಿನಲ್ಲಿದ್ದ ಬ್ಯಾಸಲ್ ಮಿಷನ್ ಹೆಚ್ಚು ಕಾರಣವಾಗಿತ್ತು. ಪಾಶ್ಚಾತ್ಯರ ಪ್ರಭಾವದಿಂದಾಗಿ ಹೊಸತನಗಳನ್ನು ಸ್ವೀಕರಿಸಬೇಕಾಗಿದ್ದು ಮತ್ತು ತಮ್ಮ ಪರಂಪರೆಯ ಕಂದಾಚಾರಗಳನ್ನು ಸುಲಭವಾಗಿ ಬಿಟ್ಟುಕೊಡಲು ಒಪ್ಪದಂತಹ ಗೊಂದಲಮಯ ದಿನಗಳಲ್ಲಿ ಮೊದಲಿಗೆ ಅನುವಾದಗಳ ಮೂಲಕ ಬಂದ ಕಾದಂಬರಿ ಈ ನಾಡಿನ ಪುನರುಜ್ಜೀವನಕ್ಕಾಗಿ ಶ್ರಮಿಸಿತೆಂದರೆ ಅತಿಶಯವಲ್ಲ.

ಕನ್ನಡ ಸಾಹಿತ್ಯದಲ್ಲಿ ಮೊದಲ ಕಾದಂಬರಿಗಳು ಸ್ತ್ರೀ ಸ್ವಾತಂತ್ರ್ಯದ ಒಲವುಗಳುಳ್ಳ ರಚನೆಗಳೇ ಆಗಿದ್ದವು. ಇದು ಮೊದಲ ಕಾದಂಬರಿಗಳ ಶೀರ್ಷಿಕೆಗಳನ್ನು ಗಮನಿಸಿದರೆ ತಿಳಿಯುತ್ತದೆ. ಉದಾ: ಇಂದಿರಾಬಾಯಿ, ಇಂದಿರೆ, ವಾಗ್ದೇವಿ, ಭಾಗೀರಥಿ ಮುಂತಾದವುಗಳು. ಇದೇ ರೀತಿ ಭಾರತದ ಇತರ ಭಾಷೆಗಳ ಮೊದಲ ಕಾದಂಬರಿಗಳಲ್ಲಿಯೂ ಹೆಂಗಸರ ಹೆಸರುಗಳು ಕಂಡು ಬರುತ್ತವೆ. ಇವುಗಳನ್ನು ಗಮನಿಸಿದರೆ ಸಾಮಾಜಿಕ ಪರಿಸ್ಥಿತಿಯ ಸ್ಪಷ್ಟ ಚಿತ್ರ ನಮ್ಮ ಕಣ್ಣೆದುರು ನಿಲ್ಲುತ್ತದೆ.

ಇವುಗಳು ಸಾಮಾಜಿಕ ನೆಲಗಟ್ಟನ್ನೇ ಅವಲಂಬಿಸಿ ರಚಿತವಾದ ಕಾದಂಬರಿಗಳು. ಇದಕ್ಕೆ ಕಾರಣ ಅಂದಿನ ಕಾದಂಬರಿಕಾರನಿಗಿದ್ದ ಸಾಮಾಜಿಕ ಅರಿವು. ಹೀಗೆ ಕಾದಂಬರಿಗಳು ಒಂದು ನಿರ್ದಿಷ್ಟ ಉದ್ದೇಶದಿಂದ ರಚನೆಯಾದವು.

ಕಾದಂಬರಿಯನ್ನು ಕುರಿತು ಹಲವರ ವ್ಯಾಖ್ಯಾನಗಳು

1. ವಿಲಿಯಂ ಹೆನ್ರಿ ಹಡ್ಸನ್ :– " ಕಾದಂಬರಿಯನ್ನು ಕೈಯಲ್ಲಿ ಪೆನ್ನು, ಮಸಿ, ಕಾಗದ ಮತ್ತು ಕೊಂಚ ತಾಳ್ಮೆ, ವಿಶ್ರಾಂತಿ ಇದ್ದವರೆಲ್ಲ ಬರೆಯಬಹುದು"*2 ಎಂದು ಹೇಳುತ್ತಾರೆ.
2. ಸ್ಟೀಫನ್ :– "ಸಾಹಿತಿಗಳಿಗೆ ಮಾನವರಲ್ಲಿ ಅವರ ಜೀವನದ ವ್ಯವಹಾರ , ವಿಚಾರ, ವೇದನೆ, ನಗುಗಳಲ್ಲಿ ಉಂಟಾದ ವಿಶೇಷ ಆಸಕ್ತಿಯೇ ಕಾದಂಬರಿಯಂಥ ಒಂದು ಸಾಹಿತ್ಯ ರೂಪ ಬರಲು ಕಾರಣವಾಯಿತು"*3 ಎನ್ನುತ್ತಾರೆ.
3. ಎಂ. ಅಬೆಲ್ ಕೆವಲ್ಲಿಯವರು – ಕಾದಂಬರಿ ಎಂದರೆ 'ಒಂದಿಷ್ಟು ಉದ್ದವಿರುವ ಗದ್ಯಾತ್ಮಕ ಲಘು ಸಾಹಿತ್ಯ*4 ವೆಂದಿದ್ದಾರೆ. [A fiction in prose of a certain extent]
4. ಕಾದಂಬರಿಯನ್ನು ಸಾಹಿತ್ಯ ವಿಮರ್ಶೆಯ ದೃಷ್ಟಿಯಿಂದ ಹೀಗೆ ವಿವರಿಸಬಹುದು. " ಒಂದು ಮಹತ್ವದ ಅರ್ಥದ ಐಕ್ಯ ಸಾಧಿತವಾಗುವಂತೆ ಒಂದಕ್ಕೊಂದನ್ನು ಹೊಂದಿಸಿದ ಕಾಲ್ಪನಿಕ ಶ್ರೇಣಿಯ ವೃತ್ತಾಂತವೇ ಕಾದಂಬರಿ"*5.
5. ಇ. ಡಬ್ಲ್ಯೂ ಟಿಲ್‌ಯಾರ್ಡ್ – ಕಾದಂಬರಿ ಕಡೆಯು ಪಕ್ಷ 20 ಸಾವಿರ ಪದಗಳಿರ ಬೇಕು"*6 ಎಂದಿದ್ದಾರೆ.

6. ಇ.ಎಂ. ಫಾರೆಸ್ಟರ್– ಕಾದಂಬರಿಯಲ್ಲಿ ಕನಿಷ್ಟ 50 ಸಾವಿರ ಪದಗಳಿಗಿಂತ ಕಡಿಮೆ ಇಲ್ಲದ ಯಾವುದೇ ಗದ್ಯಾತ್ಮಕ ಲಘು ಸಾಹಿತ್ಯವನ್ನು ತಾನು ಕಾದಂಬರಿ''*7 ಎಂದು ಕರೆಯುತ್ತೇನೆ ಎಂದಿದ್ದಾರೆ.

7. "ಕಳೆದ ಅಥೆಂಟಿಕ್ ಜಗತ್ತಿನ ಬಗೆಗೆ ದುರಂತ ಪ್ರಜ್ಞೆಯ ನೆಲೆಯಿಂದದಲೇ ಕಾದಂಬರಿ ಹುಟ್ಟುವುದು" ಎಂಬ ವೈಚಾರಿಕ ಸಿದ್ಧಾಂತದ ನೆಲೆಯಿಂದ ಹೊರಡುವ ಡಾ. ಡಿ.ಆರ್. ನಾಗರಾಜ್ ಕನ್ನಡದ ಮೊದಲನೆಯ ಘಟ್ಟದ ಕೃತಿಗಳನ್ನು ಕಾದಂಬರಿಗಳೆಂದು ಒಪ್ಪಲು ಸಿದ್ದರಿಲ್ಲ. "ಕೆರೂರು ಗುಲ್ವಾಡಿ, ಪುಟ್ಟಣ್ಣನವರ ಕೃತಿಗಳನ್ನು ವಿಶಿಷ್ಟ ಅರ್ಥದಲ್ಲಿ ಕಾದಂಬರಿ ಎಂದು ಕರೆಯಲು ಸಾಧ್ಯವೆ ಎಂಬ ಪ್ರಶ್ನೆಗೆ ಸಿಗುವ ಉತ್ತರ ಗಹನವಾದದ್ದು, ಏಕೆಂದರೆ ಕಾದಂಬರಿ ಪ್ರಕಾರದ ಮುಖ್ಯ ನೆಲೆಯಾದ ಸಮಾಜ ಮತ್ತು ವ್ಯಕ್ತಿಯ radical rapture ಇಲ್ಲಿ ಕಾಣುವುದಿಲ್ಲ. ಮಾರ್ಕ್ಸ್‌ವಾದದ ಒಂದು ಕವಲನ್ನು ಪ್ರತಿನಿಧಿಸುವ ಜಾರ್ಜ್ ಲ್ಯೂಕಾಕ್ಸ್‌ನ ವಿಚಾರಗಳಿಂದ ಪ್ರಭಾವಿತವಾಗಿರುವ ಈ ವಾದದಲ್ಲಿ ಅನೇಕ ಪೂರ್ವನಿಶ್ಚಿತ ಕಲ್ಪನೆಗಳಿವೆ (Assumptions) ಒಂದು, ಹಿಂದೆ 'ಅಥೆಂಟಿಕ್' ಆದ ಜಗತ್ತೊಂದಿತ್ತು 'ಶ್ರಮ ಮತ್ತು ಅದರ ಫಲದ ಉಪಯೋಗ ಇವೆರಡರ ನಡುವೆ ಬಿರುಕಿಲ್ಲದಿದ್ದ ಸಮಾಜ (ಸಮುದಾಯ). ಇಂದು ಆ ಜಗತ್ತು ಕಳೆದು ಹೋಗಿದೆ ಮತ್ತು ಹಾಗಾದದ್ದು ಒಂದು ದುರಂತ. ಆ ದುರಂತ ಪ್ರಜ್ಞೆ ಯಾವ ಕಥನದಲ್ಲಿದೆಯೋ ಅದು ಮಾತ್ರ 'ಕಾದಂಬರಿ'*8 ಎನ್ನುತ್ತಾರೆ.

8. 'ಕಾದಂಬರಿ' ಯನ್ನು ಒಂದು 'ಕಥನ'ದಂತೆ ಕಾಣುವ ಗೋವಿಂದಪೈ ಅವರು ಕ್ರಿ.ಶ. 6,7 ನೆಯ ಶತಮಾನಗಳಲ್ಲಿ ಆಗಿ ಹೋದ ಬಾಣಭಟ್ಟನೆಂಬುವನು ಸಂಸ್ಕೃತದಲ್ಲಿ ರಚಿಸಿದ 'ಕಾದಂಬರಿ' ಎಂಬ ಹೆಸರಿನದೇ ಕಾದಂಬರಿ. ಪ್ರಾಯಶ: ಸಂಸ್ಕೃತದಲ್ಲಿನ ಮೊಟ್ಟಮೊದಲಿನ ಕಾದಂಬರಿಯಂತೆ, ಆ ಕಾರಣದಿಂದಲೇ ಆ ಬಳಿಕ ನಮ್ಮ ಭರತ ಭೂಮಿಯಲ್ಲಿ ಬರೆಯಲ್ಪಟ್ಟ ಕಾದಂಬರಿಗಳಿಗೆಲ್ಲಾ 'ಕಾದಂಬರಿ' ಎಂದು ಹೆಸರಾಯಿತು"*9 ಎಂದು ಹೇಳುತ್ತಾರೆ.

9. ಈ ಸಂದರ್ಭದಲ್ಲಿ ಕಾದಂಬರಿ ಪ್ರಭೇದವನ್ನು ಕುರಿತು ಮೊದಲಿಗೆ ಗಂಭೀರವಾಗಿ ವಿಮರ್ಶಿಸಿದವರು ಮಾಸ್ತಿಯವರು. ಅವರ ಅಭಿಪ್ರಾಯದಲ್ಲಿ

"ನಾವು ಈಗ ನಾವಲು ಎಂದು ಯಾವುದನ್ನು ಕರೆಯುತ್ತೇವೋ ಅದು ನಾವು ಇಂಗ್ಲಿಷ್‌ರ ಸಾಹಿತ್ಯವನ್ನು ನೋಡಿ ಕಲಿತ ಪುಸ್ತಕ ಜಾತಿ". ಜೊತೆಗೆ ತಿರುಮಲಾಂಬ ಕಾದಂಬರಿಗಳನ್ನು ಚರ್ಚಿಸುತ್ತಾ "ಪ್ರಾಯಶ: ಸಮಕಾಲೀನ ಜೀವನಕ್ಕೆ ಹತ್ತಿರವಿರುವ ಕಾಲ್ಪನಿಕ ಕಥೆಯನ್ನುಳ್ಳದ್ದು ನಾವೆಲ್"*10 ಎಂದು ಮಾಸ್ತಿಯವರು ಹೇಳುತ್ತಾರೆ.

ಕನ್ನಡ ಕಾದಂಬರಿಯ ಉಗಮಕ್ಕೆ ಸಂಬಂಧಿಸಿದಂತೆ ಡಿ.ಆರ್. ನಾಗರಾಜ್ ಅವರು ಎರಡು ಅಂಶಗಳನ್ನು ಹೇಳುತ್ತಾರೆ.

1. ಪರಕೀಯ ಯಜಮಾನ ಸಂಸ್ಕೃತಿ ಮತ್ತು ದೇಸಿ ಸಂಸ್ಕೃತಿಗಳ ನಡುವಿನ ಮುಖಾಮುಖಿಯಲ್ಲಿ ಕಾದಂಬರಿ ಹುಟ್ಟುತ್ತದೆ.
2. ದೇಸಿ ಮಧ್ಯಮ ವರ್ಗ ರೂಪುಗೊಂಡು ತನಗೊಂದು ಆಧುನಿಕ ಸಾಂಸ್ಕೃತಿಕ ವ್ಯಕ್ತಿತ್ವ ನಿರ್ಮಾಣ ಮಾಡಿಕೊಳ್ಳುವಾಗ ಉಂಟಾಗುವ ದ್ವಂದ್ವದಲ್ಲಿ ಕಾದಂಬರಿ ಹುಟ್ಟುತ್ತದೆ ಎನ್ನುತ್ತಾರೆ.

ಒಟ್ಟಾರೆಯಾಗಿ ಕಾದಂಬರಿ ಬರೀ ಕಾಲ್ಪನಿಕ ಗದ್ಯವಾಗಿರದೆ ಅದೊಂದು ಮನುಷ್ಯನ ಬದುಕಿನ ಸಮಗ್ರ ಅಭಿವ್ಯಕ್ತಿಗೆ ಕಾರಣವಾಗಿದೆ. ಅಲ್ಲದೆ ಬದುಕನ್ನು ಇಡಿಯಾಗಿ ಅಭಿವ್ಯಕ್ತಿಸುವ ಮೊಟ್ಟ ಮೊದಲ ಕಲೆಯಾಗಿ ಬೆಳೆದು ಬಂದಿದೆ.

ಅಡಿ ಟಿಪ್ಪಣಿ

1. ಅ.ನ.ಕೃಷ್ಣರಾಯ–ಸಾಹಿತ್ಯ ಮತ್ತು ಜೀವನ ಭಾಗ-6 ಸಮದರ್ಶನ 1956. ಪುಟ – 65
2. ಸಾಹಿತ್ಯದ ಪ್ರಕಾರಗಳು – ಪುಟ – 29
3. ಸಾಹಿತ್ಯದ ಪ್ರಕಾರಗಳು – ಪುಟ 21
4. ಸಾಹಿತ್ಯದ ಪ್ರಕಾರಗಳು – ಪುಟ 38
5. ಪ್ರೊ. ಎಲ್ ಎಸ್. ಶೇಷಗಿರಿರಾವ್ – ಸಾಹಿತ್ಯ , ಸಪ್ನ ಬುಕ್ ಹೌಸ್, 2004. ಪುಟ –22
6. ಪ್ರೊ. ಎಲ್.ಎಸ್.ಶೇಷಗಿರಿರಾವ್ – ಸಾಹಿತ್ಯ , ಸಪ್ನ ಬುಕ್ ಹೌಸ್, 2004. ಪುಟ –22
7. ಪ್ರೊ. ಎಲ್.ಎಸ್.ಶೇಷಗಿರಿರಾವ್ – ಸಾಹಿತ್ಯ , ಸಪ್ನ ಬುಕ್ ಹೌಸ್, 2004. ಪುಟ –22
8. ಜಿ.ಹೆಚ್. ನಾಯಕ್ – ಶತಮಾನದ ಕನ್ನಡ ಸಾಹಿತ್ಯ. ಶ್ರೀ ರಾಘವೇಂದ್ರ ಪ್ರಕಾಶನ– ಅಂಕೋಲಾ – 2000 ಪುಟ – 174-175.
9. ಜಿ.ಹೆಚ್.ನಾಯಕ್–ಶತಮಾನದ ಕನ್ನಡ ಸಾಹಿತ್ಯ ಶ್ರೀ ರಾಘವೇಂದ್ರ ಪ್ರಕಾಶನ ಅಂಕೋಲಾ–2000 . ಪುಟ–176
10. ಜಿ.ಹೆಚ್. ನಾಯಕ್–ಶತಮಾನದ ಕನ್ನಡ ಸಾಹಿತ್ಯ ಶ್ರೀ ರಾಘವೇಂದ್ರ ಪ್ರಕಾಶನ ಅಂಕೋಲಾ –2000 ಪುಟ–175

2. ಕಾದಂಬರಿ ಸಾಹಿತ್ಯ ಪ್ರಕಾರದ ಒಂದು ಸಮೀಕ್ಷೆ

ಕಾದಂಬರಿ ಎಲ್ಲ ಆಧುನಿಕ ಸಾಹಿತ್ಯಗಳಂತೆ ಕನ್ನಡದಲ್ಲಿಯೂ ಲೋಕಪ್ರಿಯವಾದ ಸಾಹಿತ್ಯ ಪ್ರಕಾರವಾಗಿ ಬೆಳೆದು ಬಂದಿದೆ. ಈ ಸಾಹಿತ್ಯ ಪ್ರಕಾರವು ಸಾಮಾನ್ಯ ಜನರ ಆಶೋತ್ತರಗಳನ್ನು, ಅಭಿರುಚಿಗಳನ್ನು, ಸಂಸ್ಕೃತಿಯ ಮಟ್ಟವನ್ನು ವಿವರವಾಗಿ ಪ್ರತಿಬಿಂಬಿಸುವ ಮಾಧ್ಯಮವಾಗಿದೆ. ಇದು ಸಮಕಾಲೀನ ಜೀವನಕ್ಕೆ ತೀರ ಹತ್ತಿರವಾದ ರೂಪವಾಗಿದೆ.

ಕನ್ನಡದಲ್ಲಿ ಕಾದಂಬರಿ ಹುಟ್ಟುವುದಕ್ಕಿಂತ ಮೊದಲು ಗದ್ಯಪ್ರಕಾರ ಬೆಳೆದು ಬರಬೇಕಾಗಿತ್ತು. ಈ ಹಿನ್ನೆಲೆಯಲ್ಲಿ ಕೆಂಪು ನಾರಾಯಣನ 'ಮುದ್ರಾಮಂಜೂಷ' ದಲ್ಲಿಯ ಕಥನ ರೀತಿ ಕಾದಂಬರಿಗೆ ಹೆಚ್ಚು ಸಮೀಪವಾಗಿದೆಯೆನ್ನಬಹುದು. ಕಾದಂಬರಿ ಬರೆಯದಿದ್ದರೂ, ಅದರ ಬರವಣಿಗೆಗೆ ಕನ್ನಡ ಗದ್ಯವನ್ನು ಹದಗೊಳಿಸುವ ಶ್ರೇಯಸ್ಸು ಕೆಂಪುನಾರಾಯಣನಿಗೆ ಸಲ್ಲುತ್ತದೆ.

ಇಂಗ್ಲಿಷ್ ಸಾಹಿತ್ಯದ ಪ್ರಭಾವ ಬೀಳುವ ಮೊದಲೇ 'ಕಾದಂಬರಿ' ಎನ್ನಬಹುದಾದ ಮೂರು ಕೃತಿಗಳು ರಚಿತವಾದವು ಎಂದು ಸಾಹಿತ್ಯ ಚರಿತ್ರಕಾರರು ಹೇಳುತ್ತಾರೆ. ಯಾದವನ 'ಮುಮ್ಮಡಿ ಕೃಷ್ಣರಾಜರ ಸೌಗಂಧಿಕ ಪರಿಣಯ (1821)ಮತ್ತು ಕೆಂಪು ನಾರಾಯಣನ 'ಮುದ್ರಾಮಂಜೂಷ' (1823) 'ಕಲಾವತಿ ಪರಿಣಯ'ದಲ್ಲಿ ಒಳ್ಳೆಯ ಕಥಾನಕವಿದೆ. ಪಾತ್ರಗಳ ನಿರೂಪಣೆಯಲ್ಲಿ ಸಹಜತೆಯಿದೆ. ಸೌಗಂಧಿಕ ಪರಿಣಯದ ಭಾಷೆ ಹೊಸಗನ್ನಡಕ್ಕೆ ಹತ್ತಿರವಿದೆ. 'ಮುದ್ರಾಮಂಜೂಷ' ಸಂಸ್ಕೃತದ 'ಮುದ್ರಾರಾಕ್ಷಸ' ನಾಟಕದ ಆಧಾರದ ಮೇಲೆ ರಚಿತವಾಗಿದೆ. ಹಳೆಗನ್ನಡದ ಭಾಷೆಯ ಬಿಗಿ ಕ್ರಮೇಣ ಸಡಿಲಾಗುತ್ತ ಸರಳತೆ ಹಾಗೂ ಹೃದಯಂಗಮತೆಯ ಕಡೆಗೆ ತಿರುಗುವುದನ್ನು ಮೊಟ್ಟ ಮೊದಲಿಗೆ 'ಮುದ್ರಾಮಂಜೂಷ'ದಲ್ಲಿ ಕಾಣಬಹುದು.

1842 ರಲ್ಲಿ ಬುನ್‌ಯನ್‌ನ 'ದಿ ಪಿಲ್‌ಗ್ರಿಮ್ಸ್ ಪ್ರೊಗ್ರೆಸ್' , 1852 ರಲ್ಲಿ ಡ್ಯಾನಿಯಲ್ ಡಫೋನ್ 'ರಾಬಿನಸನ್ ಕ್ರೂಸೋ' ಕನ್ನಡಕ್ಕೆ ಅನುವಾದವಾದವು. ಇವು ಬಹು ಪುಟ್ಟ ಪುಟ್ಟ ವಿವರಗಳಿಗೂ ಗಮನಕೊಡುವ ವಿಶಿಷ್ಟ ವಾಸ್ತವಿಕ ನಿರೂಪಣೆಯನ್ನು ಕನ್ನಡಕ್ಕೆ ಪರಿಚಯ ಮಾಡಿಕೊಟ್ಟವು. ಇತರ ಭಾಷೆಗಳಿಂದ ಅನುವಾದವಾದ ಪ್ರಥಮ ಕಾದಂಬರಿಗಳು. ಮರಾಠಿಯಿಂದ ಪದಮಂಜಿಯವರ 'ಯಮುನಾ ಪರ್ಯಟನ'(1869), ಬಂಗಾಲಿಯಿಂದ ಬಂಕಿಮಚಂದ್ರರ 'ದುರ್ಗೇಶನಂದಿನಿ'

(1885), ತೆಲುಗಿನಿಂದ ವೀರೇಶಲಿಂಗಂ ಪಂತುಲು ಅವರ 'ವಿವೇಕ ಚಂದ್ರಿಕೆ' (1895), ಮಲಯಾಳಂನಿಂದ ಮುಳಿಯಿಲ್ ಅವರ 'ಸುಕುಮಾರಿ' (1899) ಅನುವಾದವಾದವು.

1875 ರಿಂದ 1930 ರ ವರೆಗಿನ ಕಾಲವನ್ನು ಕನ್ನಡ ಕಾದಂಬರಿಯ ಉದಯಕಾಲವೆಂದು ಗುರುತಿಸಲಾಗಿದೆ. ಇದರ ಹಿಂದಿನ ಮುಖ್ಯ ಪ್ರೇರಣೆ, ಇಂಗ್ಲಿಷ್ ಶಿಕ್ಷಣ, ಸಾಹಿತ್ಯ ಹಾಗೂ ದೇಸೀ ಭಾಷೆಗಳಾದ ಬಂಗಾಲಿ ಮತ್ತು ಮರಾಠಿ-ಭಾಷೆಗಳಿಂದ ಹರಿದ ಪ್ರಭಾವ. ಈ ಮಾತು ಕೇವಲ ಸಾಹಿತ್ಯಕ್ಕಷ್ಟೆ ಸೀಮಿತವಾಗದೆ, ರಾಜಕೀಯಕ್ಕೂ ಹಾಗೂ ಸಾಂಸ್ಕೃತಿಕ ಕ್ಷೇತ್ರಕ್ಕೂ ಸಂಬಂಧಿಸಿದುದಾಗಿದೆ. ಈ ಕಾಲದ ಲೇಖಕರೆಲ್ಲ ತಮ್ಮ ಸಂಸ್ಕಾರ, ಸಂಸ್ಕೃತಿಯಲ್ಲಿ ಅಪಾರವಾದ ಕಾಳಜಿಯನ್ನು ಮತ್ತು ವಿಶೇಷ ಆಸಕ್ತಿಯನ್ನು ಹೊಂದಿದ್ದವರು. ಸನಾತನ ಧರ್ಮದ ಮೌಲ್ಯಗಳನ್ನು ನಂಬಿದವರೂ ಆಗಿದ್ದರು. ಸಾಂಸ್ಕೃತಿಕ ಸಂದರ್ಭದಲ್ಲಿಯೇ ಕಾದಂಬರಿ ರಚನೆಗೆ ಹೊರಟ ಗುಲ್ವಾಡಿ ವೆಂಕಟರಾಯರು, ಬೋಳುವಾರ ಬಾಬುರಾಯರು, ಗಳಗನಾಥ, ಪುಟ್ಟಣ್ಣ ಬಿ.ವೆಂಕಟಾಚಾರ್ ಈ ಎಲ್ಲಾ ಕಾದಂಬರಿಕಾರರ ಮನೋಧರ್ಮ ಬೇರೆ ಬೇರೆಯಾಗಿತ್ತು.

1892 ರಲ್ಲಿ ಪ್ರಕಟವಾದ ಲಕ್ಷ್ಮಣರಾವ್ ಗದಗಕರರ 'ಸೂರ್ಯಕಾಂತಿ' ಕನ್ನಡದ ಮೊದಲನೆಯ ಸ್ವತಂತ್ರ ಕಾದಂಬರಿ. ಇದು ಐತಿಹಾಸಿಕ ಕಾದಂಬರಿ ಗುಬ್ಬಿ ಮುರುಗಾರಾಧ್ಯರ 'ಶೃಂಗಾರ ಚಾತುರ್ಯೋಲ್ಲಾಸಿನಿ' ಗಳಗನಾಥರ ಪ್ರಬುದ್ಧನಯನ, ಗುಲವಾಡಿ ವೆಂಕಟರಾಯರ ಇಂದಿರಾಬಾಯಿ ಎಲ್ಲವುಗಳು ಗಮನಿಸಬೇಕಾದ ಕೃತಿಗಳು.

ಬಿ. ವೆಂಕಟಾಚಾರ್ ಹಾಗೂ ಗಳಗನಾಥರು ಕನ್ನಡ ಕಾದಂಬರಿಯನ್ನು ಸುಗಮ ವಾದ ಮಾರ್ಗದಲ್ಲಿ ಮುನ್ನಡೆಸಿದರು. ಗುಲವಾಡಿ ಅಣ್ಣಾರಾಯರು 1899 ರಲ್ಲಿ ಒಂದು ಸಾಮಾಜಿಕ ಕಾದಂಬರಿಯನ್ನು ಬರೆದಿದ್ದಾರೆ. ಆದರೆ ಆಗಿನ ಕಾಲಕ್ಕೆ ಸಾಮಾಜಿಕ ಕಾದಂಬರಿಗಳು ಜನರ ಮನಸ್ಸಿನಲ್ಲಿ ನೆಲೆಯೂರಲಿಲ್ಲ. ಅದಕ್ಕೆ ಬದಲಾಗಿ ವೆಂಕಟಾಚಾರ್ ಮತ್ತು ಗಳಗನಾಥರ ಐತಿಹಾಸಿಕ ಕಾದಂಬರಿಗಳು ಜನರ ಮೆಚ್ಚುಗೆಗೆ ಪಾತ್ರವಾದವು. ಇವರ ಕೈಲಿ ಸರಳವಾದುದಾಗಿತ್ತು. ಇಬ್ಬರೂ ಕಾದಂಬರಿಕಾರರು ಕನ್ನಡ ಕಾದಂಬರಿಯನ್ನು ಸಾಮಾನ್ಯ ಜನತೆಯವರೆಗೆ ಒಯ್ದು ಮುಟ್ಟಿಸಿದರು. ಈ ಬಗೆಯ ಕಾದಂಬರಿ ಹುಟ್ಟದಿದ್ದರೆ, ಕನ್ನಡದ ಸಾಮಾನ್ಯ ಜನರು ಸಾಹಿತ್ಯದ ಬಗ್ಗೆ ಆಸ್ಥೆಯನ್ನು ತಳೆಯಲು ಮತ್ತೆ ಕೆಲವರ್ಷಗಳು ಬೇಕಾಗುತ್ತಿದ್ದವು. ಸಾಹಿತ್ಯವನ್ನು ಓದುವುದು ಕೂಡ

ಪಂಡಿತರ ಸೊತ್ತಾಗಿದ್ದ ಕಾಲವದು. ಈ ಕಾದಂಬರಿಗಳು ಜನತೆ ಹಾಗೂ ಸಾಹಿತ್ಯದ ನಡುವೆ ಸೇತುವೆಯಾಗಿ ನಿಂತವು. ಜನತೆಗೆ ಸಾಹಿತ್ಯದ ರುಚಿಯನ್ನು ಕಲಿಸಿಕೊಟ್ಟವು.

ನಂತರದಲ್ಲಿ ಸಾಮಾಜಿಕ ಕಾದಂಬರಿಗಳನ್ನು ಬರೆಯುವ ಪ್ರಯತ್ನಗಳು ನಡೆದವು. ಇವುಗಳಲ್ಲಿ ಬೋಳಾರ ಬಾಬುರಾಯರ 'ವಾಗ್ದೇವಿ' ಎಂ.ಎಸ್. ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹಾರಾಯ' ಹಾಗೂ ಕೆರೂರು ವಾಸುದೇವಾಚಾರ್ಯರ 'ಇಂದಿರೆ' ರಚಿತವಾದವು. ವಾಗ್ದೇವಿಯಲ್ಲಿ ವೈದಿಕ ಸಮಾಜದ ಅವನತಿಯ ಚಿತ್ರವೊಂದನ್ನು ನೀಡಿದ್ದಾರೆ. 'ಮಾಡಿದ್ದುಣ್ಣೋ ಮಹಾರಾಯ'ದಲ್ಲಿ ವಾಸ್ತವ ವ್ಯಕ್ತಿಗಳ ಜೀವಂತ ತನದಲ್ಲಿ ಆದರ್ಶವನ್ನು ಕಾಣುವ ಮಹತ್ವದ ಪ್ರಯೋಗವನ್ನು ಮಾಡಿದ್ದಾರೆ. ನಿಜವಾದ ಕಲೆ ಮಣ್ಣು ಬಿತ್ತಿ ಹೊನ್ನು ಬೆಳೆಯಬಲ್ಲದು ಎಂಬುದಕ್ಕೆ ಈ ಕಾದಂಬರಿ ಸಾಕ್ಷಿಯಾಗಿದೆ. ಎಂ.ಎಸ್. ಪುಟ್ಟಣ್ಣನವರ ಕೃತಿಗಳು ಪಾಶ್ಚಾತ್ಯ ಸಾಹಿತ್ಯ ಸಂಸ್ಕೃತಿಗಳ ಪ್ರಭಾವಕ್ಕೆ ಒಳಗಾಗದೆ, ಭಾರತೀಯ ಪರಂಪರೆಯನ್ನು ವೈಭವೀಕರಿಸಿದೆ. ದೃಷ್ಟಾಂತ ನೀತಿಕತೆ, ದಂತಕತೆಗಳನ್ನು ತಮ್ಮ ಕೃತಿಗಳಲ್ಲಿ ದುಡಿಸಿಕೊಂಡಿದ್ದು, ಭಾರತೀಯ ಕಥಾ ಪ್ರಕಾರಗಳ ಸಾಧ್ಯತೆಗಳನ್ನು ತಮ್ಮ ಕೃತಿಗಳಲ್ಲಿ ಮೇಳವಿಸಿ, ಅಚ್ಚ ದೇಸಿಯತೆಯಿಂದಾಗಿ ಇವರು ಕನ್ನಡ ಕಾದಂಬರಿಯ ಪ್ರಾರಂಭ ಘಟ್ಟದ ಮಹತ್ವದ ಕಾದಂಬರಿಕಾರರಾಗಿದ್ದಾರೆ. ಕೆರೂರರ ' ಇಂದಿರೆ'ಯೂ ಅನೇಕರ ಲಕ್ಷ್ಯವನ್ನು ಸೆಳೆದುಕೊಂಡಿತ್ತು.

ಕನ್ನಡ ಕಾದಂಬರಿ ಇಪ್ಪತ್ತನೆ ಶತಮಾನದ ನಾಲ್ಕನೆ ದಶಕದಲ್ಲಿ ಸಮೃದ್ಧವಾಗಿ ಬೆಳೆಯಿತು. ಶಿವರಾಮ ಕಾರಂತರ ಚೋಮನದುಡಿ, ದೇವದೂತರು, ಆನಂದಕಂದರ ಸುದರ್ಶನ, ರಾಜಯೋಗಿ, ಮುಗಳಿಯವರ 'ಬಾಳುರಿ' ಅ.ನ.ಕೃ. ಅವರ ಜೀವನ ಯಾತ್ರೆ, ಉದಯರಾಗ, ಶ್ರೀರಂಗರ ವಿಶ್ವಾಮಿತ್ರ ಸೃಷ್ಟಿ, ಗೋಕಾಕರ ಇಜ್ಜೋಡು, ಜಡಭರತರ ಧರ್ಮಸೆರೆ, ಕುವೆಂಪು ಅವರ ಕಾನೂನು ಸುಬ್ಬಮ್ಮ ಹೆಗ್ಗಡತಿ ಪ್ರಕಟವಾದವು. ಇದರಿಂದ ಕನ್ನಡದಲ್ಲಿ ಕಾದಂಬರಿ ಯುಗ ಪ್ರಾರಂಭವಾಯಿತು. 1920–1945 ರವರೆಗೆ ಸುಮಾರು ಎಂಭತ್ತು ಕಾದಂಬರಿಗಳು ಪ್ರಕಟವಾದವು.

ಕಾವ್ಯದಲ್ಲಿ ಬೇಂದ್ರೆ – ಕುವೆಂಪು ಅವರು ಪ್ರಭಾದ ಬೀರಿದಂತೆ ಕಾದಂಬರಿಯಲ್ಲಿ ಕಾರಂತ – ಅ.ನ. ಕೃಷ್ಣರಾಯರು ಪ್ರಭಾವ ಬೀರಿದರು.*1 ಕಾರಂತರು ಸುಮಾರು ೩೮ ಕಾದಂಬರಿಗಳನ್ನು ಬರೆದಿದ್ದಾರೆ. ಇವರು ಅಗಾಧವಾದ ಜೀವನ ಶ್ರದ್ಧೆ ಮತ್ತು ಅತಿಭಾವುಕತೆಗೆ ಎಡೆಕೊಡದ ಕಾದಂಬರಿಕಾರರು. ಇವರ

ಬರಹದಲ್ಲಿ ಆವೇಶಗಳಾಗಲಿ, ರಘುಗಮಗಿಸುವ ಆದರ್ಶಗಳಾಗಲಿ ಜೀವಂತವಾದ ಮತ್ತು ವಾಸ್ತವ ಜಗತ್ತಿಗೆ ಘೋಷಣೆಯಾಗಲಿ ಇಲ್ಲ. ಹತ್ತಿರವಾದ ಜಗತ್ತನ್ನು ಸೃಷ್ಟಿಸಿದರು. ಅವರ ಕಾದಂಬರಿಗಳಲ್ಲಿ ಸಾಮಾಜಿಕ ಚಿತ್ರಣ ಜೀವಂತವಾಗಿರುವುದನ್ನು ಕಾಣಬಹುದು.

ನಂತರದಲ್ಲಿ ವಾಸ್ತವಮಾರ್ಗದ ಸಾಮಾಜಿಕ ಕಾದಂಬರಿ ನಮ್ಮಲ್ಲಿ ಹೆಚ್ಚು ಮಹತ್ವದ ಸ್ಥಾನವನ್ನು ಪಡೆಯಿತು. ಸಾಹಿತ್ಯ ಸಾಮಾನ್ಯ ಜನತೆಯ ಜೀವನದುಸಿರಾಗಬೇಕೆಂಬುದು ಹೊಸ ಸಾಹಿತ್ಯದ ಪ್ರತಿಜ್ಞೆಯಾಗಿತ್ತು. ಮಧ್ಯಮ ವರ್ಗದ ಸಮಾಜದಿಂದ ಮೂಡಿಬಂದ ಲೇಖಕರು ಆ ವರ್ಗದ ಆಕಾಂಕ್ಷೆಗಳನ್ನು ಪ್ರಕಟಗೊಳಿಸಲು ಅಣಿಯಾದರು. ಇಂಥ ಸಮಯದಲ್ಲಿ ಅ.ನ.ಕೃಷ್ಣರಾಯರು ತಮ್ಮ ಕಾದಂಬರಿಗಳ ಮೂಲಕ ಒಂದು ಪರಂಪರೆಯನ್ನು ನಿರ್ಮಿಸಿಬಿಟ್ಟರು. ಇವರ ಕಾದಂಬರಿಗಳೆಂದರೆ 'ಸಂಧ್ಯಾರಾಗ', ಉದಯರಾಗ, ಮಂಗಳಸೂತ್ರ, ನಟಸಾರ್ವಭಾಮ, ನಗ್ನ ಸತ್ಯ ಮುಂತಾದ 112 ಕಾದಂಬರಿಗಳನ್ನು ಬರೆದು ಪರಂಪರೆಯನ್ನು ಸೃಷ್ಟಿಸುವಷ್ಟು ಪ್ರಭಾವ ಬೀರಿದರು. ಆಕರ್ಷಕವಾದ ಕಥಾನಕಶೈಲಿ ಹಾಗೂ ಮನೋಹರವಾದ ಸಂಭಾಷಣೆ ಈ ವಿಷಯದಲ್ಲಿ ಅ.ನ.ಕೃ. ನಮ್ಮ ಎಲ್ಲ ಬರಹಗಾರರಲ್ಲಿ ಶ್ರೇಷ್ಟರಾಗಿದ್ದಾರೆ. ಬರವಣಿಗೆಯ ಕಲೆ ಅವರಿಗೆ ನಿಸರ್ಗದತ್ತವಾದ ಕಾಣಿಕೆಯಾಗಿದೆ. ಬೇಸರ ಹುಟ್ಟಿಸದಂತೆ ಅವರು ಕತೆ ಹೇಳಬಲ್ಲರು. ಓದುಗರ ಆತ್ಮೀಯತೆಯನ್ನು ಸೆರೆಹಿಡಿಯಬಲ್ಲವರು. ಇವರು ಪ್ರಗತಿಶೀಲ ಚಳುವಳಿಯ ನಾಯಕರಾಗಿ ಹಲವು ವಾದ ವಿವಾದಕ್ಕೆ ಕೇಂದ್ರ ಬಿಂದುವಾಗಿ, ಸವಾಲನ್ನು ಸ್ವೀಕರಿಸಿದರು. ಕೃಷ್ಣರಾಯರು ಕಾದಂಬರಿಯ ಎಲ್ಲೆಯನ್ನು ವಿಶಾಲಗೊಳಿಸಿದ್ದಲ್ಲದೆ, ಕುಟುಂಬ ಜೀವನ ಗ್ರಾಮಜೀವನ, ನಗರ ಜೀವನ, ಕಾರ್ಮಿಕರ ಜೀವನ, ಅಸ್ಪೃಶ್ಯತೆ, ಕಾಮಜೀವನ ಎಲ್ಲವನ್ನೂ ಕಾದಂಬರಿಯ ಪರಿಧಿಯಲ್ಲಿ ತರಲು ಯತ್ನಿಸಿದರು. ಕಾದಂಬರಿಯನ್ನು ಸಮಸ್ಯೆಗಳ ನಿರೂಪಣೆಗೂ ಸಾಮಾಜಿಕ ಕ್ರಾಂತಿಗೂ ಸಾಧನವನ್ನಾಗಿ ಬಳಸಿದರು. ಕಾದಂಬರಿಗೆ ಸಾವಿರಾರು ಓದುಗರನ್ನು ಆಕರ್ಷಿಸಿದ್ದು ಅ.ನ.ಕೃ. ಅವರ ಕೊಡುಗೆ.

ಗೋಕಾಕರು 1931 ರಲ್ಲಿ ಇಜ್ಜೋಡು (ಸಮರಸವೇ ಜೀವನ) ಎಂಬ ಕಾದಂಬರಿ ಪ್ರಕಟಿಸಿದರು. ವಿಷಮದಾಂಪತ್ಯದಲ್ಲಿ ಬೆಂದು ಹೋದ ಸಹನೆಯ ಮೂರ್ತಿ ಪದ್ಮಾವತಿಯ ಕಥೆ ಕಾದಂಬರಿಯ ಕೇಂದ್ರ ಬಿಂದು. ಇಡೀ ಕಾದಂಬರಿ ಪಯಣದ ಅನುಭವವನ್ನು ಕೊಡುತ್ತದೆ. ಇದರಲ್ಲಿ ಬೌದ್ಧಿಕಾಂಶ ಎದ್ದು ಕಾಣುತ್ತದೆ.

ನಾಟಕಕಾರರೆಂದೇ ಪ್ರಸಿದ್ಧರಾಗಿರುವ ಶ್ರೀರಂಗರು ಹಲವು ಕಾದಂಬರಿಗಳನ್ನು ಬರೆದಿದ್ದಾರೆ. ನಾಟಕಗಳನ್ನು ಬರೆಯದೇ ಹೋಗಿದ್ದರೆ, ಕಾದಂಬರಿಕಾರರೆಂದೇ ಗಮನ ಸೆಳೆಯುತ್ತಿದ್ದರು. ವಿಶ್ವಾಮಿತ್ರ ಸೃಷ್ಟಿ, ಪುರುಷಾರ್ಥ, ಪ್ರಕೃತಿ, ಅನಾದಿ, ವಿಷ ಚಕ್ರವ್ಯೂಹ ಮುಂತಾದ ಹತ್ತು ಕಾದಂಬರಿಗಳನ್ನು ಬರೆದಿದ್ದಾರೆ. ಶ್ರೀರಂಗರ ಕಾದಂಬರಿಗಳಲ್ಲಿ ತಂತ್ರದ ಹೊಸ ಹೊಸ ಪ್ರಯೋಗಗಳನ್ನು ಕಾಣಬಹುದು. 'ಪ್ರಕೃತಿ-ಪುರುಷ' ದಲ್ಲಿ ಸಮಕಾಲೀನ ಸಮಾಜದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಏರುಪೇರುಗಳ ಚಿತ್ರಣವಿದೆ. ಮೂರು ತಲೆಮಾರುಗಳ ಬದುಕಿನ ಈ ನಿರೂಪಣೆಯಲ್ಲಿ ಸಮಾಜದಲ್ಲಿ ಮೇಲ್ವರ್ಗದಲ್ಲಿದ್ದ ಕುಟುಂಬ ಕೆಳಕ್ಕೆ ಇಳಿಯುತ್ತದೆ. ಕೆಳಗಿದ್ದ ಕುಟುಂಬ ಮೇಲೇರುತ್ತದೆ. ಈ ನಿರೂಪಣೆಯ ಮೂಲಕ ಶ್ರೀರಂಗರು ಈ ಸಮಾಜದಲ್ಲಿ ಪ್ರಭಾವ ಬೀರುವ ಶಕ್ತಿಗಳನ್ನು ವಿಶ್ಲೇಷಿಸುತ್ತಾರೆ. ಶ್ರೀರಂಗರು ಕನ್ನಡದಲ್ಲಿ ಅಪೂರ್ವವಾದ ತಾತ್ವಿಕ ಕಾದಂಬರಿಗಳನ್ನು ಕೊಟ್ಟರು. ಅವರ ಕಾದಂಬರಿಗಳಲ್ಲಿ ತಂತ್ರದ ಹೊಸ ಹೊಸ ಪ್ರಯೋಗಗಳುಂಟು.

ದೇವುಡು ನರಸಿಂಹಶಾಸ್ತ್ರಿ ಇನ್ನೊಬ್ಬ ಕನ್ನಡದ ಧೀಮಂತ ಕಾದಂಬರಿಕಾರರು. ಇವರ 'ಅಂತರಂಗ' ವನ್ನು ಕನ್ನಡದ ಮೊಟ್ಟಮೊದಲು ಮನೋವಿಶ್ಲೇಷಣಾತ್ಮಕ ಕಾದಂಬರಿ ಎನ್ನಬಹುದು. ಇದು ಕಾಮ ಜೀವನದ ಸಮಸ್ಯೆಯನ್ನು ಕುರಿತದ್ದಾಗಿದ್ದು ಇವರ ಮುಂದಿನ ಕಾದಂಬರಿಗಳಿಗೂ ಇದೇ ವಸ್ತುವನ್ನು ಎತ್ತಿಕೊಂಡರು. ಮಹಾಬ್ರಾಹ್ಮಣ, ಮಹಾಕ್ಷತ್ರಿಯ, ಮಹಾದರ್ಶನ ಅವರ ಬೃಹತ್ ಕಾದಂಬರಿಗಳು. ತಮ್ಮ ಕಾದಂಬರಿಗಳಲ್ಲಿ ಪೌರಾಣಿಕ ಪಾತ್ರಗಳನ್ನು ಸೃಷ್ಟಿಸಿ, ಬೆರಗುಗೊಳಿಸುವ ಪ್ರತಿಭೆಯನ್ನು ತೋರುತ್ತಾರೆ.

ಕುವೆಂಪು ಅವರ ಶ್ರೇಷ್ಠ ಹಾಗೂ ಬೃಹತ್ ಕಾದಂಬರಿಗಳೆಂದರೆ, 'ಕಾನೂರು ಸುಬ್ಬಮ್ಮ ಹೆಗ್ಗಡತಿ ಮತ್ತು ಮಲೆಗಳಲ್ಲಿ ಮದುಮಗಳು. ಕಾನೂರು ಸುಬ್ಬಮ್ಮ ಹೆಗ್ಗಡತಿ 1936 ರಲ್ಲಿ ಪ್ರಕಟವಾಯಿತು. ಇಲ್ಲಿ ಇವರು ಮಲೆನಾಡಿನ ಪ್ರಾಂತ್ಯದ ಹಳ್ಳಿಗಾಡಿನ ಜೀವನದ ಆವರಣದಲ್ಲಿ ಒಂದು ಸೂಕ್ಷ್ಮ ಚೇತನ ಅರಳುವುದನ್ನು ಚಿತ್ರಿಸುತ್ತಾರೆ. ಮಲೆನಾಡಿನ ನಿಸರ್ಗ, ಜನಜೀವನ, ಸಂಜೆ ಮುಂಜಾನೆಗಳು, ಪ್ರಾಣಿ ಪಕ್ಷಿಗಳು ಓದುಗರ ಅನುಭವಕ್ಕೆ ಬರುತ್ತದೆ. ವಾಸ್ತವ ಮಾರ್ಗದಲ್ಲಿ ಬಂದ ಬಹುಮುಖ್ಯ ಕಾದಂಬರಿಗಳಲ್ಲೊಂದು ಇವರ ಎರಡೂ ಕಾದಂಬರಿಗಳಿಗೂ ಸಜೀವ ಸಂಬಂಧವಿದೆಯೆನ್ನುವುದನ್ನು ಕಾಣಬಹುದು. ಇವೆರಡರ ಸಾಮಾಜಿಕ ಹಾಗೂ ಪ್ರಾಕೃತಿಕ ಪರಿಸರ ಒಂದೇ ಆಗಿದೆ.

ಈ ಎಲ್ಲ ಕಾದಂಬರಿಕಾರರು ಮನುಷ್ಯರಲ್ಲಿ ಘನತೆಯನ್ನು ಕಾಣಲು ಹೊರಟವರು. ಪ್ರಾಮಾಣಿಕವಾಗಿ ಅಂತಹ ಘನತೆಯುಂಟು ಎಂದು ನಂಬಿದವರು. ಆನಂದಕಂದ, ಗೋಕಾಕ, ಕುವೆಂಪು ಅವರ ಕಾದಂಬರಿಗಳಲ್ಲಿ ಇದು ಸ್ಪಷ್ಟವಾಗಿದೆ. ಕಾರಂತರ ಕಾದಂಬರಿಗಳಲ್ಲಿ ಹುದುಗಿದೆ. ಈ ಎಲ್ಲ ಕಾದಂಬರಿಕಾರರು ಕೆಲವು ಪಾತ್ರಗಳಲ್ಲಿ ಸಹಾನುಭೂತಿ ತಳೆದವರು. ಶ್ರೀರಂಗ, ಕಾರಂತ ಮೊದಲಾದವರು ಪಾತ್ರದ ವಿವಿಧ ಮುಖಗಳನ್ನು ಕಾಣುತ್ತಾರೆ.

ಪ್ರಗತಿ ಶೀಲ ಚಳುವಳಿ ಮುಖ್ಯವಾಗಿ ಫಲ ನೀಡಿದ್ದು ಕಾದಂಬರಿ, ಸಣ್ಣ ಕತೆಗಳಲ್ಲಿ. ಅ.ನ.ಕೃ. ತಮ್ಮ ಸಾಹಿತ್ಯ ರಚನೆಗೆ ಅಶ್ಲೀಲ ಎಂದು ಯಾವ ವಿಷಯವನ್ನು ಹೊರಗಿಡಲಿಲ್ಲ. ಸಮಾಜದ ಅನೇಕ ಸಮಸ್ಯೆಗಳನ್ನು ವಸ್ತುವನ್ನಾಗಿ ದುಡಿಸಿಕೊಂಡರು. ಅನಕೃ ಕಾದಂಬರಿ ಲೋಕವನ್ನು ವಿಸ್ತರಿಸಿದ್ದಲ್ಲದೆ ಹೊಸ ಹೊಸ ವಸ್ತುಗಳನ್ನು ಆರಿಸಿ, ನಿಸ್ಸಂಕೋಚವಾಗಿ ಬರೆಯುವುದನ್ನು ಸಾಧ್ಯಮಾಡಿಕೊಟ್ಟರು. ತ.ರಾ.ಸು. ನಿರಂಜನ, ಅರ್ಚಕ ವೆಂಕಟೇಶ, ನಾಡಿಗೇರ ಕೃಷ್ಣರಾವ್, ಬಸವರಾಜ ಕಟ್ಟೀಮನಿ ಮುಂತಾದವರೆಲ್ಲ ಪ್ರಗತಿಶೀಲ ಮಾರ್ಗದಲ್ಲಿ ಬರೆದರು. ತ.ರಾ.ಸು. ಮುಂಜಾವಿನಿಂದ ಮುಂಜಾವು, ಪುರುಷಾವತಾರ, ಹಂಸಗೀತೆ, ಬಿಡುಗಡೆಯ ಬೇಡಿ ಮುಂತಾದವುಗಳನ್ನು ರಚಿಸಿದರು. ಕಟ್ಟೀಮನಿಯವರು ಮೋಹದ ಬಲೆಯಲ್ಲಿ, ಜರತಾರಿ ಜಗದ್ಗುರು, ಖಾನಾವಳಿಯ ನೀಲ ಮುಂತಾದವನ್ನು ಬರೆದರು. ನಿರಂಜನರು–ಚಿರಸ್ಮರಣೆ, ಮೃತ್ಯುಂಜಯ .ಬರೆದರು. ಇವರ ಚಿರಸ್ಮರಣೆ ಕನ್ನಡದ ಪ್ರಮುಖ ಕಾದಂಬರಿಗಳಲ್ಲೊಂದಾಗಿದೆ.

1934 ರಷ್ಟು ಹಿಂದೆಯೇ ಪ್ರಕಟವಾದ ಶ್ರೀರಂಗರ 'ವಿಶ್ವಾಮಿತ್ರ – ಸೃಷ್ಟಿ'ಯೇ ಕನ್ನಡದ ಮೊದಲ ನವ್ಯ ಕಾದಂಬರಿ ಎಂದು ಹೇಳಬಹುದು. ಅದು ತನ್ನ ಕಾಲಕ್ಕಿಂತ ಬಹಳ ಮುಂದುವರಿದಿದ್ದರಿಂದ ಆ ಕಾಲದಲ್ಲಿ ವಿಶೇಷ ಗಮನವನ್ನು ಸೆಳೆಯಲಿಲ್ಲ. 1956 ರಲ್ಲಿ ಪ್ರಕಟವಾದ ಶಂಕರ ಮೊಕಾಶಿಯವರ 'ಗಂಗವ್ವ ಮತ್ತು ಗಂಗಾಮಾಯಿ' ನವ್ಯ ಕಾದಂಬರಿಗಳ ಪರಂಪರೆಯಲ್ಲಿ ಬಂದು ವಿಪರೀತ ಪ್ರಯೋಗ. ಮೊಕಾಶಿಯವರು ಎಂದಿನಿಂದಲೂ ನವ್ಯ ಲೇಖಕರ ಫ್ಯಾಶನೆಬಲ್ ನೀತಿಗಳನ್ನು ಖಂಡಿಸುತ್ತಾ ಬಂದಿದ್ದಾರೆ. ಅವರದು ಒಂದು ರೀತಿಯ ವಿಪರೀತ ಪ್ರತಿಭೆ. ನಾಲ್ಕು ಜನ ಹಳೆಯದೆಂದು ಕಡೆಗಣಿಸಿದ್ದರಲ್ಲೆ ಅವರು ಹೊಸ ಅವಕಾಶಗಳನ್ನು ಕಾಣಿಸಬಲ್ಲರು. ಇವರ ಕಾದಂಬರಿಯಲ್ಲಿ ಸಾಂಪ್ರದಾಯಿಕ ಬರವಣಿಗೆಯ ರೀತಿಗಳನ್ನು ಅನುಸರಿಸಿದ್ದಾರೆ.

1961 ರಲ್ಲಿ ಪ್ರಕಟವಾದ ಶಾಂತಿನಾಥ ದೇಸಾಯಿಯವರ 'ಮುಕ್ತಿ' ಎಲ್ಲ ರೀತಿಯಿಂದಲೂ ನವ್ಯವಾದ ಮೊದಲ ಕನ್ನಡ ಕಾದಂಬರಿ ಎನ್ನಬಹುದು. 1957 ರಲ್ಲಿ ಪ್ರಕಟವಾದ ರಾವ್ ಬಹದ್ದೂರರ 'ಗ್ರಾಮಾಯಣ' ಕನ್ನಡದ ಉತ್ತಮ ಕಾದಂಬರಿಗಳಲ್ಲಿ ಒಂದು. ಇಲ್ಲಿ ವ್ಯಕ್ತಿಗಳ ಹೊಣೆಗೇಡಿತನ, ಸ್ವಾರ್ಥ, ಮೂರ್ಖತನ ಹಳ್ಳಿಯ ಜೀವನದ ಸುತ್ತ ವಿನಾಶದ ಬಲೆಯನ್ನು ನೇಯುತ್ತವೆ. ಈ ಕಾದಂಬರಿಯಲ್ಲಿ ಎಪ್ಪತ್ತೊಂಬತ್ತು ಪಾತ್ರಗಳಿರುವುದು ವಿಶಿಷ್ಟವಾಗಿದೆ.

ನವೋದಯ ಸಾಹಿತ್ಯ ಇಂಗ್ಲಿಷ್ ಸಾಹಿತ್ಯದ ಶೇಕ್ಸ್‌ಪಿಯರ್, ಮಿಲ್ಟನ್, ವಾಲ್ಟರ್, ಸ್ಕಾಟ್‌ರ ಪ್ರಭಾವಕ್ಕೆ ಒಳಗಾದರೆ, ಪ್ರಗತಿಶೀಲ ಸಾಹಿತ್ಯ ಫ್ರಾನ್ಸಿನ ಮೊಪಾಸ್, ಎಮಿಲಿ ಜೋಲಾ, ನಾರ್ವೆಯ ಇಬ್ಸನ್, ರಷ್ಯದ ಮ್ಯಾಕ್ಸಿಂ ಮುಂತಾದವರ ಪ್ರಭಾವಕ್ಕೆ ಒಳಗಾಯಿತು. ಅದೇ ರೀತಿ ನವ್ಯ ಸಾಹಿತ್ಯ ಇಂಗ್ಲೆಂಡಿನ ಲಾರೆನ್ಸ್, ಬೆಕೆಟ್, ಅಮೇರಿಕಾದ ಸ್ಯಾಲಿಂಗರ್, ಫ್ರಾನ್ಸಿನ ಕಮೂ, ಜರ್ಮನಿಯ ಫ್ರಾನ್ಸ್ ಕಾಫ್ಕಾ ಮೊದಲಾದವರ ಪ್ರಭಾವಕ್ಕೆ ಒಳಗಾಯಿತು.

ನವ್ಯ ಕಾಲಘಟ್ಟದಲ್ಲಿ ಲಂಕೇಶ್, ತೇಜಸ್ವಿ ಯು.ಆರ್. ಅನಂತಮೂರ್ತಿ, ಯಶವಂತ ಚಿತ್ತಾಲ, ಶ್ರೀಕೃಷ್ಣ ಆಲನಹಳ್ಳಿ, ಬಿ.ವಿ. ವೈಕುಂಠರಾಜು, ಎಸ್.ಎಲ್.ಭೈರಪ್ಪ – ಮುಂತಾದವರು ಪ್ರಮುಖ ಕಾದಂಬರಿಕಾರರಾಗಿದ್ದಾರೆ. ಇಲ್ಲಿ ಅನಂತಮೂರ್ತಿಯವರ 'ಸಂಸ್ಕಾರ', 'ಭಾರತೀಪುರ', ಲಂಕೇಶರ 'ಬಿರುಕು' 'ಮುಸ್ಸಂಜೆ' ಕಥಾ ಪ್ರಸಂಗ, ಚಿತ್ತಾಲರ 'ಮೂರು ದಾರಿಗಳು', ತೇಜಸ್ವಿಯವರ 'ಜುಗಾರಿ ಕ್ರಾಸ್' 'ಚಿದಂಬರ ರಹಸ್ಯ' ಆಲನಹಳ್ಳಿಯವರ 'ಕಾಡು' 'ಪರಸಂಗದ ಗೆಂಡೆ ತಿಮ್ಮ', 'ಭುಜಂಗಯ್ಯನ ದಶಾವತಾರಗಳು', ಭೈರಪ್ಪನವರ 'ಗೃಹಭಂಗ', ವಂಶವೃಕ್ಷ ದಾಟು, ಮಂದ್ರ, ಧರ್ಮಶ್ರೀ ಮುಂತಾದ ಪ್ರಸಿದ್ಧ ಕಾದಂಬರಿಗಳನ್ನು ರಚಿಸಿದ್ದಾರೆ.

ಹೀಗೆ ಅತಿ ಹೆಚ್ಚು ಕಾದಂಬರಿಗಳು ನವ್ಯ ಕಾಲಘಟ್ಟದಲ್ಲಿ ರಚಿತವಾಗಿದ್ದು, ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆಯನ್ನು ನೀಡಿವೆ. ನವ್ಯೋತ್ತರ ಸಂದರ್ಭದಲ್ಲಿ ಕನ್ನಡ ಸಾಹಿತ್ಯದಲ್ಲಿ ನಡೆದ ಮುಖ್ಯ ಘಟನೆಯೆಂದರೆ ದಲಿತ , ಬಂಡಾಯ ಚಳವಳಿ. ಈ ಕಾಲದಲ್ಲಿ ರಚಿತವಾದ ದೇವನೂರು ಮಹಾದೇವರ 'ಒಡಲಾಳ' 'ಕುಸುಮಬಾಲೆ', ಅರವಿಂದ ಮಾಲಗತ್ತಿಯವರ 'ಕೌರ್ಯ', ಮನಜ ಅವರ 'ಮಾಗಿ' ಕಾದಂಬರಿಗಳು ಪ್ರಮುಖವಾದವುಗಳು. ಅಲ್ಲದೆ ಬರಗೂರು ರಾಮಚಂದ್ರಪ್ಪ, ಕುಂ.ವೀರಭದ್ರಪ್ಪ, ವಾಲೀಕಾರ ಮೊದಲಾದವರು ಒಳ್ಳೆಯ ಕಾದಂಬರಿಗಳನ್ನು ರಚಿಸಿದ್ದಾರೆ.

ಈ ಮಧ್ಯೆ ಅನೇಕ ಲೇಖಕಿಯರು ಕಾದಂಬರಿ ಸಾಹಿತ್ಯ ಪ್ರಕಾರವನ್ನು ಶ್ರೀಮಂತಗೊಳಿಸಿದ್ದಾರೆ. ತ್ರಿವೇಣಿಯವರು ಕನ್ನಡ ಸಾಹಿತ್ಯ ಲೋಕಕ್ಕೆ ವಿಶಿಷ್ಟ ಕೊಡುಗೆಯನ್ನು ನೀಡಿದರು. ಅಂದಿನ ಸಮಯದಲ್ಲಿ ಸ್ತ್ರೀಯರು ಬರೆಯದೆ ಇದ್ದ ಕಾಲದಲ್ಲಿ ಬರೆಯಲು ಪ್ರಾರಂಭಿಸಿ, ಅಪಾರ ಜನಮನ್ನಣೆಯನ್ನು ಗಳಿಸಿದರು. ಬೆಕ್ಕಿನ ಕಣ್ಣು, ಶರಪಂಜರ, ಹಣ್ಣೆಲೆ ಚಿಗುರಿದಾಗ ಮುಂತಾದ ಉತ್ತಮ ಕಾದಂಬರಿಗಳನ್ನು ರಚಿಸಿದ್ದಾರೆ. ತ್ರಿವೇಣಿಯವರ ನಂತರ ಕನ್ನಡದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಬರೆಯಲು ಪ್ರಾರಂಭಿಸಿದರು. 'ಫಣಿಯಮ್ಮ' 'ತುಂಗಭದ್ರ' , 'ಗೆಜ್ಜೆ ಪೂಜೆ' ಮೊದಲಾದ ಒಳ್ಳೆಯ ಕಾದಂಬರಿಗಳನ್ನು ಎಂ.ಕೆ.ಇಂದಿರಾ ಬರೆದರು. ಇದೇ ರೀತಿ ಅನುಪಮಾ ನಿರಂಜನ, ಪುಷ್ಪ, ಪಾರ್ವತಿ, ಸಿ.ಎನ್. ಮುಕ್ತಾ ಮುಂತಾದವರು ಹೆಚ್ಚು ಕಾದಂಬರಿಗಳನ್ನು ರಚಿಸಿದರು.

ಇತ್ತೀಚಿನ ದಶಕಗಳಲ್ಲಿ ವೀಣಾ ಶಾಂತೇಶ್ವರ ಸಾರಾಅಬೂಬಕರ್, ಬಿ.ಟಿ. ಲಲಿತಾನಾಯಕ್ ಮುಂತಾದವರು ಹೆಚ್ಚು ಜನಪ್ರಿಯರಾಗಿದ್ದಾರೆ. ವೀಣಾ ಅವರ ತಮ್ಮ ಕಾದಂಬರಿಗಳಲ್ಲಿ ಇಂದಿನ ವ್ಯವಸ್ಥೆಯಲ್ಲಿ ಹೆಣ್ಣು ಹೇಗೆ ಶೋಷಣೆಗೆ ಒಳಗಾಗಿದ್ದಾಳೆ ಎಂಬುದನ್ನು ಚಿತ್ರಿಸಿದ್ದಾರೆ. ಸಾರಾ ಅವರು ಮುಸ್ಲಿಂ ಸಂವೇದನೆಯ ಹಿನ್ನೆಲೆಯಲ್ಲಿ 'ವಜ್ರಗಳು' 'ಚಂದ್ರಗಿರಿಯ ತೀರದಲ್ಲಿ' ಮುಸ್ಲಿಂ ಧರ್ಮದ –ನಿಯಮಗಳು ಹೇಗೆ ಹೆಣ್ಣಿನ ಬಾಳಿಗೆ ಮುಳ್ಳಾಗಿವೆ ಎಂಬುದನ್ನು ಚಿತ್ರಿಸಿದ್ದಾರೆ. ಬಿ.ಟಿ.ಲಲಿತಾನಾಯಕ್ ಅವರು ಸಮಾಜದಲ್ಲಿ ಹೆಣ್ಣಿಗಾಗುತ್ತಿರುವ ಶೋಷಣೆಯನ್ನು ಪರಿಣಾಮಕಾರಿಯಾಗಿ ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ.

ಹೀಗೆ ಕನ್ನಡ ಕಾದಂಬರಿ ಪರಂಪರೆಗೆ ತನ್ನದೆ ಆದ ಇತಿಹಾಸವಿದ್ದು, ತನ್ನದೇ ಆದ ವಿಶಿಷ್ಟತೆಯನ್ನು ಉಳಿಸಿಕೊಂಡು ಸಮೃದ್ಧವಾಗಿ ಇಂದೂ ಸಹ ಬೆಳೆಯುತ್ತಿದೆ.

ಅಡಿ ಟಿಪ್ಪಣಿ

1. ಎಲ್.ಎಸ್. ಶೇಷಗಿರಿರಾವ್ : ಹೊಸಗನ್ನಡ ಸಾಹಿತ್ಯ ಚರಿತ್ರೆ :

    ಅಂಕಿತ ಪುಸ್ತಕ 2002, ಪುಟ 138

3. ನವ್ಯ ಕಾಲಘಟ್ಟದಲ್ಲಿ ಶ್ರೀ ಕೃಷ್ಣ ಆಲನಹಳ್ಳಿ ಮತ್ತು ಪಿ.ಲಂಕೇಶರ ಕಾದಂಬರಿಗಳು

ಶ್ರೀಕೃಷ್ಣ ಆಲನಹಳ್ಳಿಯವರು ಒಟ್ಟು ಮೂರು ಕಾದಂಬರಿಗಳನ್ನು ರಚಿಸಿದ್ದಾರೆ. ಕ್ರಮವಾಗಿ ಕಾಡು, ಪರಸಂಗದ ಗೆಂಡೆ ತಿಮ್ಮ ಭುಜಂಗಯ್ಯನ ದಶಾವತಾರಗಳಾಗಿದ್ದು, ಇವರ ಎಲ್ಲಾ ಕೃತಿಗಳನ್ನು ಪ್ರಮುಖವಾದುದು 'ಕಾಡು' ಕಾದಂಬರಿ, ಇದರ ಶ್ರೇಷ್ಠತೆಯಿರುವುದು ನವ್ಯಕಾದಂಬರಿಯಾಗಿಲ್ಲದೆ, ಒಂದು ಸಮೂಹದ ಕ್ರೌರ್ಯವನ್ನು ಚಿಕ್ಕ ಬಾಲಕನೊಬ್ಬನ ಮುಗ್ಧ ದೃಷ್ಟಿಕೋನದಿಂದ ತೋರಿಸುವ ಸೃಜನಶೀಲತೆಯಲ್ಲಿಯೇ ಆಗಿದೆ.

'ಕಾಡು' ಒಂದು ಆಕರ್ಷಕವಾದ ಕಿರು ಕಾದಂಬರಿ. ಇದರ ಚೆಲುವೆಲ್ಲ ಮುಗ್ಧ ಹುಡುಗನೊಬ್ಬನ ದೃಷ್ಮಿಕೋನದ ಮೂಲಕ ಪ್ರಕಟವಾಗಿರುವ ವಿವರಗಳ ಪ್ರಪಂಚದಲ್ಲಿದೆ. ಮಗುವಿನ ದೃಷ್ಟಿಕೋನದ ಮೂಲಕ ಕಥೆ ಹೇಳುವ ವಿಧಾನ ಈಚೆಗೆ ಜನಪ್ರಿಯವಾಗಿದೆ. ಮಗುವಿನ ಮುಗ್ಧತೆ, ದೊಡ್ಡವರ ನೈತಿಕ ಮೌಲ್ಯಗಳ ಮೌಲ್ಯಗಳ ಅರ್ಥವಾಗದ ಗೊಂದಲ, ಕುತೂಹಲದ ಸಣ್ಣ, ದೊಡ್ಡವರ ಜಗತ್ತಿನಲ್ಲಿ ಪ್ರವೇಶಿಸಿ ಬಯಸಿದಾಗ ಆಗುವ ಆಭಾಸದಲ್ಲಿ ಹುಟ್ಟುವ ಹಾಸ್ಯ, ಹೆಚ್ಚು ಜಿವನ ಸಮ್ಮತವಾದ ದೃಷ್ಟಿ ಈ ಎಲ್ಲ ಆಶಯಗಳನ್ನು ರೋಮ್ಯಾಂಟಿಕ್‌ಗೊಳಿಸಿ ಆಲನಹಳ್ಳಿಯವರು ಬಳಸಿಕೊಂಡಿದ್ದಾರೆ.

'ಕಾಡು' ಒಂದು ಧ್ಯಾನದಂತಿದೆ. ಗಾಢವಾದ ಧ್ಯಾನ, ಅಚ್ಚರಿ ಎಂದರೆ ಇದು ಇಂದ್ರಿಯ ಪ್ರಪಂಚದ ಪ್ರವೃತ್ತಿ ಪ್ರಪಂಚದ ಧ್ಯಾನ. ಧ್ಯಾನ ಹೇಗೆಂದರೆ ಇಲ್ಲಿನ ಮಂಡನೆ, ಆಯ್ಕೆ ಮತ್ತು ಆಯ್ಕೆಯ ಹಿಂದಿರುವ ಮೌಲ್ಯಗಳನ್ನು ದಾಟಿ ಮಾಡಿರುವ ಮಂಡನೆ ಯಾಗಿರುವುದರಿಂದ ಅನಂತಮೂರ್ತಿ, ತೇಜಸ್ವಿ ಇಂಥ ಕತೆಗಳನ್ನು ಬರೆದಿರುವರಾದರೂ ಮತ್ತು ಈ ಲೇಖಕರದು ಕಲೆಗಾರಿಕೆಯನ್ನು ಮೇಲ್ದರ್ಜೆಯಾದರೂ 'ಕಾಡು' ಅನನ್ಯ ವಾಗಿರುವುದು ತನ್ನ ನಿಬಿಡ ಅನುಭವಗಳ ಮೌಲ್ಯನಿರಪೇಕ್ಷ ದಾಖಲೆಯಲ್ಲೆ. ಮನುಷ್ಯನ ಮೂಲ ಪ್ರಕೃತಿಯ ಲೋಕಕ್ಕೆ ಧ್ಯಾನದ ಮೂಲಕ ಕೈ ಹಾಕಿದಾಗ ಮಾತ್ರ ಇಂಥ ಕೃತಿ ಸಾಧ್ಯ. ವೈಚಾರಿಕತೆಯ ಮುಲಕ ಕೈಹಾಕಿದಾಗ ಅಲ್ಲ."[1] ಎಂಬ ಮಾತುಗಳು 'ಕಾಡು'ವಿನ ವಿಶಿಷ್ಟತೆಯನ್ನು ಹೇಳುತ್ತವೆ.

‘ಕಾಡು’ ಹಲವು ಕಾರಣಗಳಿಂದ ಒಂದು ವಿಶಿಷ್ಟ ಕೃತಿ. ಇದನ್ನು ಹಲವು ರೀತಿಗಳಲ್ಲಿ ಅರ್ಥೈಸಬಹುದು. ಜಿ.ಎಸ್. ಆ ಮೂರರು ‘ಕಾಡು‘ ಕೃತಿಯನ್ನು ಕುರಿತು ಈ ರೀತಿ ವಿಶ್ಲೇಷಿಸಿದ್ದಾರೆ. “ನಾಗರೀಕತೆಯ ಶೋಧದಲ್ಲಿ ಮಾನವ ಬಹು ದೂರ ಬಂದಿದ್ದರೂ ಅವನ ಮೂಲ ಪ್ರವೃತ್ತಿಗಳಾದ ಕಾಮ, ದ್ವೇಷ, ಕ್ರೌರ್ಯಗಳು ಇನ್ನು ಆದಿಮ ಸ್ಥಿತಿಯಲ್ಲಿಯೇ ಇರುವುದು. ಅವನ ಜೀವನದ ಒಂದು ದುರಂತ. ಕೊನೆಯಿಲ್ಲದ ಈ ಅವಸ್ಥೆಯನ್ನೆ ಕೊಪ್ಪಲು, ಹುಣಸೂರು ಇಂಥ ಕಾಡಿನ ಮಧ್ಯದ ಗ್ರಾಮಗಳ ಪರಿಸರದಲ್ಲಿ ನಡೆಯುವ ಕ್ರಿಯೆಯ ಮೂಲಕ ಆಲನಹಳ್ಳಿ ಅಭಿನಯಿಸಿ ತೋರಿಸಿದ್ದಾರೆ. ಇಂಥ ವಸ್ತುವನ್ನು ಹೊಂದಿದ ಅವರ ಕಾದಂಬರಿಗೆ ಸಾರ್ವತ್ರಿಕತೆಯನ್ನು ಹುಡುಕಿಕೊಂಡು ಹೋಗುವ ಪ್ರಸಂಗವೇ ಬರುವುದಿಲ್ಲ”[2] ಎಂದಿದ್ದಾರೆ.

ಇದರ ತಂತ್ರ ಸ್ವರೂಪವನ್ನು ಕುರಿತು ಆ ಮೂರರು ತುಂಬ ಮಹತ್ವದ ಮಾತುಗಳನ್ನಾಡಿದ್ದಾರೆ. “ಇಲ್ಲಿ ಕಾದಂಬರಿಕಾರ ನೇರವಾಗಿ ಕತೆ ಹೇಳುವುದಿಲ್ಲ. ಒಬ್ಬ ಮುಗ್ಧ, ಆದರೆ ತುಂಬ ಸಂವೇದನಾಶೀಲನಾದ ಎಳೆ ವಯಸ್ಸಿನ ಬಾಲಕನ ಪ್ರಜ್ಞೆಯ ಮುಖಾಂತರ ಅದನ್ನು ನಮಗೆ ತಲುಪಿಸುತ್ತಾರೆ. ಕಿಟ್ಟಿಯ ಮುಗ್ಧತೆ ಮತ್ತು ಅವನ ಮೇಲೆ ಅಪ್ಪಳಿಸುವ ರಾಕ್ಷಸ ಲೋಕದ ಅನುಭವಗಳು ಇವುಗಳ ನಡುವಿನ ವಿರೋಧದಿಂದಾಗಿ ಕಾದಂಬರಿಯಲ್ಲಿ ಸಂಕೀರ್ಣತೆ ಹುಟ್ಟಿಕೊಳ್ಳುತ್ತದೆ ಕಿಟ್ಟಿಯ ಮನಸಿಕ ಬೆಳವಣಿಗೆ ಕೂಡ ಕತೆಯ ವಸ್ತುವಿನ ಮುಖ್ಯ ಭಾಗವಾಗಿದೆ. ಇಲ್ಲಿ ಸಂಕೇತಗಳನ್ನು ಬಳಸಿಕೊಳ್ಳುವ ನವ್ಯ ವಿಧಾನಗಳು ತುಂಬಾ ಯಶಸ್ವಿಯಾಗಿವೆ ಎಂದು ಆ ಮೂರರು ಅಭಿಪ್ರಾಯ ಪಡುತ್ತಾರೆ”[3].

‘ಕಾಡು’ ವಿನಲ್ಲಿನ ಕಿಟ್ಟಿಯ ಮೂಲಕ ಪ್ರಪಂಚವನ್ನು ನೋಡುವ ಪ್ರಯತ್ನದಿಂದ ಎದುರಾಗುವ ಪ್ರಸಂಗಗಳು, ಗ್ರಾಮಕ್ಕೆ ಹೊಸದಾಗಿ ಪ್ರವೇಶಿಸುವ ನಾಗರೀಕತೆಯ ಅಂಶಗಳು, ಪಂಚಾಯಿತಿ ಮೂಲಕ ಮಾಡುವ ಕೆಳವರ್ಗದ ಶೋಷಣೆ ಇವುಗಳು ಜೊತೆಗೆ ಇನ್ನೂ ಹಲವು ಅಂಶಗಳನ್ನು ಮುಗ್ಧ ಹುಡುಗನ ಮೂಲಕ ಚಿತ್ರಿಸಿರುವುದು ವಿಶಿಷ್ಟವಾಗಿದೆ. ಇದರ ವಿಶೇಷತೆಯಿರುವುದು ಈ ಅಂಶದಿಂದಲೇ ಆಗಿದೆ.

ಕಾಡುವಿನ ನಂತರ ಬರೆದ 'ಪರಸಂಗದ ಗೆಂಡೆತಿಮ್ಮ' ಇದರ ಮುಂದುವರೆದ ಭಾಗವಾಗಿಯೇ ಚಿತ್ರಿತವಾಗಿದೆ. 'ಕಾಡು' ಕಾದಂಬರಿಯಲ್ಲಿ ಊರವರು ಆಡುವ ನಾಟಕಕ್ಕೆ ಮಂಡ್ಯದಿಂದ ಡ್ರೆಸ್ಸು, ಸೀನರಿಗಳು ಬರುತ್ತವೆ. ಕೋಟೆ ಪೋಲಿಸರ ಪ್ರಸ್ತಾಪ ಬರುತ್ತದೆ. "ಪರಸಂಗದ ಗೆಂಡೆ ತಿಮ್ಮ" ದಲ್ಲಿ ಗೌವಳ್ಳಿಯ ಹೆಣ್ಣು ಮಗಳೊಬ್ಬಳು ಮೈಸೂರಿನ ಪಡುವಾರ ಹಳ್ಳಿಯ ಪ್ಯಾಟೆಯ ಒಬ್ಬ ಹುಡುಗನನ್ನು ಮದುವೆಯಾಗುತ್ತಾಳೆ. ಹೊರಜಗತ್ತಿಗೆ ಮೊದಲು ಗೆಂಡೆ ತಿಮ್ಮ ಮಾತ್ರ ತೆರೆದುಕೊಂಡು, ರತ್ನಿಯ ಮದುವೆಯಿಂದಾಗಿ ಆಗಮನದಿಂದ ಗೌವಳ್ಳಿಯ ಜನರ ಗುಪ್ತ ಬಯಕೆಗಳನ್ನೆಲ್ಲ ಅರಳಿಸಲು ಪ್ರಾರಂಭಿಸಿತು.

ಹಳ್ಳಿಯ ಜನ, ಅವರ ಬದುಕು, ನಂಬಿಕೆ, ಆಚಾರ, ವ್ಯವಹಾರ ಮಣ್ಣಿಗಂಟಿದ ಗುಣ–ದೋಷ, ಅದರ ಚೆಲುವು ಹೀಗೆ ಎಲ್ಲವನ್ನೂ ಸಮಗ್ರವಾಗಿ ಸೂಕ್ಷ್ಮವಾಗಿ ಅರ್ಥಪೂರ್ಣವಾಗಿ ಗ್ರಹಿಸಿರುವ ಪರಿಯನ್ನು ನಾವಿಲ್ಲಿ ಕಾಣಬಹುದಾಗಿದೆ.

ಕೆಲವು ಪಾತ್ರಗಳ ಕುಟುಂಬಗಳ, ಒಂದೆರಡು ಹಳ್ಳಿಗಳ ಬದುಕು ಇಲ್ಲಿ ಚಿತ್ರಿತವಾಗಿದ್ದರೂ, ಕಾದಂಬರಿಕಾರರ ಅವಲೋಕನ ಕೇಂದ್ರಿಕೃತವಾಗಿರುವುದು.

ಈ ಗ್ರಾಮೀನ ಬದುಕಿನಲ್ಲಿ ಬದಲಾವಣೆಯ ಕಿರು ಅಲೆಗಳು ಎದ್ದಿವೆ. ಬದಲಾವಣೆ ಎಂದರೆ ಕಣ್ಣು ಕೋರೈಸುವ ಬದಲಾವಣೆಗೆ, ಆರ್ಥಿಕ ಪಲ್ಲಟಗಳಲ್ಲ, ರಾಜಕೀಯ ಏರುಪೇರುಗಳೂ ಅಲ್ಲ. ಸಾಲುಂಡಿಯಲ್ಲಾಗಲಿ, ಮರಂದಿಯ ಉಳಿಮಾವಿನಲ್ಲಾಗಲಿ, ಗೌವ್ವಳಿಯಲ್ಲಾಗಲಿ ಇಂಥ ಅಲ್ಲೋಲ ಕಲ್ಲೋಲ ಮಾಡುವಂಥ ಬದಲಾವಣೆಗಳೇನೂ ನಡೆಯಲೆ ಇಲ್ಲ. ಅವೆಲ್ಲ ಮೊದಲಿನ ಹಾಗೇ ಅದೇ ಸ್ಥಿತಿಯಲ್ಲೇ ಉಳಿದಿವೆ. ಉತ್ತುವುದು – ಬಿತ್ತುವುದು. ಗೇಯುವುದು, ಮದುವೆಗಳು, ಪೂಜೆಗಳು, ದೇವರು ಮೈಮೇಲೆ ಬರುವುದು ಮುಂತಾದ ಕ್ರಿಯೆಗಳು ಯಾವ ಬದಲಾವಣೆಗಳು ಇಲ್ಲದೆ ಯಥಾಪ್ರಕಾರ ನಡೆಯುತ್ತಲೇ ಇವೆ. ಆದರೆ ಹೊಸ ನಾಗರೀಕಹೆಯ ತುಣುಕೊಂದು ಈ ಹಳ್ಳಿಗಳ ಹಿಂಬಾಗಿಲಿನಿಂದ ನುಸುಳಿ ಬಂದು, ಒಳಗೆ ಹರಿದು ಎಬ್ಬಿಸಿದ ಕಂಪನ ಈವರೆಗಿನ ಶಾಂತಿಯನ್ನು ನೆಮ್ಮದಿಯನ್ನು ಕದಡಿದೆ. ಗೆಂಡೆ ತಿಮ್ಮ ಮೈಸೂರಿನಿಂದ ಕೊಂಡು ತಂದು ಗೌವಳ್ಳಿಯ ಹರೆಯದ ಹೆಣ್ಣುಗಳಿಗೆ ಕದ್ದು ಮುಚ್ಚಿ ಮಾರಿದ ಸ್ನೋ, ಪೌಡರು, ಗಮನದೆಣ್ಣೆ, ಬುಡಿಲಂಗಗಳ ನಾಗರೀಕತೆ ಎಬ್ಬಿಸಿದ ಕಂಪನ ಈ ಬಗೆಯದು.

ಇಲ್ಲಿ ಗೆಂಡೆ ತಿಮ್ಮ–ಮರದಡಿಯರು ಮುಗ್ಧ ವ್ಯಕ್ತಿಗಳಾಗಿರುವಂತೆಯೇ ಸಂಕೇತಗಳೂ ಆಗಿದ್ದರೂ ಹೊಸ ನಾಗರಿಕತೆಯೊಂದರ ಪ್ರತಿರೂಪದಂತೆ ಆ ಹಳ್ಳಿಯಲ್ಲಿ ಕಾಣಿಸಿಕೊಳ್ಳುವ ಮರಂಕಿ ಹೊಸ ಮೌಲ್ಯಗಳ ಸಂಕೇತವೂ ಆಗಿದ್ದಾಳೆ. ಒಳಗೆ ಪ್ರತಿರೂಪ ಇಟ್ಟುಕೊಂಡೇ ಈ ಹೊಸತನಕ್ಕೆ ತನ್ನನ್ನು ಒಪ್ಪಿಸಿಕೊಳ್ಳುವ ಗೆಂಡೆ ತಿಮ್ಮ ಹಳೆಯ ಸಂಪ್ರದಾಯ ಮೌಲ್ಯಗಳ ಸಂಕೇತದಂತೆಯೂ ಚಿತ್ರಿತವಾಗುತ್ತಾನೆ. ಇವರಿಬ್ಬರ ನಡುವಣ ಸಂಘರ್ಷ – ತಿಕ್ಕಾಟಗಳೇ, ಪರಿವರ್ತನೆಯ ಸಂಕ್ರಮಣ ಸ್ಥಿತಿಯೊಂದರಲ್ಲಿ ಸಮಾಜ ಕಂಡು ಕೊಳ್ಳುವ ಸಂಘರ್ಷ – ತಿಕ್ಕಾಟವಾಗಿಯೂ ಕಂಡು ಬರುತ್ತದೆ. ಹೀಗೆ ಈ ಕಾದಂಬರಿಯು ಒಂದು ಘಟ್ಟದಿಂದ ಇನ್ನೊಂದು ಘಟ್ಟಕ್ಕೆ ತನ್ನ ಅರ್ಥವ್ಯಾಪ್ತಿಯನ್ನು ಹರಡಿ ಬೆಳೆಯುತ್ತ ಹೋಗುತ್ತದೆ.

'ಕಾಡು'ವಿನಲ್ಲಿ ಅಸ್ಪಷ್ಟವಾಗಿ ಕಾಣಿಸಿಕೊಂಡಿದ್ದ ಆಧುನೀಕರಣದ ಪ್ರಕ್ರಿಯೆ 'ಗೆಂಡೆ ತಿಮ್ಮ' ದಲ್ಲಿ ಹೆಚ್ಚು ಮೂರ್ತವಾಗುತ್ತಾ ಬೆಳೆದರೆ ಕೃಷ್ಣರ ಮೂರನೆಯ ಕಾದಂಬರಿ 'ಭುಜಂಗಯ್ಯನ ದಶಾವತಾರಗಳು' ದಲ್ಲಿ ಒಂದು ಪ್ರಜ್ಞಾಪೂರ್ವಕ ಆಶೋತ್ತರವಾಗಿ ಬೆಳೆಯುತ್ತದೆ. ಮೈಸೂರು ಇದರಲ್ಲಿ ನೇರವಾಗಿಯೇ ಪ್ರವೇಶಿಸಿದೆ. ಇಲ್ಲಿ ಭುಜಂಗಯ್ಯ, ಕಿಟ್ಟಿ, ಗೆಂಡೆ ತಿಮ್ಮರ ಹಾಗೆ ಮುಗ್ಧನಲ್ಲ. ಕಿಟ್ಟಿ ಆಧುನಿಕ ಲೋಕವನ್ನು ಕಂಡು ಬೆಚ್ಚುತ್ತಾನೆ. ಗೆಂಡೆತಿಮ್ಮ ಅಳುಕಿನಿಂದ ಪ್ರವೇಶಿಸುತ್ತಾನೆ. ಆದರೆ ಭುಜಂಗಯ್ಯ ಯೋಚಿಸಿ, ಚರ್ಚಿಸಿ, ಪ್ರಜ್ಞಾಪೂರ್ವಕ ನಿರ್ಧಾರ ತೆಗೆದುಕೊಳ್ಳುತ್ತಾನೆ. ಪರ್ಯಾಯವಾಗಿ ಕೃಷ್ಣರ ಜೀವನ ದೃಷ್ಟಿಯೂ ಹೆಚ್ಚು ಮುಕ್ತವಾಗಿ ವ್ಯಾಪಕವಾಗಿ ಬೆಳೆಯುತ್ತದೆ.

ಆಧುನಿಕತೆಯ ಪ್ರವೇಶಕ್ಕೆ ಸಾಮಾಜಿಕ ಒತ್ತಡಗಳೂ, ಅನಿವಾರ್ಯತೆಗಳೂ ಕಾರಣವಾಗಿರುವುದನ್ನು ಇಲ್ಲಿ ಕಾಣಬಹುದು. ಇಲ್ಲಿನ ಮದಳ್ಳಿ ಇದಕ್ಕೆ ಉದಾಹರಣೆಯಾಗಿಡೆ. ಊರಿಗೆ ಬಸ್ಸು ಬರುವುದು, ಬೇರೆ ಬೇರೆಹಳ್ಳಿಗಳಿಂದ ಬಸ್ಸು ಹತ್ತಲು ಪ್ರಯಾಣಿಕರು ಒಂದು ನಿರ್ದಿಷ್ಟ ಜಾಗಕ್ಕೆ ಬರುತ್ತಿರುವುದು. ಈ ಪ್ರಯಾಣಿಕರಿಂದಾಗಿಒಂದು ಹೊಸ ಸಾಮಾಜಿಕ ಸಂಸ್ಥೆ ನಿರ್ಮಾಣವಾಗುವುದು. ಈ ಪ್ರಯಾಣಿಕರ ಸಮಸ್ಯಗಳಿಗೆ ಅವಶ್ಯಕತೆಗಳಿಗಾಗಿಯೇ ಆಗಿದೆ. ಭುಜಂಗಯ್ಯನ ಹೋಟೆಲು ಪ್ರಾರಂಭವಾಗುವುದು ಇಂತಹ ಒಂದು ಪರಿಸ್ಥಿತಿಯಿಂದಲೇ ಆಗಿದೆ.

ಇಲ್ಲಿ ಭುಜಂಗಯ್ಯನ ರೈತನಾಗಿದ್ದವನು ಹೋಟೆಲ್ ಇಡುವುದು ಕೇವಲ ಹವ್ಯಾಸಿ ಸಾಹಸವಷ್ಟೆ. ಹೊಸ ಉತ್ಪಾದನಾ ವ್ಯವಸ್ಥೆ, ಹೊಸ ಉದ್ಯೋಗಾವಕಾಶಗಳ ಮೂಲಕ ವರ್ಗ ಸ್ಥಿತಿಯನ್ನು ಮೀರಬಹುದೆಂಬ ಯೋಚನೆ ಅವನ ಮನಸ್ಸಿನಲ್ಲಿರುವುದು. ಪರಂಪರಾಗತ ವ್ಯವಸಾಯ ನಮಗೆ ಎಲ್ಲ ಸುಖ ಸಂತೋಷಗಳನ್ನು ಪೂರೈಸಲಾರದು ಎಂಬ ತಿಳುವಳಿಕೆ ಬಂದಾಗಿನಿಂದ ಬದಲಾವಣೆಯ ಸ್ವರೂಪದ ಬಗ್ಗೆ ಖಚಿತವಾಗದಿದ್ದಾಗಲೂ ಬದಲಾವಣೆ ಅನಿವಾರ್ಯತೆಯಾಗುತ್ತದೆ.

ಭುಜಂಗಯ್ಯನಂಥವರಲ್ಲಿ ಇದು ತೀವ್ರವಾಗಿ ಅಭಿವ್ಯಕ್ತಿ ಪಡೆದುಕೊಳ್ಳುತ್ತದೆ. "ತನ್ನ ಅಪ್ಪ ಮತ್ತೆ ಅವನ ಅಪ್ಪ ಎಲ್ಲರೂ ಬದುಕಿದ್ದ ಹೀಗೆಯೆ. ಆರಕ್ಕೆ ಏರಲಿಲ್ಲ, ಮೂರಕ್ಕೆ ಇಳಿಯಲಿಲ್ಲ. ಯಾರೊಬ್ಬರೂ ಗಜ್ಜಲು ನೆಲ ಕೆರೆಯುವ ಬವಣೆಯಿಂದ ತಪ್ಪಿಸಿ ಕೊಳ್ಳಲಾಗಲಿಲ್ಲ. ತಾನು ಚಿಕ್ಕವನಿದ್ದಾಗ ಈಗ ಇರುವಂತೆ ಬಸ್ಸಿನ ಅನುಕೂಲತೆಯಿದ್ದರೆ, ಪೇಟೆಯಲ್ಲಿ ಒಬ್ಬಿಬ್ಬರು ಅಪ್ಪನಿಗೂ ತಿಳಿದವರಿದ್ದರೆ ತಾನೂ ಓದಿ ಒಳ್ಳೆಯ ಕೆಲಸಕ್ಕೆ ಹೋಗಬಹುದಿತ್ತು. ತನ್ನ ವಾರಿಗೆಯವನೆ ಪಕ್ಕದ ಸರಗೂರಿನ ಗೌಡರ ಮಗ ಈಗ ಎಲ್ಲೋ ಶೇಕದಾರನಾಗಿದ್ದಾನೆ. ಅರ್ಧ ಊರೇ ಈಗ ಅವನ ಅಪ್ಪನದಾಗಿದೆ. ಯಾವಾಗ ಊರಿಗೆ ಬಂದರೂ ಸಾವಿರ ಸಾವಿರ ಅಪ್ಪನಿಗೆ ಕೊಟ್ಟು ಹೋಗುತ್ತಾನಂತೆ. ಅಂಥ ಭಾಗ್ಯ ತನ್ನದಾಗಿದ್ದರೇ"[4] ಎಂದು ಭುಜಂಗಯ್ಯ ಯೋಚಿಸುತ್ತಾನೆ.

ಭುಜಂಗಯ್ಯ ತನ್ನ ಅಭಿಲಾಷೆಯನು ಗೆಳೆಯರ, ತನ್ನ ತಾಯಿ, ಹೆಂಡತಿಯ ಮುಂದಿಟ್ಟಾಗ ಎಲ್ಲರೂ ವಿರೋಧವನ್ನು ವ್ಯಕ್ತಪಡಿಸುತ್ತಾರೆ. ಕಡೆಗೆ ತನ್ನ ಮಾವನೂ ವಿರೋಧಿಸುತ್ತಾನೆ. ಅಂದರೆ ಇವರೆಲ್ಲರಿಗೂ ಆಧುನಿಕತೆಯ ಬಗ್ಗೆ ಇರುವ ದೊಡ್ಡ ಭಯವೆಂದರೆ ಜಾತಿ ಕೆಡುವ ಭಯ, ಇವೆರೆಲ್ಲರ ಎದುರು ಹಾಕಿಕೊಳುವ ಮೂಲಕ ಭುಜಂಗಯ್ಯ ಹೋಟೆಲನ್ನು ಪ್ರಾರಂಭಿಸುತ್ತಾನೆ. ಈ ಆಧುನಿಕರಣದಿಂದ ಹೊಸ ಆರ್ಥಿಕ ಮತ್ತು ರಾಜಕೀಯ ಶಕ್ತಿಗಳ ಹುಟ್ಟಿಕೊಳುತ್ತವೆ. ಜೊತೆಗೆ ಜಾತಿಯ ಕಲಹಗಳೂ ಪ್ರಾರಂಭವಾಗುತ್ತವೆ.

ಗೆಂಡೆ ತಿಮ್ಮ ಭುಜಂಗಯ್ಯ ತಮ್ಮಗೆ ಗೊತ್ತಿಲ್ಲದಂತೆಯೇ ಗ್ರಾಮೀಣ ಭಾರತದ ಫ್ಯೂಡಲ್ ವ್ಯವಸ್ಥೆಯ, ಜಾತಿ ವ್ಯವಸ್ಥೆಯನ್ನೇ ಆಧುನಿಕತೆ ಭೌತಿಕ ಮೌಲ್ಯಗಳಾಗಿ ಪ್ರವೇಶಿಸಿದಾಗ ಮಾತ್ರ ಮುರಿದು ಬೀಳುತ್ತದೆ ಎಂಬ ಸತ್ಯವನ್ನು ಕೃಷ್ಣರ ಕಾದಂಬರಿಗಳು ಸಾಧಿಸಿ ತೋರಿಸಿವೆ.

ಭುಜಂಗಯ್ಯನಷ್ಟೇ ಪ್ರಮುಖ ಪಾತ್ರಗಳಾಗಿ, ಗಂಡ ಬೇರೊಬ್ಬಳ ಇಟ್ಟುಕೊಳ್ಳುವುದನ್ನು ಸಹಿಸದೆ ತನ್ನ ಬದುಕನ್ನೆ ಕಳೆದುಕೊಂಡು ಬರಿದಾಗುವ ಜಕ್ಕಳ್ಳಿಯ ಹೆಣ್ಣು ಪಾರ್ವತಿ, ಇಟ್ಟುಕೊಂಡವಳಾಗಿ ಬಂದು ಕಟ್ಟಿಕೊಂಡವಳಿಗಿಂತ ನಿಯತ್ತಿನಿಂದುಳಿದು ಜೀವಂತವಾಗುವ ಸುಶೀಲೆಯ ಪಾತ್ರಗಳು ಮೂಡಿಬಂದಿವೆ. ಅದೇ ರೀತಿ ಕಾಡುವಿನ ಕಿಟ್ಟಿಯ ಅತ್ತೆ ಕಮಲಮ್ಮ, ಪುಟ್ಟವ್ವ, ದೇವಿ, ಪರಸಂಗದ ಗೆಂಡೆತಿಮ್ಮದಲ್ಲಿನ ಮರಂಕಿ, ಬೀದಿಯಮ್ಮನ ಪಾತ್ರಗಳೆಲ್ಲವುಗಳಿಂದ ಕೃಷ್ಣರ ಕಾದಂಬರಿಗಳಲ್ಲಿ ವಿಶಿಷ್ಟವೆನಿಸಿದೆ.

ಹೀಗೆ ಆಲನಹಳ್ಳಿಯವರು ನವ್ಯ ಕಾಲಘಟ್ಟದಲ್ಲಿ ಪ್ರಮುಖರಾಗಿದ್ದು ಇವರ ಕಾದಂಬರಿಗಳು ಚಿರಾಯುವಾಗಿ ಉಳಿದಿವೆ ಎನ್ನಬಹುದು.

ಆಲನಹಳ್ಳಿಯವರಂತೆ ನವ್ಯ ಕಾಲಘಟ್ಟದ ಮತ್ತೊಬ್ಬ ಪ್ರಮುಖ ಕಾದಂಬರಿಕಾರರೆಂದರೆ ಪಿ.ಲಂಕೇಶರು. ಇವರೂ ಸಹ ಮೂರು ಕಾದಂಬರಿಗಳನ್ನು ರಚಿಸಿದ್ದು ಇವೂ ಸಹ ನವ್ಯ ಕಾಲಘಟ್ಟದಲ್ಲಿ ಪ್ರಮುಖವಾದವುಗಳೆನಿಸಿವೆ.

'ಬಿರುಕು' ಲಂಕೇಶರ ಮೊದಲನೆಯ ಕಾದಂಬರಿ. ಇದು ನವ್ಯ ಕಾದಂಬರಿ. ಆನಂತರಡಲ್ಲಿ ವಾಸ್ತವವಾಗಿ ಕಾದಂಬರಿಯಾಗಿ 'ಮುಸ್ಸಂಜೆ ಕಥಾ ಪ್ರಸಂಗ' ವನ್ನು ರಚಿಸಿದ್ದು, ಮೂರನೆಯದಾಗಿ ಮೊದಲಿನ ಎರಡಕ್ಕಿಂತ ಭಿನ್ನವಾಗಿದೆ. ನಿರೂಪಕನ ಸ್ವಗತ ಲಹರಿಯಲ್ಲಿ ಸ್ಲಮ್‌ನ ಜೀವನ ಚಿತ್ರಣ ನೀಡುವ ಉದ್ದೇಶವನ್ನುಳ್ಳ 'ಅಕ್ಕ' ಕಾದಂಬರಿ ರಚಿಸಿದರು.

'ಬಿರುಕು' ನ್ನು ಕುರಿತು ಲಂಕೇಶರು "ಬಿರುಕು ಒಂದು ರೀತಿಯಲ್ಲಿ ನನ್ನ ಪ್ರಜ್ಞೆಯ ಮುಖ್ಯ ಭಾಗ. ಒಂದು ರೀತಿಯಲ್ಲಿ ವ್ಯವಸ್ಥಿತ ಅನ್ನಿಸಿಕೊಳ್ಳುವ ನನ್ನ ಬದುಕಿನ ಇನ್ನೊಂದು ರೀತಿಯ ಅರಾಜಕತೆ ಈ ಗೊಂದಲ ನನ್ನ ಸಂಕೋಚದಿಂದ ಉಂಟಾದದ್ದು. ಬಹುಸೀಮಿತವೂ ಸಂಕುಚಿತವೂ ಆಗಿದ್ದ ನನ್ನ ನಾಗರಿಕ ಬದುಕಿಗೆ ಹೊಸಬರು ಮತ್ತು ಹೆಚ್ಚು ತಿಳುವಳಿಕೆ ಬಂದದ್ದೂ ಇದರಿಂದ"[5] ಎನ್ನುವ ಲಂಕೇಶರು ನವ್ಯ ಸಿದ್ಧಾಂತದಂತೆ ಬಸವರಾಜನ ಪಲಾಯನ, ಏಕಾಂಗಿತನ, ಮುಖೇಡಿತನ, ಅನುಮಾನ, ಅವಮಾನಗಳೆಲ್ಲ ಸ್ವಭಾವ ಸಹಜ ಚಿತ್ರಣಗಳೇ ಆಗಿರುವಂತೆ ಚಿತ್ರಿಸಿರುವುದನ್ನು ಇಲ್ಲಿ ಕಾಣುತ್ತೇವೆ.

ಬಸವರಾಜನಿಗೆ ಏರ್ಪಡಿಸುವ ಸಾಮಾಜಿಕ ಸಂಬಂಧಗಳ ಹಿನ್ನೆಲೆಯಲ್ಲಿ ಉಂಟಾಗುವ ಸಂಘರ್ಷದ ಕತೆಯಾಗಿ ಬಿರುಕು ಕಾದಂಬರಿ ರೂಪುಗೊಂಡಿದೆ. ಬಸವರಾಜ ಅನೇಕ ಗೊಂದಲ ದ್ವಂದ್ವ, ಅನುಮಾನ, ಸಂದೇಹಗಳ ಪಾತ್ರವಾಗಿದ್ದರೆ, ಅದಕ್ಕೆ ವ್ಯತಿರಿಕ್ತವಾದ ಗುಣ ಸ್ವಭಾವವುಳ್ಳ ಆನಂದ ಯಾವುದೇ ಸಂಘರ್ಷ, ಗೊಂದಲ, ದ್ವಂದ್ವಗಳಿಲ್ಲದೆ ವ್ಯವಸ್ಥೆಯಲ್ಲಿ ಹೊಂದಿಕೊಂಡು, ಸಮಾಜ ಬಯಸುವಂತೆ ನಡೆದು ತನ್ನ ಕ್ಷೇಮವನ್ನು ಕಾಯ್ದುಕೊಳ್ಳುತ್ತ ಬದುಕುತ್ತಾನೆ. ನಿರ್ದಿಷ್ಟ ತತ್ವಾದರ್ಶನಗಳಿಲ್ಲದ, ಸ್ವಂತ ವ್ಯಕ್ತಿತ್ವವಿಲ್ಲದ ವ್ಯಕ್ತಿಗಳು ಸಮಾಜದಲ್ಲಿ ಸದಾ ಇರುತ್ತಾರೆ. ಚೆನ್ನಾಗಿರುತ್ತಾರೆ. ಜಡವಾಗಿ ಬದುಕುತ್ತಿರುತ್ತಾರೆ ಎಂಬುದನ್ನು ಲಂಕೇಶರು ಈ ಮೂಲಕ ಹೇಳುತ್ತಾರೆ.

ಸಂಶೋಧನಾ ವಿದ್ಯಾರ್ಥಿವೇತನ ಪಡೆಯಲು ಆಡಳಿತ ಕಛೇರಿಗೆ ಹೋದ ಬಸವರಾಜನಿಗೆ ಅಲ್ಲಿನ ವ್ಯವಸ್ಥೆ ಅಸಹ್ಯ ಹುಟ್ಟಿಸುತ್ತದೆ. ಸ್ವಾತಂತ್ರ್ಯೋತ್ತರ ಸರ್ಕಾರದ ಆಡಳಿತ ವ್ಯವಸ್ಥೆಯ ದುರಂತ ಸ್ಥಿತಿಯನ್ನು ಲಂಕೇಶರರು ಇಲ್ಲಿ ತಂದಿದ್ದಾರೆ. ಲಂಕೇಶರು ಮನುಷ್ಯನ ಲೈಂಗಿಕ ಸ್ವೇಚ್ಛಾರ, ನೀಚ ಅಭಿರುಚಿಗಳ ಮನೋಧೋರಣೆಗಳನ್ನು ತಮ್ಮ ಪರಿಸರದಲ್ಲಿ ಕಂಡ ಜೀವನ ಸತ್ಯಗಳನ್ನು, ಅವು ತಂದೊಡ್ಡುವ ಸವಾಲುಗಳನ್ನು ಇಲ್ಲಿ ಅನುಭವಕ್ಕೆ ತರುತ್ತಾರೆ. ಲಂಕೇಶರು ಕಂಡಿರುವ ಸಾಮಾಜಿಕ ಕನಸು, ನೆನಪು, ಭ್ರಮೆ, ನಿಜ–ಸುಳ್ಳುಗಳ ನಡುವೆ ತಾನಿರ್ವ ಸಮಾಜದಲ್ಲಿ ತಾವಿರಲಾರದೆ ಒದ್ದಾಡುವ ವ್ಯಕ್ತಿಗಳೇ ಆಗಿದ್ದಾರೆ.

ಬದುಕಿನ ಯಾಂತ್ರಿಕತೆ ಅಪರಿಪೂರ್ವತೆ, ಕ್ಲೇಶಗಳಿಂದ ಬಿಡುಗಡೆ ಪಡೆಯಲು ಬಸವರಾಜ ರಾಜಭವನ ಪ್ರವೇಶಿಸುತ್ತಾನೆ. ಇದು ಫ್ಯಾಂಟಸಿ ತಂತ್ರ. ಭೂತಕಾಲದ ಮರೆಯಲಾಗದ ನೆನಪುಗಳು, ಕನಸುಗಳು, ವರ್ತಮಾನದ ಗೊಂದಲ ಮತ್ತು ಭವಿಷ್ಯ ಅನಿಶ್ಚಿತತೆಗಳಿಂದ ಬಿಡುಗಡೆಯಾಗಲು ಕನಸಿನ ಲೋಕಕ್ಕೆ ಹೋಗುವುದು. ಫ್ಯಾಂಟಸಿಯ ಒಂದು ಮುಖ. ಇದರಿಂದ ಬಸವರಾಜನ ಸ್ವಚ್ಛಂದ ವಿಹಾರಕ್ಕೆ ಅವಕಾಶ ಮಾಡಿಕೊಡುವ ಮನೋಲಹರಿಯಂತೆ, ಜಿಗಿಯುವ ಕನಸಿನ ಲೋಕದಲ್ಲಿ ಕೂಡ ಬಸವರಾಜ ತನ್ನನ್ನೇ ತಾನು ಕಾಣುವುದು ದುರಂತಮಯ ಚಿತ್ರಣ. ಬಸವರಾಜನ ಚಿತ್ರಣದಿಂದ ಮೂಲಕ ಆಶಾದಾಯಕ ಬದಲಾವಣೆಯನ್ನು ಕಾದಂಬರಿಕಾರರು ಸೂಚಿಸುತ್ತಾರೆ.

ಜಗತ್ತಿನಲ್ಲಿ ಲೇಖಕ ತಾನು ಕಾಣುವುದನ್ನು ಹೇಗೆ ಕಾಣುವುದೋ ಹಾಗೆಯೇ ನಿರೂಪಿಸುವ, ಏನೇನು ಗೋಚರಿಸುವುದೋ ಅದೆಲ್ಲವನ್ನೂ ಹೇಳುವ, ಕಣ್ಣಿಗೆ ಕಂಡದ್ದನ್ನು ವಾಸ್ತವವೆಂದು ಒಪ್ಪಿ ಬರೆಯುವ ಪ್ರಕ್ರಿಯೆ ವಾಸ್ತವವಾಗಿ ಕಾದಂಬರಿಗಳ ಹುಟ್ಟಿಗೆ ಕಾರಣವಾಯಿತು. ಈ ಸಂವೇದನೆ ಕನ್ನಡ ಆಧುನಿಕ ಕಾದಂಬರಿಗಳಲ್ಲಿ ವಿಪುಲವಾಗಿ ಬಂದಿರುವುದನ್ನು ಕಾಣಬಹುದು. ಕಾರಂತರ ಬೆಟ್ಟದ ಜೀವ, ಕುವೆಂಪುರವರ ಕಾನೂರು ಹೆಗ್ಗಡತಿ, ಮಾಸ್ತಿ ಕಥೆಗಳು, ಆಲನಹಳ್ಳಿ ಕೃಷ್ಣರ ಕಾದಂಬರಿಗಳು, ಲಂಕೇಶರ ಮುಸ್ಸಂಜೆ ಕಥಾ ಪ್ರಸಂಗ ಈ ಪರಂಪರೆಗೆ ಸೇರಿದ ಕಾದಂಬರಿಯಾಗಿದೆ.

ಲಂಕೇಶರು ಚಿತ್ರಿಸುವ ಮುಸ್ಸಂಜೆಯ ಕಥಾ ಪ್ರಸಂಗದಲ್ಲಿನ ಚಿತ್ರಣಗಳು ಮನುಷ್ಯ ವ್ಯಾಪಾರದ ಲೌಕಿಕ ಜನಜೀವನವನ್ನು ವ್ಯಕ್ತಿ ವಿಶಿಷ್ಟ ಪ್ರಜ್ಞೆಯಲ್ಲಿ ಹಿಡಿದಿರುವುದು ಕಂಡು ಬರುತ್ತದೆ. ಇದು ಪ್ರಗತಿಶೀಲ ಮತ್ತು ಬಂಡಾಯ ಪರಂಪರೆಯ ಕಾದಂಬರಿಗಳಿಗಿಂತ ಭಿನ್ನವಾದ ಬರವಣಿಗೆ ನವ್ಯದ ಸಂದರ್ಭದ ವಾಸ್ತವ ತಾವಾಗಿ ಕಾದಂಬರಿಗಳಲ್ಲಿ ಸಾಂಕೇತಿಕತೆಯ ಮೂಲಕ ವಾಸ್ತವ ವಿವರಗಳನ್ನು ಕೊಡುವ ಪ್ರಯತ್ನವಿದೆ.

ಭಾರತೀಯ ಸಾಂಸ್ಕೃತಿ ಮತ್ತು ಸಾಮಾಜಿಕ ಗ್ರಾಮ ಸಮಾಜವನ್ನು ಮೂಲಭೂತವಾದ ತಾತ್ವಿಕ ವ್ಯತ್ಯಾಸಗಳೊಂದಿಗೆ, ಬದಲಾವಣೆಗೆ ಮತ್ತು ಸಂಕ್ರಮಣ ಕಾಲದ ದ್ವಂದಗಳೊಂದಿಗೆ ವ್ಯಕ್ತಿ ವಿಶಿಷ್ಟ ನೆಲೆಯಲ್ಲಿ ವ್ಯಾಖ್ಯಾನಿಸುವ ಪ್ರಯತ್ನ ನಡೆದಿದೆ. ವಸಾಹತು ಶಾಹಿ ತಂದೊಡ್ಡಿದ ಅನೇಕ ಸವಾಲುಗಳಲ್ಲಿ ಬದಲಾದ ಗ್ರಾಮ-ಭಾರತದ ಸ್ವರೂಪವೂ ಒಂದು. ಅಂತಹ ಚಿತ್ರಣ ಮುಸ್ಸಂಜೆಯ ಕಥಾ ಪ್ರಸಂಗದಲ್ಲಿರುವುದನ್ನು ಕಾಣಬ ಬಹುದು.

ಒಂದು ಹಳ್ಳಿಯ ನಡೆದ ತಮಾಷೆ, ಘಟನೆಗಳ ಆಳದ ಜಾತೀಯತೆ, ಹುಂಬುತನ ಮತ್ತು ವಿಷಾಧಕರ ವಂಚನೆಯಿಂದಾಗಿ ಆ ಹಳ್ಳಿ ವಿನಾಶದ ಅಂಚಿನಲ್ಲಿ ತನ್ನ ಬದುಕಿನ ಮುಸ್ಸಂಜೆಯಲ್ಲಿ ಇರುವಂತೆ ಕಂಡುಬರುವ ಗ್ರಾಮ ಚಿತ್ರಣ ನೀಡುವ ಕಾದಂಬರಿಯಾದ್ದರಿಂದ ಲಂಕೇಶರು ಈ ಕಾದಂಬರಿಗೆ ಮುಸ್ಸಂಜೆಯ ಕಥಾ ಪ್ರಸಂಗವೆಂದು ಹೆಸರಿಟ್ಟಿರುವುದು ಸೂಕ್ತವೆನಿಸುತ್ತದೆ.

ಮುಸ್ಸಂಜೆಯ ಕಥನ ಶೈಲಿ ವಾಚಕರೊಡನೆ ಸಂವಾದ ನಡೆಸುವ ರೀತಿಯದು. ಸಂಭಾಷಣೆಯ ಮಾದರಿಯ ಕಥಾನಕವಾದರೂ, ಓದುಗನನ್ನು ತನ್ನೊಂದಿಗೆ ಕರೆದುಕೊಂಡು ಹೋಗುವ ವಿಶಿಷ್ಟ ತಂತ್ರ ಈ ಕಾದಂಬರಿಯಲ್ಲಿ. ಇದು ಹೇಳುವುದು ಒಂದು ಸಮಾಜದ ಕತೆಯನ್ನು ಒಂದು ಸಂದರ್ಭದಲ್ಲಿ ಒಟ್ಟು ಸಮಾಜದ ಸಮಗ್ರ ಚಿತ್ರಣವನ್ನು ಸಂವಾದದ ನೆಲೆಯಲ್ಲಿ ನೇರವಾಗಿ ಇದು ಚಿತ್ರಿಸುತ್ತದೆ. ಒಂದು ಹಳ್ಳಿಯಲ್ಲಿ ನಡೆಯುವ ಎಲ್ಲ ಕ್ರಿಯೆಗಳ ಹಿಂದಿನ ಉದ್ದೇಶ. ಅವುಗಳ ಪರಿಣಾಮಗಳನ್ನು ಪಾತ್ರಗಳ ಮೂಲಕ ಘಟನಾವಳಿಗಳನ್ನು ಜೋಡಿಸುತ್ತಾ ವ್ಯಂಗ್ಯ, ವಿಡಂಬನೆ, ಕುಚೋದ್ಯಗಳೊಂದಿಗೆ ಚಿತ್ರಿಸಿರುವುದನ್ನು ಕಾಣುತ್ತೇವೆ.

ಇದು ಲಂಕೇಶರ ಮಹತ್ವಾಕಾಂಕ್ಷೆಯ ಕೃತಿ. ಇಲ್ಲಿನ ಪ್ರತಿಯೊಂದು ಪಾತ್ರಕ್ಕೂ ಮಹತ್ವಕಾಂಕ್ಷೆಯ ಬದುಕಿದೆ. ಕಾದಂಬರಿಕಾರನ ಜೀವನ ದೃಷ್ಟಿ ಜೀವಂತವಾದ ಬದುಕು ಯಾವುದು ಎನ್ನುವುದರ ಅನ್ವೇಷಣೆಯತ್ತಲೇ ಇದೆ. ಬೇಡರ ಮಂಜ ಜೀವಂತವಾಗಿ ಕ್ರಿಯಾಶೀಲನಾಗಿ ಕಂಡರೆ, ಉಡುಪನಂಥವರು ಜಡವಾಗಿ ಕಾಣುತ್ತಾರೆ. ಮಂಜನ ಮೇಲೆ ಪ್ರೀತಿ ಇಟ್ಟುಕೊಂಡೇ ಸಾವಂತ್ರಿ ವಿಭಿನ್ನ ಜಾತಿಯ ಅವನನ್ನು ಸ್ವೀಕರಿಸುತ್ತಾಳೆ. ಆಣೆಬಡ್ಡಿ ರಂಗವ್ವನಂಥವರು ಎಂಥದೇ ಸಂದರ್ಭದಲ್ಲೂ ಬದುಕಿನ ಹಂಬಲ ಹೊಂದಿರುವುದು ಕಂಡು ಬರುತ್ತದೆ. ಈ ಎಲ್ಲದರ ನಡುವೆ ಲೇಖಕನಲ್ಲಿ ಅಂತರ್ಗತವಾಗಿರುವ ಮೌಲ್ಯ ವಿವೇಚನೆಯೂ ನಡೆದಿದೆ.

ಕಂಬಳ್ಳಿಯ ಜೀವನ ಮೌಲ್ಯಗಳು, ಆಧುನಿಕತೆಗಳ ನಡುವೆ ಕಾಮ, ಪ್ರೇಮ, ಆನೆ, ಅಸೂಯ, ಜೂಜು, ಕಳ್ಳಭಟ್ಟಿ ಇತ್ಯಾದಿ ಸಂಗತಿಗಳು ಸಂಘರ್ಷಕ್ಕೆ ಎಡೆ ಮಾಡಿಕೊಟ್ಟಿರುವುದನ್ನು ಬದುಕಿನ ಬಿಕ್ಕಟ್ಟುಗಳನ್ನು ಈ ಕಾದಂಬರಿ ಹೇಳುತ್ತದೆ. ಈ ಕಾದಂಬರಿಯಲ್ಲಿ ಬರುವ ಯಾವ ಪಾತ್ರಗಳೂ ಸಂತೃಪ್ತ ಬದುಕನ್ನು ನಡೆಸುತ್ತಿಲ್ಲ. ಕಂಬಳ್ಳಿಯ ಸಾಮಾಜಿಕ ಚೌಕಟ್ಟಿನಲ್ಲಿ ಏರ್ಪಟ್ಟಿರುವ ನೋವು, ವಿಷಾದ, ದುಗುಡಗಳು ರಂಗವ್ವ ಸಾವಂತ್ರಿ, ಮಂಜ, ಬಸ್ಯ, ರಾಜ, ಕರಿಯ, ಸಣ್ಣೀರಪ್ಪ ಹೀಗೆ ಎಲ್ಲರ ಖಾಸಗಿ ಬದುಕಿನಲ್ಲಿ ಅತೃಪ್ತಿಗಳನ್ನುಂಟು ಮಾಡಿರುವುದನ್ನು ಚಿತ್ರಿಸುವುದೇ ಕಾದಂಬರಿಕಾರರ ಉದ್ದೇಶವಾಗಿದೆ.

'ಅಕ್ಕ' ಕಾದಂಬರಿಯನ್ನು ಲಂಕೇಶರು ಬೆಳೆಸಿರುವ ರೀತಿ ವಿಶಿಷ್ಟವಾಗಿದೆ. ನಿರೂಪಕನ ಸ್ವಗತದಲ್ಲಿ ಕಥೆ ಬೆಳೆಯುತ್ತದೆ. ಕಾದಂಬರಿಯ ನಾಯಕ ಮತ್ತು ನಿರೂಪಕ ಇಲ್ಲಿ ಒಬ್ಬನೇ ಆಗಿದ್ದಾನೆ. ಕ್ಯಾತ ಲೋಕವನ್ನು ಗ್ರಹಿಸುವ ಬಗೆ, ಗ್ರಹಿಸಿದ್ದನ್ನು

ನಿರೂಪಿಸುವ ರೀತಿ ಕಾದಂಬರಿಯ ತಂತ್ರವಾಗಿದೆ. ಕ್ಯಾತ ಕಾದಂಬರಿಯ ನಾಯಕನಾದರೂ ಕೃತಿಯ ಹೆಸರು ಅಕ್ಕ. ಕ್ಯಾತನ ಕಣ್ಣಿನಲ್ಲಿ ಕಟ್ಟಿಕೊಡು ಅಕ್ಕ ಕೊಳೆಗೇರಿಯ ಬದುಕಿನ ವಂಚನೆಯನ್ನು ಸ್ವತ: ಅನುಭವಿಸಿದ ವ್ಯಕ್ತಿಯೇ: ಅನುಭವಿಸಿದ ಬಗೆಯ ಇದೊಂದು ವಿಶಿಷ್ಟ ಮಾದರಿಯ ರಚನೆಯಾಗಿದೆ.

ಕಾದಂಬರಿಯಲ್ಲಿ ಎದ್ದು ಕಾಣುವ ಅಂಶವೆಂದರೆ ಕ್ಯಾತನ ಅಪ್ರತಿಮ ಓಡಾಟ. ಈ ಹೋರಾಟವೇ ಆತನ ಬದುಕಿನ ಹೋರಾಟವೂ ಆಗಿದೆ. ಅವನ ಭೇಟಿ, ಸಂವಾದ, ಸಂಪರ್ಕ, ಜೀವನಾನುಭವ ಕಾದಂಬರಿಯಲ್ಲಿ ವಿಸ್ತಾರವಾಗಿ ಹರಡಿಕೊಂಡಿವೆ. ಕಾಲಿಗೆ ಚಕ್ರ ಕಟ್ಟಿಕೊಂಡವನಂತೆ ಓಡಾಡುವ ಕ್ಯಾತ ಒಂದು ಪರಿಸರದಿಂದ ಮತ್ತೊಂದು ಪರಿಸರಕ್ಕೆ ಜಿಗಿಯುತ್ತಾನೆ. ಅತಿಯಾದ ಬೇಸರದಲ್ಲಿಯೇ ಅಪ್ರತಿಮ ಜೀವನೋತ್ಸಾಹವನ್ನು ಮೆರೆಯುತ್ತಾನೆ. ಅವನ ಕುದಿತ ಮನ:ಸ್ಥಿತಿ ಬಾಲಬುದ್ಧಿ, ಭಾವಪರವಶತೆಗಳನ್ನು ಇಲ್ಲಿ ಪ್ರಧಾನವಾಗಿ ತರಲಾಗಿದೆ.

ಲಂಕೇಶರ ಕ್ಯಾತ ಸಮಾಜದ ಆವರಣದಲ್ಲಿಯೇ ವ್ಯಕ್ತಿ ಬದುಕಿನ ಶೋಧನೆ ನಡೆಸುತ್ತಾನೆ. ಇಲ್ಲಿಯ ಕ್ಯಾತ ಮುಗ್ಧ ಅಲ್ಲ. ಮೂಢನೂ ಅಲ್ಲ. ಪ್ರಜ್ಞಾವಂತ – ಪಾತ್ರ ವಿಶ್ಲೇಷಣೆ, ವಯೋಧರ್ಮಕ್ಕನುಸಾರವಾದ ಸ್ವಭಾವ ಚಿತ್ರಣಗಳ ಮೂಲಕ ಅನಾವರಣ ಗೊಳ್ಳುವ ಕ್ಯಾತನ ಚಿತ್ರಣ ಇಡಿಯಾಗಿ ಮಾತುಗಳಿಗೆ ಸಿಕ್ಕುವಂತಿಲ್ಲ. ಏಕೆಂದರೆ ಕಾದಂಬರಿಯ ವಸ್ತುವೇ ಅನುಭವದ ತುಣುಕುಗಳನ್ನು ಆಶ್ರಯಿಸಿದೆ.

ಲಂಕೇಶರು ನೀಡುವುದು ಒಂದು ಕೊಳಗೇರಿಯ ವರ್ಣನೆ. ದೇವೀರಿ – ಕ್ಯಾತನ ಪಾತ್ರ ಚಿತ್ರಣದೊಂದಿಗೆ ಕೊಳೆಗೇರಿಯ ಪರಿಸರದಲ್ಲಿದ್ದ ರಾಜಕಾರಣ, ಆರ್ಥಿಕ, ಸಾಮಾಜಿಕ ಸ್ಥಿತಿ–ಗತಿಗಳು, ಪುಡಾರಿತನ, ಜೂಜು, ರೇಸು, ಚಲನಚಿತ್ರದ ಒಡನಾಟ – ಹೀಗೆ ಹಲವು ಹತ್ತು ವಿವರಗಳ ಚಿತ್ರಣ ನೀಡುವ ಉದ್ದೇಶವನ್ನಿಟ್ಟುಕೊಂಡಿದೆ ಈ ಕಾದಂಬರಿ.

ಹೀಗೆ ಲಂಕೇಶ್ ಮತ್ತು ಆಲನಹಳಿ ಕೃಷ್ಣ ತಮ್ಮ ಕಾದಂಬರಿಗಳಿಂದಲೇ ನವ್ಯ ಕಾಲಘಟ್ಟದಲ್ಲಿ ವಿಶಿಷ್ಟರೆನಿಸಿದ್ದು, ಕಾದಂಬರಿಗಳೂ ಸಹ ಅಷ್ಟೇ ವೈವಿಧ್ಯತೆಗಳಿಂದ ಕೂಡಿದವುಗಳಾಗಿವೆ.

ಅಡಿ ಟಿಪ್ಪಣಿ

1. ಡಿ.ಎಸ್. ನಾಗಭೂಷಣ : ಕಾಡಿನ ಹುಡುಗ ಕೃಷ್ಣ ,ಸಂವಾದ ಪ್ರಕಾಶನ 1990 ಪುಟ ಸಂಖ್ಯೆ: 48

2. ಡಿ.ಎಸ್. ನಾಗಭೂಷಣ : ಕಾಡಿನ ಹುಡುಗ ಕೃಷ್ಣ , ಪುಟ ಸಂಖ್ಯೆ: 22

3. ಡಿ.ಎಸ್. ನಾಗಭೂಷಣ : ಕಾಡಿನ ಹುಡುಗ ಕೃಷ್ಣ , ಪುಟ ಸಂಖ್ಯೆ: 22

4. ಡಿ.ಎಸ್. ನಾಗಭೂಷಣ : ಕಾಡಿನ ಹುಡುಗ ಕೃಷ್ಣ , ಪುಟ ಸಂಖ್ಯೆ: 39-40

5. ಹಾಲತಿ ಸೋಮಶೇಖರ್: ಪಿ.ಲಂಕೇಶ್, ನವಕರ್ನಾಟಕ ಪ್ರಕಾಶನ 2006 ಪುಟ ಸಂಖ್ಯೆ: 43

4. ಶ್ರೀಕೃಷ್ಣ ಆಲನಹಳ್ಳಿ ಅವರ 'ಕಾಡು' ಮತ್ತು ಪಿ.ಲಂಕೇಶರ 'ಅಕ್ಕ' ಕಾದಂಬರಿಗಳಲ್ಲಿ ನಿರೂಪಣಾ ತಂತ್ರ

ಲಂಕೇಶ್ ಮತ್ತು ಆಲನಹಳ್ಳಿಯವರ 'ಅಕ್ಕ' ಮತ್ತು 'ಕಾಡು' ಕಾದಂಬರಿಗಳು ವಸ್ತುವಿನ ನಿರೂಪಣಾ ವಿಧಾನದಿಂದಲೇ ನವ್ಯ ಕಾಲ ಘಟ್ಟದ ಪ್ರಮುಖ ಕಾದಂಬರಿಗಳಲ್ಲಿ ವಿಶಿಷ್ಟವೆನಿಸಿವೆ. ಈ ಹಿನ್ನೆಲೆಯಲ್ಲಿ ಮೊದಲಿಗೆ ಕಾದಂಬರಿಗಳಲ್ಲಿ ವಸ್ತುವಿನ ನಿರೂಪಣಾ ತಂತ್ರವನ್ನು ತಿಳಿಯಬೇಕಾಗುತ್ತದೆ. "ತಂತ್ರ ಎಂದರೆ ಸಾಮಾನ್ಯವಾಗಿ ಕಾದಂಬರಿಯ ವಸ್ತುವನ್ನು ಸಂಘಟಿಸುವ ವಿಧಾನ, ಕುತೂಹಲ ಕೆರಳುವಂತೆ ಕಥೆ ಹೇಳುವ ರೀತಿ, ಪಾತ್ರಗಳ ಪರಸ್ಪರ ಸಂಬಂಧ ಬೆಳವಣಿಗೆ – ಉದ್ದೇಶಗಳನ್ನು ಚಿತ್ರಿಸುವ ಕೌಶಲ, ಘಟನೆಗಳನ್ನು ಆಕರ್ಷಕವಾಗಿ ನಿರೂಪಿಸುವ ಬುದ್ಧಿವಂತಿಕೆಯಾಗಿದೆ"1.

ವಿಮರ್ಶೆಯಲ್ಲಿ ತಂತ್ರ ಎಂಬ ಶಬ್ದವನ್ನು ಯಾವ ಅರ್ಥದಲ್ಲಿ ಬಳಸಲಾಗುತ್ತದೆ ಎಂಬುದಕ್ಕೆ ಮಾರ್ಕ್‌ಶೋರರ್ ಎಂಬ ಪ್ರಸಿದ್ಧ ವಿಮರ್ಶಕರ ಪ್ರಕಾರ ತಂತ್ರವೆಂದರೆ ಲೇಖಕನ ಸಾಮಗ್ರಿಯಾದ ಅನುಭವ ತನ್ನ ಬಗ್ಗೆ ಸರಿಯಾಗಿ ಗಮನ ಕೊಡಲು ಅವನನ್ನು ಒತ್ತಾಯಿಸುವ ಸಾಧನ: ತಂತ್ರವೆಂದರೆ ಲೇಖಕನಿಗೆ ತನ್ನ ವಸ್ತುವನ್ನು ಅನಾವರಣಗೊಳಿಸಲು, ಶೋಧಿಸಲು, ವಿಕಾಸಗೊಳಿಸಲು, ಅದರ ಅರ್ಥವನ್ನು ಸೂಚಿಸಲು ಹಾಗೂ ಕೊನೆಯದಾಗಿ ವಸ್ತುವನ್ನು ಬೆಲೆಕಟ್ಟಲು ಇರುವ ಏಕ ಮಾತ್ರ ಸಾಧನ"2. ಈ ಹಿನ್ನೆಲೆಯಲ್ಲಿ ಉತ್ತಮ ತಂತ್ರ ಉತ್ತಮ ವಸ್ತುವಿಗೆ ಸಮಾನವೆಂಬ ರೀತಿಯಲ್ಲಿ ಶೋರರ್ ಮಾತನಾಡುತ್ತರೆ.

ವಸ್ತುವಿನ ಅರ್ಥವನ್ನೆಲ್ಲ, ಅದರ ನೂರು ಧ್ವನಿ ನೆರಳುಗಳೊಂದಿಗೆ ಅಭಿವ್ಯಕ್ತಿಸಬಲ್ಲ ಸಾಮರ್ಥ್ಯ ಅವುಗಳಿಗಿರಬೇಕಾಗುತ್ತದೆ. ವಸ್ತುವಿನ ಸೂಕ್ಷ್ಮಗಳನ್ನು ಸರಿಯಾಗಿ ಗ್ರಹಿಸಿ, ಸರಳಗೊಳಿಸದೆ, ಪರಿಣಾಮಕಾರಿಯಾಗಿ ಪ್ರಕಟಿಸಬಲ್ಲ ತೀಕ್ಷ್ಣತೆ ಅವಕ್ಕೆ ಬೇಕಾಗುತ್ತದೆ. ಇಲ್ಲವಾದರೆ ಮಹತ್ವದ ವಸ್ತುವಿದ್ದೂ, ಅದರ ಸಾಧ್ಯತೆಗಳನ್ನು ಸರಿಯಾಗಿ ಹೊಮ್ಮಿಸಲಾರದ, ತಲುಪಿಸಲಾರದ ಕೃತಿ ಸೋಲುತ್ತದೆ. ಇದಕ್ಕೂ ಹೆಚ್ಚಾಗಿ

ವಸ್ತುವಿನಲ್ಲಿ ಅಡಕವಾದ ಮೌಲ್ಯಗಳನ್ನು ಬೆಲೆಗಟ್ಟಿ, ಅವುಗಳ ಬಗೆ ತನ್ನ ಬೆಲೆಯುಳ್ಳ ಧೋರಣೆಗಳನ್ನು ಪ್ರಕಟಿಸುವ ಅನುಕೂಲವನ್ನು ಲೇಖಕ ತಂತ್ರದ ಮೂಲಕವೇ ಸಾಧಿಸಿಕೊಳ್ಳಬೇಕಾಗುತ್ತದೆ. ಅಂದರೆ, ವಸ್ತುವಿನ ಪೂರ್ಣ ಅಭಿವ್ಯಕ್ತಿ ತಂತ್ರವೇ ಎಂದಂತಾಗುತ್ತದೆ. ಆದ್ದರಿಂದ ತಂತ್ರ ಭಾಷೆಯ ಬಳಕೆಯನ್ನೂ ಒಳಗೊಳ್ಳುತ್ತದೆ.

"ತಂತ್ರವೆಂದರೆ ಹೆಚ್ಚು ಕಡಿಮೆ ಎಲ್ಲವೂ ಆಗಿದೆ" ಎನ್ನುತ್ತ ಶೋರರ್ ಸಮರ್ಥವಾದ, ಸೂಕ್ಷ್ಮವಾದ ತಂತ್ರ ವಸ್ತುವಿನ ಮಹತ್ವವನ್ನೂ ಸೂಚಿಸುತ್ತದೆ ಎಂಬ ನಿರ್ಣಯಕ್ಕೆ ಬರುತ್ತಾರೆ.

ಕಾದಂಬರಿಯ ನಿರೂಪಣಾ ವಿಧಾನವನ್ನು ನಿರ್ಧರಿಸುವುದರಲ್ಲಿ ನಿರೂಪಣೆಯ ದೃಷ್ಟಿಕೋನ (Point of view) ದ ಸಮಸ್ಯೆ ಮಹತ್ವದ್ದಾಗಿದೆ. ಫ್ಯಾ ದೃಷ್ಟಿಕೋನವೆಂದರೆ ಕಾದಂಬರಿಯ ಘಟನೆ, ಪಾತ್ರಗಳನ್ನು ಕಾಣುವ ಕಣ್ಣು ಮತ್ತು ನಿರೂಪಿಸುವ ಕೋನವಾಗಿದೆ.

ಆಲನಹಳ್ಳಿಯವರ 'ಕಾಡು' ಲಂಕೇಶರ 'ಅಕ್ಕ' ಕಾದಂಬರಿಗಳಲ್ಲಿ ಮುಗ್ಧ ಚಿಕ್ಕ ಬಾಲಕರ ಮೂಲಕ ಪ್ರಪಂಚವನ್ನು ನೋಡುವ ಪರಿ ಬೆರಗುಗೊಳಿಸುವಂಥದ್ದಾಗಿದೆ.

ಲಂಕೇಶರ 'ಅಕ್ಕ' ಕಾದಂಬರಿಯನ್ನು ರಾಜಕೀಯ ಕಾದಂಬರಿ ಎಂದಿದ್ದಾರೆ. ಇಲ್ಲಿ ಬರುವ ನಾಯಕ ಮತ್ತು ನಿರೂಪಕ ಒಬ್ಬನೇ ಆಧಿದ್ದಾನೆ. ಕ್ಯಾತ ಲೋಕವನ್ನು ಗ್ರಹಿಸುವ ರೀತಿ, ಗ್ರಹಿಸಿದ್ದನ್ನು ನಿರೂಪಿಸುವ ರೀತಿ ಇಲ್ಲಿಯ ತಂತ್ರವಾಗಿದೆ. ಈ ಕಥೆಯನ್ನು ಬರೆಯುತ್ತಿರುವ ಕ್ಯಾತ ವಯಸ್ಕನಾಗಿದ್ದು, ಉದ್ಯೋಗ ಹೊಂದಿ ಉತ್ತಮ ಬದುಕು ನಡೆಸುತ್ತಿದ್ದಾನೆ. ಆತನ ಬಾಲ್ಯದ ಸ್ಮೃತಿ ಚಿತ್ರಗಳು ಕಾದಂಬರಿಯ ವಸ್ತುವಾಗಿದೆ.

ಲೇಖಕರೇ (ಪರಕಾಯ ಪ್ರವೇಶ) ಪಾತ್ರವಾಗಿ ಮೂಲ ಅನುಭವಗಳನ್ನು ಪ್ರತಿಮೆಗಳ ಮೂಲಕ ವ್ಯಕ್ತ ಪಡಿಸುವ ನೆಲೆ ಒಂದಾದರೆ, ಭಾಷೆ ಮತ್ತು ಸಾಂಕೇತಿಕ ಚಿತ್ರಣಗಳ ಮೂಲಕ ಲೇಖಕರು ನಿರೂಪಿಸುವುದು ಇನ್ನೊಂದು ನೆಲೆಯನ್ನು ಉಂಟಾಗುತ್ತದೆ. ಒಟ್ಟಾರೆ ಇವೆರಡೂ ನೆಲೆಗಳಲ್ಲಿ ಗೃಹೀತ ಅನುಭವಗಳು ಕಾವ್ಯಾತ್ಮಕವಾಗಿ ತನ್ನೆಲ್ಲಾ ಧ್ವನಿಗಳನ್ನು ಹೊರಹೊಮ್ಮಿಸುವುದು ತುಂಬಾ ಮುಖ್ಯವೆನಿಸುತ್ತದೆ. ಪೂರ್ಣ ಚಂದ್ರ ತೇಜಸ್ವಿಯವರ ಕಾದಂಬರಿಗಳಲ್ಲಿ ನಿರೂಪಕ ಮತ್ತು ನೇರ ಲೇಖಕನ ಹದವರಿತ ಮಿಶ್ರಣಗಳನ್ನು ಕಾಣಬಹುದಾಗಿದೆ. ಲಂಕೇಶರ 'ಅಕ್ಕ' ಕಾದಂಬರಿಯಲ್ಲಿ ಕ್ಯಾತನಿಗೆ ಆ ಕಾಲಘಟ್ಟದ ಪತ್ತೇದಾರಿ ಕಾದಂಬರಿಕಾರರಾದ

ರಾಮಮೂರ್ತಿ, ನರಸಿಂಹಯ್ಯನ ವರಂತಹ ಸಾಹಿತಿಗಳ ಪರಿಚಯವಿರುವುದನ್ನು ಹೇಳಿಕೊಳ್ಳುತ್ತಾನೆ. ತನ್ನ ಹಟ್ಟಿಯ ನಾತವನ್ನು ಕುರಿತು ಹೇಳುವಾಗ ಕವಿಗಳು ಮಣ್ಣಿನ ವಾಸನೆ ಅಂತಾರಂತಲ್ಲ ಎಂಬ ಮಾತುಗಳಿಂದ, ಇದು ಕತೆ ಸೈತ ಅಲ್ಲ ತನ್ನ ಕತೇನೇ ಎಂದು ಹೇಳುತ್ತಿರುವ ಮಾತುಗಳಿಂದ ಲೇಖಕರೇ ಕ್ಯಾತ (ಪಾತ್ರ) ನಾಗಿರುವ ಸಾಧ್ಯತೆಗಳನ್ನು ಊಹಿಸಬಹುದಾಗಿದೆ. ಅಲ್ಲದೆ ಕ್ಯಾತ ಎಂಬ ಹೆಸರು ಅನಕ್ಷರ ವರ್ಗವನ್ನು ಪ್ರತಿನಿಧಿಸುವ ಲಂಕೇಶ್ ಎನ್ನುವ ಹೆಸರು ಪೌರಾಣಿಕ ಪ್ರತಿಮೆಯಾಗಿದ್ದು, ಆಧುನಿಕವಾಗುವ ಕಾಲ ಪ್ರಕ್ರಿಯೆಯೂ ಕೂಡಾ ಇಲ್ಲಿ ಗಮನಾರ್ಹವಾಗಿದೆಯೆಂದು ಹೇಳಬಹುದು.

"ಕಾದಂಬರಿಯ ಉದ್ದಕ್ಕೂ ಕಾಣುವ ಕ್ಯಾತನ ಮಿಂಚಿನ ಓಡಾಟ, ಆತನ ಬದುಕಿನ ಹೋರಾಟವೂ ಆಗಿದೆ. ಅವನ ಭೇಟಿ, ಸಂವಾದ, ಸಂಪರ್ಕ, ಜೀವನಾನುಭವ ಕಾದಂಬರಿಯಲ್ಲಿ ಅನೇಕ ಘಟನೆಗಳಲ್ಲಿ ವಿಸ್ತಾರವಾಗಿ ಹರಡಿಕೊಂಡಿವೆ. ಕಾಲಿಗೆ ಚಕ್ರ ಕಟ್ಟಿಕೊಂಡವನಂತೆ ಓಡಾಡುವ ಕ್ಯಾತ ಒಂದು ಪರಿಸರದಿಂದ ಮತ್ತೊಂದು ಪರಿಸರಕ್ಕೆ ಜಿಗಿಯುತ್ತಾನೆ. ಅತಿಯಾದ ಬೇಸರದಲ್ಲಿಯೇ ಅಪ್ರತಿಮ ಜೀವನೋತ್ಸಾಹವನ್ನು ಮೆರೆಯುತ್ತಾನೆ. ಅವನ ಕುಪಿತ ಮನಃಸ್ಥಿತಿ ಬಾಲಬುದ್ಧಿ, ಭಾವಪರವಶತೆಗಳನ್ನು ಇಲ್ಲಿ ಪ್ರಧಾನವಾಗಿ ತರಲಾಗಿದೆ"[3].

ಹುಟ್ಟುತ್ತಲೇ ಸಮಾಜದ ನೇರ ನಿಯಂತ್ರಣಕ್ಕೆ ಒಳಗಾದ ವ್ಯಕ್ತಿಗಳ ಛಿದ್ರ ಬದುಕಿನ ಚಿತ್ರಣವನ್ನು ಲಂಕೇಶರು ಈ ಕಾದಂಬರಿಯಲ್ಲಿ ನೀಡಿದ್ದಾರೆ. ಇಲ್ಲಿಯ ಕ್ಯಾತ ಮುಗ್ಧನೂ, ಮೂಢನೂ, ಸೂಕ್ಷ್ಮ ಅರಿವಿರುವವನ್ನೂ ಹೌದು. ಕ್ಯಾತನ ಮೂಲಕ ಒಂದು ಕೊಳೆಗೇರಿಯ ವರ್ಣನೆ ನೀಡುತ್ತಾರೆ. ದೇವೀರಿ – ಕ್ಯಾತನ ಪಾತ್ರ ಚಿತ್ರಣದೊಂದಿಗೆ ಆ ಕೊಳಗೇರಿಯ ಪರಿಸರದಲ್ಲಿದ್ದ ರಾಜಕಾರಣ, ಆರ್ಥಿಕ ಸಾಮಾಜಿಕ ಸ್ಥಿತಿಗತಿಗಳು, ಪುಢಾರಿತನ, ಜೂಜು, ರೇಸು, ಚಲನಚಿತ್ರದ ಒಡನಾಟ ಹೀಗೆ ಹಲವು ಹತ್ತು ವಿವರಗಳ ಚಿತ್ರಣ ನೀಡುವ ಉದ್ದೇಶವನ್ನಿಟ್ಟುಕೊಂಡಿದೆ ಈ ಕಾದಂಬರಿ.

ಇಡೀ ಕಾದಂಬರಿಯಲ್ಲಿ ರಾಮಪ್ಪನನ್ನು ಹೊರತುಪಡಿಸಿ ತನ್ನ ಅಕ್ಕನನ್ನು ಒಳಗೊಂಡಂತೆ ಯಾವ ಪಾತ್ರಗಳನ್ನು ಕ್ಯಾತ ಗೌರವ ಪೂರ್ಣವಾಗಿ ನೋಡಲಾರ. ರಾಮಪ್ಪನ ಪಾತ್ರವನ್ನು ಸ್ವಾರ್ಥವನ್ನು ಅಂತರಂಗದಲ್ಲಿ ಪೋಷಿಸಿಕೊಳ್ಳಲು ಬಹಿರಂಗದ ಬೆಂಬಲದ ಅಗತ್ಯವಿರುವುದರಿಂದ ಅದನ್ನು ಪಡೆಯಲು ಮುಖವಾಡದ ಮೂಲಕ ಸಹಜವೆಂಬಂತೆ ನಯ ವಿನಯಗಳನ್ನು ನಟಿಸುವ ರಾಜಕಾರಣಿಯ ಸೋಗಿನ ಪಾತ್ರವಾಗಿ

ಚಿತ್ರಿಸಲಾಗಿದೆ. ರಾಮಪ್ಪನ ದೇವೀರಿ ಕ್ಯಾತರಿಗೆ ಆಶ್ರಯ ಕೊಡುವುದು. ಅವರ ಕಷ್ಟ ಸುಖಗಳಿಗೆ ಕಾಲ–ಕಾಲಕ್ಕೆ ನೆರವಾಗುವುದು. ಒಬ್ಬ ರಾಜಕಾರಣಿ ಸಾರ್ವಜನಿಕ ಬದುಕಿನಲ್ಲಿ ನಡೆದು ಕೊಳ್ಳುವ ರೀತಿ – ನಿತಿಗಳಿಗಿಂತ ಬೇರೆಯಾಗಿಲ್ಲ. ಅಂದರೆ ಪ್ರಸ್ತುತ ಸಮಾಜದಲ್ಲಿರುವ ರಾಜಕಾರಣಿಗಳ ಸಾರ್ವಜನಿಕ ಜೀವನ ಸ್ವಾರ್ಥ ಮೂಲದ್ದಾಗಿದ್ದು, ಇದನ್ನೇ ಪ್ರಧಾನವಾಗಿಟ್ಟು ಕೊಂಡಿರುತ್ತದೆ ಎಂಬಂತೆ ಚಿತ್ರಿಸಲಾಗಿದೆ. ಒಟ್ಟಾರೆಯಾಗಿ ಮನುಷ್ಯ ಮೂಲಭೂತವಾಗಿ ಸ್ವಾರ್ಥಿ ಎಂದು ನಂಬಿದಂತೆ ಲಂಕೇಶರು ಈ ಕಾದಂಬರಿಯಲ್ಲಿ ಬರೆದಿದ್ದಾರೆ.

ಅಸಮಾನತೆಯ ವಿರುದ್ಧದ ಧ್ವನಿ ಸೂಕ್ಷ್ಮವಾಗಿ ಕಾದಂಬರಿಯಲ್ಲಿ ಮೂಡಿಬಂದಿದೆ. ವರ್ಗಭೇದ, ಹಣಕ್ಕಿರುವ ಗುಣ–ದೌರ್ಬಲ್ಯಗಳು, ಹಣದಿಂದಾಗಿ ಬರುವ ಸಂತೋಷ, ತಂದೊಡ್ಡುವ ಸಮಸ್ಯೆ, ದು:ಖ, ಸಂಕಟ. ಅದರಿಂದ ಪಾರಾಗುವ ಜಾಣ್ಮೆ ಹಣ ಕಾಣಿಸುವ ಅದ್ಭುತ ಲೋಕ, ಹಣದೆದುರು ಮನುಷ್ಯನ ಅಲ್ಪತೆ, ಅಸಹಾಯಕತೆ, ಹಾದರ, ಅನ್ಯಾಯ, ಅಪ್ರಾಮಾಣಿಕತೆ ಇವೇ ಮುಂತಾದ ಅಂಶಗಳು ಕಾದಂಬರಿಯಲ್ಲಿ ಹರಡಿಕೊಂಡಿವೆ. ಇಲ್ಲಿ ವರ್ಗಭೇದವು ಕ್ಯಾತನ ಮೂಲಕ ಚಿತ್ರಿತವಾಗಿರುವುದನ್ನು ಕಾಣಬಹುದು. ಕ್ಯಾತನಿಗೆ ದೇವೀರಿ ಐವತ್ತು ರೂಪಾಯಿಯ ನೋಟವನ್ನು ಕೈಗಿಟ್ಟು ಹೋದ ಮೇಲೆ ಅದನ್ನು ಖರ್ಚು ಮಾಡಬೇಕೆಂಬ ಬಯಕೆ ಕ್ಯಾತನಿಗೆ ಆದರೆ ಖರ್ಚು ಮಾಡಲು ಭಯ. ಕಾರಣ ಅದನ್ನು ಖರ್ಚು ಮಾಡಲು ಹೋಗಿ ಚಿಲ್ಲರೆ ಕೇಳಿದರೆ ಕದ್ದಿದ್ದಾನೆ ಎಂಬ ಅನುಮಾನದಿಂದ ನೋಡುವ ಅಂಗಡಿ ಮಾಲೀಕರು, ಕ್ಯಾತನಂತ ಬಡವರು ರಾತ್ರಿ ಹೊತ್ತು ಒಡಾಡಿದರೆ ಕಳ್ಳ ಎಂದು ನೋಡುವ ಪೋಲೀಸರು, ಕ್ಯಾತ ಆಟೋ ಹತ್ತಿ ಕೂತಾಗ ಆಟೋ ಚಾಲಕ ದುಡ್ಡಿದೆಯಾ ಎಂದು ಕೇಳುವ ಪರಿ, ಇಲ್ಲೆಲ್ಲಿ ಆಧುನಿಕ ನಾಗರಿಕ ಸಮಾಜ ಎಲ್ಲರನ್ನು ಅವರ ಬಣ್ಣ, ಬಟ್ಟೆ, ಅವರ ಸ್ಥಿತಿಯ ಮೂಲಕ ನೋಡುತ್ತಿರುವ ರೀತಿಯನ್ನು ಕ್ಯಾತನ ಮಾತುಗಳ ಮೂಲಕವೇ ಚಿತ್ರಿಸಲಾಗಿದೆ.

ಹಣದಿಂದಾಗಿ ದೇವೀರಿ ಬದಲಾಗುವುದು, ರಂಗ ಜಿಟ್ಟೆ ಹಣಕ್ಕಾಗಿ ಕುದುರೆ ರೇಸ್‌ನ್ ಹಿಂದೆಯೇ ಹೋಗುವುದು. ಪಡ್ಡಿ ಸಿನಿಮಾ ಪ್ರಪಂಚ ಸೇರುವುದು, ಸುಧೀರನ ತಂದೆ ಹಣಕ್ಕಾಗಿ ಲಂಚ ಪಡೆದು ಕೆಲಸ ಕಳೆದುಕೊಳ್ಳುವುದು, ನರಸಿಂಹ ಮೇಸ್ತ್ರಿ ಬಾಡಿಗೆ ಹೆಚ್ಚು ಮಾಡುವುದು, ಕನ್ನಡ ಚಳುವಳಿ ಹೆಸರಿನಲ್ಲಿ ಹಣ ವಸೂಲಿ ಮಾಡುವುದು ಇಲ್ಲಿ ನಡೆಯುವ ಚುನಾವಣೆ ಕೆಲಸಗಳು ಇವೆಲ್ಲವು ಹಣದಿದಲೇ ಘಟನೆಗಳೇ ಆಗಿವೆ.

ಅಂದರೆ ಹಣ ಮನುಷ್ಯನ ಸಾಮಾಜಿಕ ಬದುಕಿನಲ್ಲಿ ಪ್ರಧಾನವಾಗಿದ್ದು, ಮನುಷ್ಯನ ರೀತಿ – ನೀತಿಗಳನ್ನು, ಮೌಲ್ಯ ಪ್ರಜ್ಞೆಯನ್ನು ನಿರ್ಧರಿಸುವ ಮೂಲಕ ಸಾಮಾಜಿಕ ಸಂಬಂಧಗಳಲ್ಲಿ ಉಂಟಾಗುವ ಬಿಕ್ಕಟ್ಟನ್ನು ತೆರೆದಿಡುತ್ತದೆ. ಕ್ಯಾತ ನೋಡುವ ಕನ್ನಡ ಚಳುವಳಿ, ಸಿನಿಮಾಲೋಕ, ಬಡವ – ನಾಗ್ರರ ನಡವಳಿಕೆ – ಇವು ಮನುಷ್ಯ ಎಷ್ಟೊಂದು ನೀಚ ಎಂಬುದನ್ನು ಹೇಳುತ್ತವೆ. ಕನ್ನಡ ಚಳುವಳಿ ಹೆಸರಿನಲ್ಲಿ ಹಣಸಂಪಾದಿಸುವ, ಕೊಡದೇ ಇದ್ದರೆ ರಾಮಪ್ಪನಂತವರ ಹೆಸರು ಹೇಳಿ ಹೆದರಿಸಿ, ಬೆದರಿಕೆ ಹಾಕಿ ಹಣ ವಸೂಲಿ ಮಾಡುವ ಶಂಕ್ರಾವ್ರು ಮತ್ತು ಅವನ ಸಂಗಡಿಗರು, ಪದ್ದಿಗೆ ನಾಯಕಿಯರು ಪಾತ್ರ ಕೊಡಿಸುವುದಾಗಿ ಆಸೆತೋರಿಸುವ ಮೂಲಕ ಶಂಕರನಾರಾಯಣ ತನ್ನ ಆಸೆ ತೀರಿಸಿಕೊಳ್ಳುವುದು. ದುಡ್ಡಿಗಾಗಿ ಏನು ಬೇಕಾದರೂ ಮಾಡುವ ಖಡವ–ನಾಗ್ರರ ಪಾತ್ರಗಳ ಮೂಲಕ ಲಂಕೇಶರ ಮೂಡಿಸಿದ್ದಾರೆ.

ಅಂದರೆ ಕ್ಯಾತನಿಗೆ ಕಾಣುವ ಸಿನಿಮಾ ಜಗತ್ತಾಗಲೀ, ಭೂಗತ ಜಗತ್ತಾಗಲೀ ಚಳವಳಿ. ದೇವೀರಿಯ ಗುಪ್ತ ಓಡಾಟವಾಗಲೀ ಪ್ರತಿಯೊಂದರಲ್ಲೂ ರಾಜಕೀಯ ಪ್ರವೇಶಿಸಿರುವುದನ್ನು ಕಾಣಬಹುದು. ಕ್ಯಾತನಿಗೆ ನರಸಿಂಹ ಮೇಸ್ತ್ರಿ, ಖಡವ–ನಾಗ್ರ–ದೇವೀರಿಯ ಕೆಲಸಗಳ ಬಗೆ ಸಿಟ್ಟು – ದ್ವೇಷವಿದ್ದು ಏನೂ ಮಾಡಲಾಗುತ್ತಿಲ್ಲ. ಕ್ಯಾತನಿಗೆ ತನ್ನ ಅಕ್ಕನ ಬಟ್ಟೆ, ಆಹಾರ, ಸ್ನೋ, ಪೌಡರು, ಆಟೋದಲ್ಲಿ ಹೋಡಾಟ ಕಂಡು ತನ್ನಕ್ಕ ಯಾವುದೋ ಆಫೀಸಿನಲ್ಲಿ ಫೀವನ್ ಕೆಲಸಕ್ಕೆ ಸೇರಿರಬೇಕೆಂದು ಕೊಳ್ಳುತ್ತಾನೆ. ದೇವೀರಿಯ ಪ್ರತಿಯೊಂದು ಓಡಾಟದಲ್ಲೂ ಕ್ಯಾತನಿಗೆ ಅಸಹಜತೆ ಎದ್ದು ಕಾಣುತ್ತಿದ್ದು. ಕ್ಯಾತನಿಗೆ ಒಂದು ಸ್ಥಿತಿಯಿಂದ ಇನ್ನೊಂದು ಸ್ಥಿತಿಗೆ ಪಲ್ಲಟವಾಗುವುದನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ. ಇದನ್ನು ಲೇಖಕರು ಕ್ಯಾತನ ಮನಸ್ಥಿತಿಯ ಮೂಲಕ ಮೂಡಿಸುತ್ತಿರುವುದನ್ನು ಕಾಣಬಹುದು.

ಶೂಟಿಂಗ್ ಹೆಸರಿನಲ್ಲಿ ಪದ್ದಿ ಮತ್ತು ಅವಳಪ್ಪ ನಾಗರಾಜ ನಾಯ್ಡುವಿನ ದೌರ್ಬಲ್ಯಗಳನ್ನು ಚೆನ್ನಾಗಿ ಬಳಸಿಕೊಳ್ಳುವ ಶಂಕರನಾರಾಯಣ, ದೇವೀರಿಯನ್ನು ಹಿಡಿತದಲ್ಲಿ ಕೊಳ್ಳಲು ಬಯಸುವ ನರಸಿಂಹ ಮೇಸ್ತ್ರಿ, ರಂಗಜಟ್ಟಿಯ ಕುದುರೆ ಜೂಜು ಮತ್ತು ಕುಡಿತ, ಕೊಳೆಗೇರಿಯ ಜನರಿಗೆ ನೀರು, ಕರೆಂಟ್ ವ್ಯವಸ್ಥೆ ಕಲ್ಪಿಸುತ್ತೇವೆಂದು ಚುನಾವಣೆಯಲ್ಲಿ ಗೆಲ್ಲುವ ರಾಮಪ್ಪ, ಇವರೆಲ್ಲರೂ ಕೊಳಗೇರಿಯ ಜನರ ಬಯಕೆಯನ್ನು ಅರಿತು ಅವರನ್ನು ಹಿಡಿತದಲ್ಲಿಟ್ಟು ಕೊಳ್ಳುವ ಪ್ರಯತ್ನ ನಡೆದಿರುವುದನ್ನು

ಕಾಣಬಹುದು. ಇಲ್ಲಿ ಅಂದರೆ ಕಾದಂಬರಿಯಲ್ಲಿ ಪ್ರತಿಯೊಂದು ಚಟುವಟಿಕೆಗಳ ಹಿಂದೆ ರಾಜಕೀಯದ ಸ್ಪರ್ಶವಿರುವುದನ್ನು ಕಾಣಬಹುದು. ಇಲ್ಲಿ ಲಂಕೇಶರು ಚಿತ್ರರಂಗವು ನೆಮ್ಮದಿ ಬದುಕನ್ನು ನೀಡುವುದಿಲ್ಲ. ಇಲ್ಲಿ ರಾಜಕೀಯ ಮತ್ತು ಹಣ ಪ್ರವೇಶಿಸುವುದರ ಮೂಲಕ ಅತಂತ್ರ ಸ್ಥಿತಿ ಉಂಟಾಗುವುದನ್ನು ಲೇಖಕರು ಚಿತ್ರಿಸಿದ್ದಾರೆ.

ಈ ಕಾದಂಬರಿಯಲ್ಲಿ ಕ್ಯಾತನ ಪಾತ್ರ ಸ್ವಾಭಿಮಾನದಿಂದ ಮೂಡಿರುವುದನ್ನು ಕಾಣಬಹುದು. ಕಾದಂಬರಿಯನ್ನು ಬರೆಯಲು ಪೇಪರ್ ಸಹ ತನ್ನ ಸಂಬಳದಿಂದಲೇ ತಂದಿರುವುದಾಗಿ ಹೇಳುತ್ತಾನೆ. ಇದೇ ರೀತಿ ಕಾದಂಬರಿ ಯುದ್ಧಕ್ಕೂ ತನ್ನ ಸ್ವಾಭಿಮಾನವನ್ನು ಎಲ್ಲಿಯು ಕಳೆದುಕೊಳ್ಳುವುದಿಲ್ಲ. ತನ್ನ ಅಕ್ಕ ದೇವೀರಿ ಬಿಟ್ಟು ಹೋಗಿ ಮೂರು ದಿನದಿಂದ ಹಸಿವಿನಿಂದ ತಿರುಗಿದರೂ ಸಹ ಪದ್ದಿ ಮತ್ತು ಶಂಕರನಾರಾಯಣ ಕೊಡಿಸಿದ ತಿಂಡಿಯನ್ನು ತಿನ್ನದೇ ಹಠ ಮಾಡುತ್ತಾನೆ. ಇದು ಕ್ಯಾತನಲ್ಲಿರುವ ಸ್ವಾಭಿಮಾನವನ್ನು ತಿಳಿಸುತ್ತದೆ.

"ಲಂಕೇಶರು ತಮ್ಮ ಅಕ್ಕ ಕಾದಂಬರಿಯಲ್ಲಿ ಶೀಲ ಎನ್ನುವ ಮೌಲ್ಯವನು ಶೋಧಿಸಲು ತೊಡಗುತ್ತಾರೆನ್ನಿಸುತ್ತದೆ. ಶೀಲ ಎನ್ನುವಾಗ ಅದನು ಬರೀ ಹೆಣ್ಣಿನ ಲೈಂಗಿಕ ಪಾವಿತ್ರ್ಯ ಎನ್ನುವಂತೆ ನೋಡುವುದಿಲ್ಲ. ಅದು ವ್ಯಕ್ತಿಗಳಿಂದ ಹಿಡಿದು ಇಡೀ ಸಮಾಜವನ್ನು ವ್ಯಾಪಿಸುವ ನೈತಿಕ ಮೌಲ್ಯ. ದೇವೀರಿ, ಪದ್ದಿಯ ಲೈಂಗಿಕ ಶೀಲ, ಕೌಟುಂಬಿಕ ಸಂಬಂಧಗಳ ಶೀಲ, ಸಿನೇಮಾದ ಜನರ ಶೀಲ, ರಾಜಕೀಯದಲ್ಲಿರುವವರ ಶೀಲ, ಅಧಿಕಾರಿಯ ನಡವಳಿಕೆಯ ಶೀಲ – ಹೀಗೆ ಎಲ್ಲವನ್ನು ವ್ಯಾಪಿಸುವ ನೈತಿಕ ಮೌಲ್ಯವಾಗಿ ಶೀಲದ ಗ್ರಹಿಕೆ ಬರುತ್ತದೆ. ಕ್ಯಾತ ಕಾಣುವುದು ಸಡಿಲಗೊಂಡಿರುವ – ಹಳಿ ತಪ್ಪಿರುವ, ಶೀಲದ ಗತಿಯನ್ನು ದೇವೀರಿ ದುಬಾರಿ ಸೀರೆಯನ್ನುಟ್ಟು, ಸ್ನೋ-ಪೌಡರ್ ಲೇಪಿಸಿಕೊಂಡು ಜಾರಿ ಹೋಗುತ್ತಿದ್ದರೆ, ಪದ್ದಿ ಶಂಕರನಾರಾಯಣನ ನಯವಂಚಕತನಕ್ಕೆ ತನ್ನ ನಡು ಒಪ್ಪಿಸುತ್ತ, ಸಿನೆಮಾ ಲೋಕಕ್ಕೆ ಸಂದಾಯವಾಗುತ್ತಾಳೆ. ಸುಧೀರನ ತಂದೆ ಲಂಚ ಪಡೆದು ಸಿಕ್ಕಿಹಾಕಿಕೊಂಡು ರಾಮಪ್ಪನ ದರ್ಬಾರಿಗೆ ಸಂದರೆ, ರಾಮಪ್ಪನಿಗೆ ಎಲೆಕ್ಷನ್‌ಗೆ ಪಾರ್ಟಿ ಟಿಕೆಟ್ ದಕ್ಕಲಿಲ್ಲವೆಂದು ತಿಳಿಯುತ್ತಿದ್ದಂತೆಯೇ, ಅವನ ಅತ್ಯಂತ ನಿಷ್ಠೆಯ ಅನುಯಾಯಿಗಳಾದ ನರಸಿಂಹ ಮೇಸ್ತ್ರಿ, ನಾಗ್ರಾಜ , ಖಡವಾ ಇತ್ಯಾದಿಗಳು ಅವನನ್ನು ಬಿಟ್ಟಿ ಟಿಕೆಟ್ ಸಿಕ್ಕ ವಿಶ್ವನಾಥನನ್ನು ಸೇರಿಕೊಳ್ಳುವುದು. ರಂಗಜೆಟ್ಟಿ ಕುದುರೆ ಬಾಲಕ್ಕೆ ಸೇತುಬಿದ್ದು ಕೌಟುಂಬಿಕ ಶೀಲವನ್ನು ಮೀರುವುದು. ಕನ್ನಡ ಹೆಸರಿನಲ್ಲಿ ಎತ್ತುವಳಿ ಮಡುವ ಶಂಕರ್ರಾವ್ರು – ಹೀಗೆ ವಿವಿಧ ಹಂತಗಳಲ್ಲಿ ಶೀಲದ ಶಿಥಿಲತೆಯ ಚಿತ್ರಗಳನ್ನು ಕಾದಂಬರಿ ನೀಡುತ್ತದೆ"4.

ಅಕ್ಕ ದೇವೀರಿಯನ್ನು ಕ್ಯಾತ ಪ್ರೀತಿಸುತ್ತಾನೆ. ಆದರೆ ಅವಳ ನಡವಳಿಕೆಯ ಬಗ್ಗೆ ಅವನಲ್ಲಿರುವ ಸಂಶಯಗಳನ್ನು ನೋವಿಗೆ ಕಾರಣವಾಗುತ್ತದೆ. – " ಹಾಳು ದೇವೀರಿ, ಈಕೆ ಎಸ್ಟು ಒಳ್ಳೆಯವಳು, ದೇವೀರಿ ಅಳ್ತಾ ಓಡಾಡಿದರೂ ಬ್ಯಾಸರ, ನಗ್ತಾ ಓಡಾಡಿದ್ರು ಬ್ಯಾಸರ', ಎನ್ನುವ ಕ್ಯಾತನಲ್ಲಿ ದ್ವಂದ್ವಗಳಿರುವುದನ್ನು ಕಾಣಬಹುದು. ಖಡ್ವಾ, ನಾಗ್ರ, ನರಸಿಂಹ ಮೇಸ್ತ್ರಿಯವರೊಡನೆ ಅವಳಿಟ್ಟುಕೊಂಡ ಸಂಬಂಧಗಳು ಅವನಿಗೆ ಅತ್ಯಂತ ಅವಮಾನಕರವಾಗಿ ತೋರುತ್ತದೆ. ಆದರೆ ಇವುಗಳನ್ನು ನಿಯಂತ್ರಿಸುವ ಶಕ್ತಿ ಇಲ್ಲ ಆದರೆ ದೇವೀರಿಯನ್ನು ತಾಯಿಯ ಹಾಗೆ ಕಾಣುತ್ತಾನೆ. 'ಎಂಟೋ ಹತ್ತೋ ವರ್ಷದ ಈ ಕ್ಯಾತನನ್ನು ಬಿಟ್ಟು ಸತ್ತು ಹೋದ್ಲು ಅವ್ವ, ಕೈಯಾಗೆ ಕಾಸಿರಲಿಲ್ಲ ದಿನಾಲೂ ದೇವೀರಿ ಇಟ್ಟಿಗೆ ಹೊತ್ತು, ಸಿಮೆಂಟ್ ಹೊತ್ತು ನರಸಿಂಹ ಮೇಸ್ತ್ರಿ ಹತ್ರ ನಾಲ್ಕು ಕಾಸು ಕಿತ್ಕೊಂಡು ಬಂದು ತಾನು ಮಂಡಕ್ಕಿ ತಿಂದು ನಂಗೆ ರೊಟ್ಟಿ ತಟ್ಟಿ ಹಾಕ್ತಿರ್ಲಿಲ್ವ. ಆಕೆ ಒಬ್ಬಳೇ ಅಂತ ಆಕೆಯ ತಂಟೆಗೆ ಯಾವಾನಾದ್ರೂ ಬಂದ್ರೆ ಹುಚ್ಚು ನಾಯಿಯಹಂಟೆ ಎರಗಿ ಮೈಕೈಯೆಲ್ಲ ಕಿತ್ತು ನೆತ್ತರು ಬರಿಸ್ತಿರ್ಲಿಲ್ವ. ಅವ್ವಾ ಸತ್ತ ವರ್ಸ ನಂಗೆ ಗೂರಲು ಬಂದು ನೂರೋರ್ಸದ ಮುದಿಯಾನ ಹಂಗೆ ಕೆಮ್ತಾ ಕುಂತಿದ್ದಾಗ ರಾಮಪ್ಪನವರ್ನ ನೋಡಿ ಡಾಕ್ಟರ್ ಹತ್ರ ಒಡ್ಯಾಡಿ ಜಾಸ್ತಿ ತಂದು ನನ್ನ ಮೈ ಕಂಚಿನ ಗಂಗಾಳಾದಂಗೆ ಠಣಡಣ ಅನ್ನೊ ಹಂಗೆ ಮಾಡ್ಲಿಲ್ವ ದೇವೀರಿ, ಅದೆಲ್ಲಕ್ಕಿಂತ ಇನ್ನೊಂದು ಹೇಳ್ತಿನಿ, ದೇವೀರಿಗೆ ಸ್ಕೂಲು ಎಲ್ಲೈತಿ ಅಂತ ಗೊತ್ತಿಲ್ಲ. ಖಡವಾ, ನಾಗ್ರ, ನಾಯ್ಡು, ಮೊದಲಿಯಾರಿಗಳೆಲ್ಲ ಸ್ಕೂಲಿನ ಮಕ ನೋಡಿದೋರಲ್ಲ. ಅದ್ಯಾಕೋ ರಾಮಪ್ಪನ್ನ ಸ್ಕೂಲು ಎಲ್ಲೈತೆ ಅಂತ ಕೇಳಾಕೆ ದೇವೀರಿಗೆ ಬ್ಯಾಸರ, ಈ ಕ್ಯಾತನನ್ನು ಕಟ್ಟಿಕೊಂಡು ಅವತ್ತು ಕಾರ್ಮೆಂಟ್ ಹುಡುಕುತ್ತಾ ಹೋದ್ಲು, ಸುತ್ತಿ ಸುತ್ತಿ ಇಬ್ಬರ ಕಾಲೂ ಬಿದ್ದೋದ ಮೇಲೆ ಸಿಗ್ತು ಆ ಸತ್ಯನಾರಾಯಣನ ಸ್ಕೂಲು. ದೇವೀರಿ ನನ್ನ ಹೆಗಲಿಗೆ ಚೀಲ ಹಾಕಿ ಒಳಗೆ ಕರಕೊಂಡು ಹೋದ್ರೆ ಯಾರೋಬ್ರೂ ಮಾತು ಸೈತ ಆಡಿಸ್ತಿಲ್ಲ ಸಾರ್. ಹೆಡ್ ಮಾಸ್ತರು ಸತ್ಯನಾರಾಯಣ ನಕ್ಕ "ಹೋಗೇ ಇಲ್ಲಿಂದ, ಹೊರಟೋಗೆ" ಅಂದ, ಫೀಸು ಇಸ್ವಾಗುತ್ತೆ ಅಂಗಿ, ಚೆಡ್ಡಿಗೆ ಇಸ್ವಾಗುತ್ತೆ ಸ್ಕೂಲಿನ ದಾನ ಇಸ್ವಾಗುತ್ತೆ, ಬಂದ್ಬಿಟ್ಟು ಬಜಾರಿ, ಹೋಗೇ ಇಲ್ಲಿಂದ ಅಂತ ಕೂಗಿ ಬಿಟ್ಟ ಸಾರ್, ಸ್ಕೂಲಿಗೆ ಸೇರಿಸ್ತಿನಿ ಅಂತ ಹಠ ಹಿಡಿದು ದೇವೀರಿ, ಕಾಲಿನ ಕಡಗ, ಕೆನ್ನೆಸರಾನ ಅಡಾ ಇಟ್ಟು ರಾಮಪ್ಪನ ಕಂಡು ಸತ್ಯನಾರಾಯಣನಿಗೆ ಹೇಳಿಸಿದ್ಲು. ಕ್ಯಾತನನ್ನು ಸ್ಕೂಲಿಗೆ ಸೇರಿಸಿಕೊಂಡು ರಾಮಪ್ಪ ಹೇಳಿದ್ರೆ. ಏನ್ ಬೇಕಾದರೂ ಮಾಡಾಕೆ ಈ ಸತ್ಯನಾರಾಯಣರೆಡಿ ಸಾರ್, ಎಂದು ಹೇಳುವಲ್ಲಿ ಶಿಕ್ಷಣ ವ್ಯವಸ್ಥೆಯೂ ಸಹ ರಾಜಕೀಯದ ಹಿಡಿತದಲ್ಲಿರುವುದನ್ನು

ಕಾಣಬಹುದು. ಇವತ್ತಿನ ಶಿಕ್ಷಣಕ್ಕೆ ಇಂತಹ ಅಸಹಾಯಕ ಕೊಳಗೇರಿಯ, ಬಡತನದಲ್ಲಿನ ಮಕ್ಕಳಸ್ಥಿತಿಯನ್ನು ನೋಡುವ ಕಣ್ಣು ಇಲ್ಲ ಎಂಬುದನ್ನು ಲೇಖಕರು ಸತ್ಯನಾರಾಯಣನ ಮೂಲಕ ವಿವರಿಸಿದ್ದಾರೆ.

ದೇವೀರಿ ಆಧುನಿಕತೆಯ ಕಡೆ ವಾಲುತ್ತ ಬದಲಾವಣೆಗೆ ಪ್ರಯತ್ನಿಸುತ್ತಿರುವುದನ್ನು ಗಮನಿಸಬಹುದು. ತನ್ನ ತಮ್ಮ ಓದಲೇಬೇಕೆಂದು ಹಠ ಹಿಡಿದು ರಾಮಪ್ಪನಿಂದ ಹೇಳಿಸಿ ಸತ್ಯನಾರಾಯಣ ಸ್ಕೂಲಿಗೆ ಸೇರಿಸುವುದು ಕ್ಯಾತ ಮಲಗಿದ್ದರೆ 'ಎದ್ದು ಓದಿ ಕಳಲೇ ಬೋಸುಡಿ ಮಗನೆ' ಎಂದು ಬೈಯುವುದು, 'ಮಲೇರಿಯಾ ಬಂದಾಗ ಡಾಕ್ಟರ್ ಹತ್ರ ಕರಕೊಂಡು ಹೋಗ್ತಿದ್ಲು, ನಾನು ಓದಲೇಬೇಕಂತ ಹಠ ಮಾಡಿ ಸ್ಕೂಲಿಗೆ ಕಳಿಸಿದ್ಲು "ಇಸ್ಕೂಲ್ ಅಂದ್ರೆ ಬಲೆ ಇಷ್ಟ ಆಕೆಗೆ, ಈ ತಮ್ಮ ಕಾರ್ವೆಂಟನಲ್ಲಿ ಓದಿ ಪಟಪಟ ಇಂಗ್ಲೀಷ್ ಮಾತಾಡಿ ಪರಪಂಚಾನೇ ಗೆದ್ದು ಬಿಡಬೇಕು ಅಂತ ಆಸೆ ದೇವೀರಿಗೆ ಹೀಗೆ ದೇವೀರಿ ಓದಿಗೆ ಪ್ರಾಮುಖ್ಯತೆ ಕೊಡುತ್ತ ತನ್ನ ತಮ್ಮನನ್ನ ಒಳ್ಳೆಯ ವ್ಯಕ್ತಿಯನ್ನಾಗಿ ಮಾಡಬೇಕೆಂಬ ಆಸೆ ಇರುವುದನ್ನು ಕಾಣಬಹುದು. ತಾನು ಏನಾದರೂ ಪರವಾಗಿಲ್ಲ. ತಮ್ಮ ಚೆನ್ನಾಗಿರಬೇಕೆಂಬ ಹಠ ದೇವೀರಿಗೆ – ಎಷ್ಟೇ ಸಮಸ್ಯೆಗಳು ಬಂದರೂ ಸಹ ಎದುರಿಸಿ ಬದುಕು ಸಾಗಿಸುತ್ತಾಳೆ. ಗಟ್ಟಿಯಾದ ಹೆಣ್ಣಾಗಿ ದೇವೀರಿಯನ್ನು ಚಿತ್ರಿಸಲಾಗಿದ್ದು, ತನ್ನ ತಮ್ಮನನ್ನು ಸ್ಕೂಲಿಗೆ ಸೇರಿಸಲು ಏನು ಬೇಕಾದರೂ ತ್ಯಾಗ ಮಾಡುತ್ತಾಳೆ ದೇವೀರಿ. ಇಲ್ಲಿ ಕ್ಯಾತ ದೇವೀರಿಯ ನಡುವಿನ ಸಂಬಂಧಗಳು ದಟ್ಟವಾದ ಪ್ರೀತಿಯಿಂದ ಬೆಸೆದುಕೊಂಡಿದ್ದು, ಕ್ಯಾತನಿಗೆ ತನ್ನ ದೇವೀರಿಯ ಮೇಲೆ ಪ್ರೀತಿ ಇರುವುದರಿಂದ ಕ್ಯಾತನಿಗೆ ಈ ಹುಚ್ಚು ಲೌಡಿಗೆ ಹೇಗೆ ಬುದ್ಧಿ ಹೇಳೋದು ಅಂತ ಅವನಿಗೆ ಹೊಳೀಲಿಲ್ಲ ಎಂದು ಯೋಚಿಸುವುದು ತನ್ನ ಅಕ್ಕನನ್ನು ಬದಲಾಯಿಸಬೇಕೆಂಬ ಆಸೆ ಇದ್ದು ಅದು ಸಾಧ್ಯವಾಗದೇ ಇರುವುದನ್ನು ಕಾಣಬಹುದು.

ಸಮಕಾಲೀನ ಸಮಾಜದಲ್ಲಿ ರಾಜಕೀಯ ವ್ಯವಸ್ಥೆಯಿಂದಾಗಿ ನೈತಿಕತೆಯ ಪತನವನ್ನು ಲಂಕೇಶರು ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ನಿಲ್ಲದೆ ಓಡಾಡುವ ಕ್ಯಾತ ಈ ರಾಜಕೀಯ ಹೇಗೆ ಸಮಾಜದ ಪ್ರತಿಯೊಂದು ಕ್ಷೇತ್ರದಲ್ಲಿಯೂ ವ್ಯಾಪಿಸಿದೆ ಎನ್ನುವುದನ್ನು ತಾನೇ ಪ್ರತ್ಯಕ್ಷವಾಗಿ ನೋಡುತ್ತಾನೆ. ಸ್ಕೂಲಿಗೆ ಸೇರಲುತನ್ನ ಅಕ್ಕನ ಜೊತೆ ಹೋಗಿ ಅಲ್ಲಿ ರಾಮಪ್ಪನ ಪ್ರವೇಶದ ಮೂಲಕ ತನಗೆ ಶಾಲೆಯಲ್ಲಿ ಸೀಟು ಸಿಕ್ಕುವುದು, ಪದ್ದಿಯ ಜೊತೆ ಸಿನಿಮಾ ಶೂಟಿಂಗ್ ನೋಡಲು ಹೋಗಿ ಅಲ್ಲಿಯ ಅವ್ಯವಹಾರಗಳನ್ನು ಕಣ್ಣಿಂದ ನೋಡಿ ಅಸಹ್ಯ ಪಟ್ಟುಕೊಳ್ಳುವುದು, ಕನ್ನಡ ಚಳುವಳಿಯಲ್ಲಿ ಪಾಲ್ಗೊಂಡು

ಶಂಕ್ರಾವ್ರು ಮತ್ತು ಅವನ ಸಂಗಡಿಗರು ಹಣ ಸಂಪಾದಿಸುವುದು, ಅವರ ಜೊತೆ ಹೋಟೆಲ್ ಪ್ರವೇಶಿಸಿ ಹೋಟೆಲ್ ಅವ್ಯವಹಾರದ ಸ್ಥಳವಾಗಿ ಮಾರ್ಪಟ್ಟಿರುವುದನ್ನು ವೀಕ್ಷಿಸುತ್ತಾನೆ. ರಂಗ ಜೆಟ್ಟಿಗೆ ಹಣ ಕೊಡುವುದರ ಮೂಲಕ ಕುದುರೆ ಜೂಜಿನ ಬಗ್ಗೆ ತಿಳಿದುಕೊಳ್ಳುವುದು. ಸುಧೀರನ ಸ್ನೇಹದಿಂದ ಅವನ ತಂದೆ ಲಂಚ ಪ್ರಕರಣದಲ್ಲಿ ಸಿಕ್ಕಿ ಹಾಕಿಕೊಂಡಿದ್ದು ಕೆಲಸ ಹೋಗಿರುವ ವಿಚಾರ, ಲಂಚ ಎಂದರೇನು? ಎಂದು ತಿಳಿದುಕೊಳ್ಳಲು ಪ್ರಯತ್ನಿಸುವುದು, ರಾಮಪ್ಪನ ಮನೆಗೆ ಹೋಗುವ ಮೂಲಕ ಅಲ್ಲಿ ನಡೆಯುವ ಚಟುವಟಿಕೆಗಳನ್ನು ಹತ್ತಿರದಿಂದ ಗಮನಿಸುತ್ತಾನೆ. ನರಸಿಂಹ ಮೇಸ್ತ್ರಿ ಕಟ್ಟಿಸಿದ ಮನೆಗಳು ಅಲ್ಲದಿದ್ದರೂ ಗುಡ್ಡೆಲ್ಲ ತನ್ನವು ಅಂತ ಬಾಡಿಗೆ ವಸೂಲಿ ಮಾಡುತ್ತಿರುವುದು, ತನ್ನಂತ ಬಡವರನ್ನು ಕಂಡರೆ ಸುಲಿಗೆ ಮಡುವ ಆಟೋ ಚಾಲಕರು, ವಿಶ್ವನಾಥನಂಥ ಸುಲಿಗೆದಾರರು ಮುಂತಾದ ಹೊರಗಿನ ಜಗತ್ತನ್ನು ನೇರವಾಗಿಯೇನೋಡುತ್ತಾನೆ. ಜೊತೆಗೆ ತನ್ನ ಕೊಳೆಗೇರಿ ಜನರ ಬದುಕನ್ನು ಸಹ ಹತ್ತಿರದಿಂದ ನೋಡಿದವನು. ಯಾವಾಗಲೂ ಕಾಯಿಲೆಯಿಂದ ನರಳುವ ಸಂಪೂರ್ಣಮ್ಮ ಮತ್ತು ಅವಳ ಕುಟುಂಬ, ಅಲಮೇಲುವಿನ ಕುಟುಂಬ, ಕೆಟ್ಟ ವಾಸನೆಯಲ್ಲಿ ಬದುಕುವ ಹಲವು ಕುಟುಂಬಗಳನ್ನು ಸ್ವತ: ತಾನೇ ನೋಡುತ್ತಾನೆ.

ಇಲ್ಲಿ ಲಂಕೇಶರು ಮುಖ್ಯವಾಗಿ ಒಬ್ಬ ಚಿಕ್ಕ ಚಾಲಕನ ಮೂಲಕ ಆಧುನಿಕ ನಾಗರಿಕ ಸಮಾಜದಲ್ಲಿ ಸಮಾಜದ ಬಹು ಮುಖ್ಯ ಅಂಗಗಳಾದ ಶಿಕ್ಷಣ, ರಾಜಕೀಯ, ಸಾಮಾಜಿಕ ಬದುಕು, ಚಳವಳಿಗಳು ಇವೆಲ್ಲವೂಗಳಲ್ಲಿ ಪ್ರತಿಕ್ಷಣ ಬದಲಾಗುತ್ತಿರುವ ವ್ಯವಸ್ಥೆಯನ್ನು ಕ್ಯಾತನ ನಿರಂತರ ಕುತೂಹಲದಿದ ಹುಡುಕಾಟದ ಮೂಲಕವೇ ಹೇಳುತ್ತಿರುವುದು ವಿಶೇಷವಾಗಿದೆ. ಜೊತೆಗೆ ಸಮಾಜ ಅವನತಿಯೆಡೆಗೆ ಸಾಗಲು ಪೂರಕವಾದ ಲಾಟರಿ, ಲಂಚ, ಜೂಜು, ಕಂಟ್ರಾಕ್ಟರ್‌ಗಳ ಹಾವಳಿ, ಬದಲಾದ ಸಿನೆಮಾ ಪ್ರಪಂಚ, ಬದಲಾಗುತ್ತಿರುವ ಜನ, ಪಕ್ಷದಿಂದ ಪಕ್ಷಕ್ಕೆ ಹಾರುವ ರಾಜಕೀಯ ವ್ಯಕ್ತಿಗಳು, ಮನುಷ್ಯನ ಸಣ್ಣತನ, ಅನೈತಿಕತೆಯನ್ನು ಗುರುತಿಸುತ್ತೆ. ಪ್ರಸ್ತುತ ಸಮಾಜದಲ್ಲಿ ಹಣ, ರಾಜಕೀಯದಿಂದಾಗಿ ಸಂಬಂಧಗಳು ಸಡಿಲಗೊಳ್ಳುತ್ತಿರುವುದನ್ನು ಲೇಖಕರು ಚಿತ್ರಿಸಿದ್ದಾರೆ.

ಲಂಕೇಶರು ಕಾದಂಬರಿಯಲ್ಲಿನ ಸ್ತ್ರೀ ಪಾತ್ರಗಳನ್ನು ಕ್ಯತನ ಮೂಲಕವೇ ಕಟ್ಟಿಕೊಟ್ಟಿದ್ದಾರೆ. ಇಲ್ಲಿನ ಸ್ತ್ರೀ ಪಾತ್ರಗಳಲ್ಲೆಲ್ಲಾ ಕ್ಯಾತನಿಗೆ ಪ್ರಿಯವಾದದ್ದೆಂದರೆ ಸಂಪೂರ್ಣಮ್ಮ, 'ರಂಗ ಜೆಟ್ಟಿಯ ಹೆಂಡ್ತಿ ಸಂಪೂರ್ಣಮ್ಮ ಒಳ್ಳೇಳು, ಒಳ್ಳೇಳು ಯಾಕಂದ್ರೆ ಇಡೀ ಹಟ್ಟಿಯ ಐವತ್ತು ಮನೇಲಿ ಹೆಚ್ಚುಮಾತನ್ನೇ ಆಡದ ಹೆಂಗ್ಸು

ಸಂಪೂರ್ಣಮ್ಮ", ಅಂದರೆ ಹೆಚ್ಚು ಮಾತನಾಡದೇ ಇದ್ದರೆ ಒಳ್ಳೆಯವಳು ಎಂಬ ಕಲ್ಪನೆ ಲೇಖಕರಾಗಿದೆ. ಅದೇ ರೀತಿ ಸಂಪೂರ್ಣಮ್ಮ ಥೇಟ್ ಗಾಂಧೀಜಿ ತರ, ಅವ್ವ ಒಳ್ಳೇಳು ಎಷ್ಟು ಒಳ್ಳೇಳು ಅಂದ್ರೆ " ಅಯ್ಯೋ ಕೇಡಿ ಮುಂಡೆ ಗಂಡ" ಅಂತ ಪ್ರೀತಿಯಿಂದ ಕೆನ್ನೆ ಚಿವುಟಿ ತಂಬಿಟ್ಟು ಕೊಟ್ಟು ತಿನ್ನೋವರೆಗೆ ಬಿಡ್ತಿರಲಿಲ್ಲ ಪ್ರಾಣ ತಿಂತಿದ್ಲು, ಆಕೆ 'ಕೇಡಿ' ಅನ್ನೋದು ನಮ್ಮ ಹಟ್ಟಿಯ ಸಿನಿಮಾ ಸ್ಟಾರ್ ಪದ್ದಿ 'ನನ್ರಾಜಾ' ಅನ್ನೋದ್ಕಿಂತ ಚಂದ ಅನ್ನಿಸಿತ್ತು. 'ಕೇಡಿ' ಇಷ್ಟವಾದಂತೆ 'ರಾಜಾ' ಎಂಬ ಪದ್ದಿಯ ಮಾತು ಇಷ್ಟವಾಗುವುದಿಲ್ಲ. ಅದೇ ರೀತಿ ಅಲುಮೇಲುವಿನ ಗಂಡ ಮುನಿರಾಜು ವರ್ಕ್‌ಶಾಪಿಗೆ ಹೋಗದೆ ಆರಾಮವಾಗಿ ಹೆಂಡತಿಯಿಂದ ಉಗಿಸಿಕೊಳ್ಳುತ್ತ ಕೂತಿದ್ದ, ದಡ್ಡ ನನಮಗ ಎದ್ದು ಅಲಮೇಲೂ ಮೂತಿಗೆ ಬಿಗಿದಿದ್ದರೆ ಅವಳ ವರಾತ ಕಡಿಮೆಯಾಗ್ತಿತ್ತು ಎನ್ನುವಲ್ಲಿ ಪುರುಷ ಅಧಿಕಾರವನ್ನು ನೋಡಬಹುದು. ಲೇಖಕರು ಮುನಿರಾಜುವಿನ ಪರವಾಗಿರುವುದನ್ನು ಕಾಣಬಹುದು. ಅದೇ ರೀತಿ ಪದ್ದಿಯ ಸಿನಿಮಾ ಪ್ರಪಂಚಕ್ಕೋದಾಗಲೂ ಅಲ್ಲಿ ಇದ್ದ ಹುಡುಗೀರನ್ನು ಕಂಡು ಅಲ್ಲಂಡೆ ಮುಂಡೇರು ಎಂಬ ಅಸಹ್ಯದ ಮಾತಾಡುತ್ತಾನೆ ಕ್ಯಾತ, ತನ್ನ ಅಕ್ಕ ದೇವೀರಿಯ ಚಲನವಲನವನ್ನು ಗಮನಿಸುತ್ತ "ಏನು ಹೇಳಬೇಕು ಅಂತಿದ್ದೆ ಅಂದ್ರೆ ದೇವೀರಿ ಐಸ್ ಕ್ರೀಂ ಕೊಡಿಸಿದ್ರೂ, ಕ್ಯಾತನ ಕೈ ಹಿಡ್ಕಂಡು ಪದೇ ಪದೇ ಕೆನ್ನೆ ಸವರಿ ಒಳ್ಳೊಳ್ಳೇ ಮಾತಾಡಿದ್ರೂ, ಕ್ಯಾತನ ಬೆನ್ನು ತಟ್ಟಿ ಕಬ್ಬು, ಕಲ್ಲಂಗಡಿ ಹಣ್ಣು ಕೊಡಿಸಿದ್ರೂ ಹಾಳ್ಳುಂಡೆ ದೇವೀರಿ ಈ ಕ್ಯಾತನಿಂದ ದೂರ ಇದ್ಲು, ಅವ್ವ ಅಪ್ಪ ಸತ್ತಾಗ ಕೈ ಕೈ ಹಿಡ್ಕಂಡು ಕುಂತಿದ್ದಾಗ ಇದ್ದ ಪ್ರೀತಿ ಕೂಡ ಇರ್ಲಿಲ್ಲ. ಎಲ್ಲೋ ದೂರದಾಗೆ ನಿಂತು ಯತ್ಲಾಗೋ ನೋಡ್ತಾ ಮಾತಾಡ್ತಿದ್ದಂಗೆ ಇತ್ತು. ಅವ್ವ ಸತ್ತ ತಿಂಗಳಲ್ಲೆ ಕ್ಯಾತನ ಕೈ ಮಾತು ಕೇಳದೆ ಹಾಲು ಚೆಲ್ಲಿದಾಗ ದೇವೀರಿ ನಾಲ್ಕು ಕನಾತಿ ಕೊಟ್ಟಾಗ ಸೈತ ಈಗಿನ ದೇವೀರಿಯ ಐಸ್‌ಕ್ರೀಂ – ಕಲ್ಲಂಗ್ಡಿ ಪ್ರೀತಿಗಿಂತ ಜಾಸ್ತಿ ಇತ್ತು. ದೇವೀರಿ ದಿನಾಲೂ ಬೈತಿದ್ದಾಗ ಸೈತ ಪ್ರೀತಿ ಇತ್ತು. ಇಟ್ಟಿಗೆ ಕೆಲಸ ಮಾಡಿ ಅಂದು 'ಹ್ಯಂಗಿಡೀಯೋ' ಅಂತ ಕೇಳಿದಾಗ ದೇವೀರಿಯ ಪ್ರೀತಿ ಇತ್ತು. ಇದು ಮಾತ್ರ ಅಲ್ಲ ಸಾರ್. ಕ್ಯಾತನಿಗೆ ಸೈತ ದೇವೀರಿ ಕಲ್ಲಂಗ್ಡಿ, ಐಸ್‌ಕ್ರೀಂ, ಅದೇನೋ ಮಾತಾಡಿದಾಗೂ ಅಕ್ಕ ಅಂತ ಬರೆ ತೋರಿಸ್ಕಂತಿದ್ದೀನೆ. ಅಕ್ಕ ಅಂತ ಅದ್ಯಾಕೋ ಅನ್ನಿಸಿಲ್ಲ, ಅಕ್ಕ ಅಂತ ಕೈ ಹಿಡ್ಕಂಡು ನಡಿದ್ರೆ ಬರೋ ಖುಸಿ ಸಿಗ್ತಿಲ್ಲ, ಅಕ್ಕ ದೇವೀರಿ, ಹಲ್ಲಂಡೆ ದೇವೀರಿ, ಮಡಸಲಿ, ಗಬ್ಬು ಲೌಡಿ ದೇವೀರಿ, ಅದೇನೇ ಆದ್ರೂ ನೋಡಿದ ಕೂಡ್ಲೆ ನನ್ನಕ್ಕ, ನನ್ನಕ್ಕ ಬರ್ತಾಳೆ, ನನ್ನಕ್ಕ ತಿಂಡಿ ತರ್ತಾಳೆ. ನನ್ನಕ್ಕ ಗಂಜಿ ಕಾಯಿಸಿಕೊಡ್ತಾಳೆ ಅಂತ ಕುಣಿತಿದ್ದ ಮನಸ್ಸು ಕುಣೀತಿಲ್ಲ ಎಂಬ ಕ್ಯಾತನ

ಮಾತುಗಳಿಂದ ತನ್ನ ಅಕ್ಕ ಆಧುನಿಕ ಜಗತ್ತಿಗೆ ತೆರೆದುಕೊಳ್ಳುತ್ತಿದ್ದು ಈ ಜಗತ್ತಿಗೆ ಕ್ಯಾತನಿಂದ ಪೈಪೋಟಿ ನೀಡಲು ಸಾಧ್ಯವಾಗದೇ ಇರುವುದು ಇದರಿಂದ ಆಧುನಿಕ ಸೌಕರ್ಯದ ಬದುಕು ಮತ್ತು ದಟ್ಟ ಪ್ರೀತಿಯು ಮುಖಾಮುಖಿಗೊಳ್ಳುವುದನ್ನು ಲೇಖಕರು ಕ್ಯಾತ – ದೇವೀರಿಯ ಪಾತ್ರಗಳ ಮೂಲಕ ಕಟ್ಟಿಕೊಡುತ್ತಾರೆ.

ಇಲ್ಲಿ ಲೇಖಕರು ಮನುಷ್ಯ ಯಾವ ನೆಲೆಯಲ್ಲಿ ನಿಂತು ಈ ಬದುಕನ್ನು ನೋಡುತ್ತಾನೆ. ಹಣ ಮತ್ತು ರಾಜಕೀಯದ ಸವಲತ್ತುಗಳಲ್ಲಿ ಸಂಬಂಧಗಳನ್ನು ಕಡಿದುಕೊಳ್ಳುತ್ತಿದ್ದಾನೆ. ಹಣ ಸೃಷ್ಟಿಸುವ ಅನೇಕ ಅಸಮಾನತೆಗಳು ಪ್ರೀತಿಯು ಹಾಗೂ ಸಂಬಂದಗಳ ಮೇಲೆ ಹೇಗೆ ದೌರ್ಜನ್ಯ ಮಾಡುತ್ತವೆ ಎಂಬುದನ್ನು ಇಲ್ಲಿ ಕಟ್ಟಿಕೊಟ್ಟಿದ್ದಾರೆ.

ಕ್ಯಾತನಿಗೆ ತನ್ನ ಅಕ್ಕನ ಮೇಲಿರುವ ಅತಿಯಾದ ಪ್ರೀತಿಯಿಂದ ಆ ಪ್ರೀತಿಯ ಸಂಕಟಗಳಿಂದ ದೇವೀರಿಯನ್ನು ಬೇರೆ ರೀತಿಯಾಗಿ ನೋಡುವಂತೆ ಪ್ರೇರೇಪಿಸುವುದನ್ನು ಕಾಣಬಹುದು, ಅವನ ಒಳಗೆ ಆ ಪ್ರೀತಿಯ ಶೂನ್ಯತೆ ನಿರ್ಮಾಣವಾಗುವುದನ್ನು ಇಲ್ಲಿ ಲೇಖಕರು ಕಟ್ಟಿಕೊಟ್ಟಿದ್ದಾರೆ.

ಶ್ರೀ ಕೃಷ್ಣ ಆಲನಹಳ್ಳಿಯವರು ಬರೆದಿರುವ ಮೂರು ಕಾದಂಬರಿಗಳಲ್ಲಿ ಕಾಡು ಕಾದಂಬರಿ ಪ್ರಮುಖವಾದುದಾಗಿದೆ. ಇಲ್ಲಿ ಗ್ರಾಮೀಣ ಅನುಭವ, ಅದರೊಳಗಿನ ಸೊಗಡು ಮುಖ್ಯವಾಗಿದ್ದು, ಕಾಮವು ಸಾಹಿತ್ಯದ ಮುಖ್ಯ ಸತ್ವವಾಗಿದೆ. ನಾಗರೀಕತೆ ಹಾಗೂ ಸಂಸ್ಕೃತಿಗಳ ಮುಖಾಮುಖಿ ಯನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಈ ಕಾದಂಬರಿಯ ಸೊಗಸೆಂದರೆ ಒಂದು ಸಮೂಹದ ಕ್ರೌರ್ಯವನ್ನು ಚಿಕ್ಕ ಬಾಲಕನೊಬ್ಬನ ಮುಗ್ಧ ದೃಷ್ಟಿಕೋನದಿಂದ ತೋರಿಸುವ ಸೃಜನಶೀಲತೆಯೇ ಆಗಿದೆ.

ಶ್ರೀ ಕೃಷ್ಣರ 'ಕಾಡು' ವಿನ ಸೊಗಸು ಹಳ್ಳಿಯ ಬದುಕನ್ನು ಬಾಲಕನ ಮೂಲಕ ತೆರೆದಿಡುವ ಪರಿ. ಗ್ರಾಮೀಣ ಜೀವನವನ್ನು ಚಿತ್ರಿಸುತ್ತ, ಆ ಮೂಲಕ ಸನಾತನ ಪ್ರಾರಂಪರಿಕ ಸಮಾಜದ ಪತನವನ್ನು ಹೇಳುತ್ತ, ಅಲ್ಲಿನ ಜಾತಿ ಪದ್ಧತಿ, ವರ್ಣ ಸಂಕರಗಳು, ನ್ಯಾಯ ವ್ಯವಸ್ಥೆ, ಪುರುಷರು ಸ್ತ್ರೀಯರನ್ನು ನೋಡುವ ರೀತಿ, ಪೂಜೆಗಳು, ನಂಬಿಕೆಗಳು ಇವುಗಳ ಜೊತೆ ಜೊತೆಗೇ ಆ ಗ್ರಾಮವನ್ನು ಪ್ರವೇಶಿಸುವ ಪೋಲೀಸರು, ಕೋರ್ಟು, ನ್ಯಾಯ ವ್ಯವಸ್ಥೆಯನ್ನು ಪ್ರಶ್ನಿಸುವ ಶಿವಗಂಗನಂತಹ ಯುವಜನತೆ, ಜಾತಿ ಪದ್ಧತಿಯನ್ನು ಪ್ರಶ್ನಿಸುವ ಗೌಡರ ಉಳಿಗ ಮಾನ್ಯ ವ್ಯವಸ್ಥೆಯನ್ನು ವಿರೋಧಿಸುವುದು ಇವುಗಳ ಪರಸ್ಪರ ಮುಖಾ ಮುಖಿಯಿಂದಾಗಿ ಆಗುವ ಅನಾಹುತಗಳನ್ನು ನಿಂತು

ನೋಡುತ್ತಿರುವ ಚಿಕ್ಕ ಬಾಲಕ ಕಿಟ್ಟಿ ತನ್ನ ಊರಿಗೆ ವಾಪಸ್ ಹೋಗುವ ಬಯಕೆಯೊಂದಿಗೆ ಈ ರಾಕ್ಷಸ ಲೋಕದಿಂದ ಪಾರಾಗುವ ದಾರಿಯತ್ತಲೇ ಕಾಯುತ್ತ ಕೂರುವ ಮೂಲಕ ಕತೆ ಮುಕ್ತಾಯವಾಗುತ್ತದೆ.

'ಕಾಡು' ಕಾದಂಬರಿಯ ಕಥೆ ಸಾಕಷ್ಟು ನೇರವಾಗಿಯೇ ಇದೆ. ಕೊಪ್ಪಲು ಎಂಬ ಒಂದು ಸಣ್ಣ ಗ್ರಾಮದ ಪ್ರತಿಷ್ಠಿತ ರೈತ ಚಂದ್ರೇಗೌಡ ಮತ್ತು ಆತನ ಪತ್ನಿ ಕಮಲಮ್ಮ ಮಕ್ಕಳಿಲ್ಲದ ಮನೆಯಲ್ಲಿ ಆತನ ಅಕ್ಕನ ಮಗನಾದ ಕಿಟ್ಟಿಯನ್ನು ತಂದು ಸಾಕಿಕೊಳ್ಳುತ್ತಾರೆ. ಇನ್ನೊಬ್ಬಳನ್ನು 'ಇಟ್ಟುಕೊಂಡಿರುವ' ಗಂಡನ ಪ್ರೇಮದಿಂದ ವಂಚಿತಳಾದ ಕಮಲಮ್ಮನ ಬರಡು ಬದುಕಿನಲ್ಲಿ ಪ್ರೀತಿಯ ಒಂದು ಆಸರೆಯಾಗಿ ಕಿಟ್ಟಿ ಬೆಳೆಯುತ್ತಿರುತ್ತಾನೆ. ಈ ಬಾಲಕ ಕಿಟ್ಟಿಗೆ ಇಲ್ಲಿ ನಡೆಯುವ ಪ್ರತಿಯೊಂದು ಘಟನೆಗಳೂ ಸ್ಪಷ್ಟವಾಗುವುದಿಲ್ಲ. ಎಲ್ಲವೂ ಅಸ್ಪಷ್ಟವಾಗಿಯೇ ಉಳಿಯುತ್ತವೆ. ಆದರೆ ಕೆಲವು ಕಡೆ ಮಾತ್ರ ಕೊಪ್ಪಲಲ್ಲಿ ನಡೆಯುವ ಕ್ರೌರ್ಯ, ಹಿಂಸೆಗಳನ್ನು ಕಂಡು ವಿಚಲಿತನಾಗುತ್ತಾನೆ.

ಇಲ್ಲಿ ಬರುವ ಪ್ರತಿಯೊಂದು ಸ್ತ್ರೀ ಪಾತ್ರಗಳೂ ದು:ಖದಿಂದಲೇ ತಮ್ಮ ಜೀವನವನ್ನು ಕೊನೆಗಾಣಿಸಿಕೊಳ್ಳುತ್ತದೆ. ಗಂಡಸರ ಅಹಂಕಾರದ ಆಡಳಿತದಲ್ಲಿ, ಪರಸ್ಪರ ಬಡಿದಾಟದಲ್ಲಿ, ಇಟ್ಟುಕೊಂಡ ಗತ್ತುಗಾರಿಕೆಯಲ್ಲಿ, ಹೆಣ್ಣಿನ ಪಾತ್ರಗಳು ಹೊಲ ಮನೆಯಲ್ಲಿ ದುಡಿಯುತ್ತಾ ತಮ್ಮ ಬದುಕನ್ನು ಅಂತ್ಯಗೊಳಿಸಿಕೊಳ್ಳುತ್ತವೆ. ಇಲ್ಲಿನ ಸ್ತ್ರೀ ಪಾತ್ರಗಳಲ್ಲಿ ಮೇಲು ಕೀಳು ಎನ್ನದೆ ಅಯ್ನೋರ ಸಾವಿತ್ರಮ್ಮನಿಂದ ಇಡಿದು ಗೌಡರ ಹೆಂಡತಿ ಕಮಲಮ್ಮ, ಕೆಳಜಾತಿಯ ದೇವಿಯವರೆಗೆ ಎಲ್ಲರೂ ತಮ್ಮ ಬದುಕನ್ನು ಬಂದಂತೆ ಸ್ವೀಕರಿಸುತ್ತ ಎದುರಿಸಲು ಧೈರ್ಯವಿಲ್ಲದೆ ಸಾಯುವ ಹಂತಕ್ಕೂ ಹೋಗುತ್ತವೆ. ಕಿಟ್ಟಿಯ ಅತ್ತೆ ಕಮಲಮ್ಮ ತನ್ನ ಗಂಡ ರಾತ್ರಿ ಊಟ ಮಾಡಿ ಜಿರಕಿ ಜೋಡು ಹಾಕಿ ಕೊಂಡು ಹೊರಗೆ ಹೋಗುತ್ತಲೇ ಕಣ್ಣೀರಿಡುತ್ತಾಳೆ. ಇದನ್ನು ಯಾರ ಹತ್ತಿರವೂ ಹೇಳಲಾಗದೆ ಕೊರಗುತ್ತಾಳೆ. ಕೊನೆಗೆ ತನ್ನದೇ ನಂಬಿಕೆಯಂತೆ ಗಂಡ ಇಟ್ಟಿಕೊಂಡವಳ ಮನೆಗೆ ಹೋಗದಂತೆ ಮಂತ್ರವಾದಿಗೆ ದುಡ್ಡು ಕೊಟ್ಟು ಪೂಜೆ ಹಾಕಿಸುತ್ತಾಳೆ. ಅದು ಫಲಿಸದಿದ್ದಾಗ ಕಣ್ಣೀರಿಡುತ್ತಾಳೆ. ಇದನ್ನು ಗಮನಿಸಿದ ಕಿಟ್ಟಿ ಅತ್ತೆಯನ್ನು ಸಮಾಧಾನ ಪಡಿಸುತ್ತಾನೆ. ತನ್ನ ನೋವಿಗೆ ಕಾರಣಳಾದ ಬಸಕ್ಕನ ಮನೆಗೆ ಹೋಗಬೇಡ ಎಂದು ಕಿಟ್ಟಿಗೆ ಹೇಳುವ ಅತ್ತೆಯೇ ಬಸಕ್ಕನನ್ನು ನಗುನಗುತ್ತಲೇ ಮಾತನಾಡಿಸುವುದು ಕಿಟ್ಟಿಗೆ ವಿಚಿತ್ರವೆನಿಸುತ್ತದೆ. ತನ್ನ ಅತ್ತೆಯ ಕಣ್ಣೀರಿಗೆ ಕಾರಣ ಏನೆಂಬುದು ಕಿಟ್ಟಿಗೆ ಅಸ್ಪಷ್ಟವಾಗಿಯೇ ಉಳಿಯುತ್ತದೆ.

ಅದೇ ರೀತಿ ಕೆಂಚ ದೇವಿಯರ ಸಂಬಂಧ ಪಂಚಾಯಿತಿಗೆ ಬಂದಾಗ ಕಿಟ್ಟಿಯ ಮಾವ ಗತ್ತಿನಿಂದ ದೇವಿಯನ್ನು ಪ್ರಶ್ನೆ ಮಾಡುವುದು. ಅವಳು ಉತ್ತರಿಸದೇ ಇದ್ದಾಗ ಕೆನ್ನೆಗೆ ಬಾರಿಸುವುದು ಕಿಟ್ಟಿಗೆ ಬೇಸರವನ್ನುಂಟು ಮಾಡುತ್ತದೆ. ಕಾರಣ ಗುಡಿ ಅಯ್ನೋರು ಹೊಲೇರ ಕಾಳಿಯ್ಗ ಜೊತೆ ಮಲಗಿದ್ದರೆಂದು ಬಂದು ಮಾವನಿಗೆ ಹೇಳಿದಾಗ ತನಗೇ ಹೊಡೆದಿದ್ದರು. ಆದರೆ ಇಂದು ಕೆಂಚ – ದೇವಿಯ ಜೊತೆ ಮಲಗಿದ್ದಕ್ಕೆ ಅವರಿಗೇ ಹೊಡೆಯುತ್ತಿರುವುದನ್ನು ಕಂಡು ವಿಚಿತ್ರವೆನಿಸುತ್ತದೆ. ಕೆಂಚ ಪಂಚಾಯಿತಿಯಲ್ಲಿ ನ್ಯಾಯ ತೀರ್ಮಾನ ಮಾಡುವವರಿಗೆ ನಮಸ್ಕರಿಸದೇ ಇರುವುದು ಕೆಂಚನ ಇನ್ನೊಂದು ಅಪರಾಧವಾಗುತ್ತದೆ. ಇದು ಗೌಡರಿಗೆ ಅವಮಾನದ ವಿಷಯವಾಗುತ್ತದೆ. ಕಾರಣ ತಮಗೆ ಅಧೀನನಾಗಿ, ನಮಸ್ಕರಿಸಿ, ಕೈಕಟ್ಟಿ ನಿಲ್ಲಬೇಕಾದವನು ಏನೂ ಮಾಡದೆ ನಿಂತಿರುವುದು ಅವರಿಗೆ ಸಹಿಸಲಾಗುವುದಿಲ್ಲ. ಇದೆಲ್ಲ ಕೋಪವನ್ನು ಕೆಂಚನಿಗೆ ಹುಣಸೆ ಸೆಬ್ಬೆಯಲ್ಲಿ ಬಾರಿಸುವುದರ ಮೂಲಕ ತೀರಿಸಿಕೊಳ್ಳುತ್ತಾರೆ. ಇದಕ್ಕೆ ಪ್ರೋತ್ಸಾಹಿಸುತ್ತಿದ್ದ ಗುಡಿ ಅಯ್ನೋರನ್ನ ಕಂಡು ಕಿಟ್ಟಿಗೆ ಸಿಟ್ಟು ಬರುತ್ತದೆ. ಕೊನೆಗೆ ಕೆಂಚ ನೋವು ತಡೆಯಲಾರದೆ ತನ್ನ ತಪ್ಪನ್ನು ಒಪ್ಪಿಕೊಳ್ಳುತ್ತಾನೆ. ಇದನ್ನು ಪಕ್ಕದ ಊರಿನ ಶಿವಗಂಗ ವಿರೋಧಿಸುತ್ತಾನೆ. ಅಂದರೆ ನ್ಯಾಯ ಮಾಡುತ್ತಿರುವವರ ಅವ್ಯವಹಾರಗಳನ್ನು ತಿಳಿದ ಈತ ಧೈರ್ಯವಾಗಿ ನ್ಯಾಯ ಮಾಡುವವರು ಮೊದಲು ಸರಿಯಾಗಿ ಇದ್ದರೆ ಮಾಡಲಿ ಎಂದು ಹೇಳುವ ಮಾತು ಹಿಂದಿನಿಂದಲೂ ನಡೆದು ಬಂದು ನ್ಯಾಯ ವ್ಯವಸ್ಥೆಯನ್ನು ಪ್ರಶ್ನೆ ಮಾಡುವ ರೀತಿಯಿದ್ದು ಈ ನ್ಯಾಯವನ್ನು ಒಪ್ಪದೆ ಕೆಂಚನ ಪರವಾಗಿ ನಿಂತು ಕೋರ್ಟಿಗೆ ಹೋಗುವ ತನಕ ಮಾತನಾಡುತ್ತಾನೆ. ಇದೆಲ್ಲವನ್ನು ಕಿಟ್ಟಿ ಅತ್ತೆಗೆ ಹೇಳಿದಾಗ ಅತ್ತೆ ಮೌನವಾಗಿಯೇ ಉಳಿಯುತ್ತಾಳೆ.

ಅದೇ ರೀತಿ ಗುಡಿ ಅಯ್ನೋರ ಸಾವಿತ್ರಮ್ಮ ವಿಧವೆ ತಾನು ಬೇರೆ ಊರಿನ ಭಾಸ್ಕರ ಎಂಬುವನನ್ನು ಪ್ರೀತಿಸಿ ಬಸಿರಾಗಿ ತನಗೆ ಬದುಕಲು ದಾರಿಯೇ ಇಲ್ಲವೆಂಬಂತೆ ನೇಣು ಬಿಗಿದುಕೊಂಡು ಸಾಯುತ್ತಾಳೆ. ಸಿಂಗಪ್ಪಗೌಡರ ಎರಡನೇ ಹೆಂಡತಿ ನಾಗಿಯ ಚಿಕ್ಕಮ್ಮ ಕಲ್ಯಾಣಿ ತನ್ನ ಗಂಡನ ಹಿಂಸೆ ತಾಳಲಾರದೆ ಕಿಟ್ಟಿಯ ಅತ್ತೆಯ ಹತ್ತಿರ ತನ್ನ ದು:ಖ ಹೇಳಿಕೊಳ್ಳುತ್ತಿದ್ದಳು. ಕೊನೆಗೆ ನಾಗಿಯ ಅಜ್ಜಿಯ ಚುಚ್ಚು ಮಾತುಗಳನ್ನು ಸಹಿಸದೆ ಗೌಡರ ಆಳು ಮಗ ಹನುಮನೊಂದಿಗೆ ಓಡಿಹೋಗುತ್ತಾಳೆ. ಇಲ್ಲಿನ ಸ್ತ್ರೀ ಪಾತ್ರಗಳೂ ಸ್ವಾತಂತ್ರ್ಯವನ್ನು ಕಳೆದುಕೊಂಡು ತಮ್ಮ ಇಚ್ಛೆಯಂತೆ ಬದುಕಲಾರದೆ ನೋವನ್ನು ನುಂಗಿ ಬದುಕು ನಡೆಸುವುದನ್ನು ಕಾಣಬಹುದು.

ಇಲ್ಲೆಲ್ಲ ಮೇಲ್ಜಾತಿಯವರು ಮಾಡುವ ಕೆಲಸಗಳು ಅವರ ಪ್ರತಿಷ್ಠೆಯನ್ನು ಸೂಚಿಸಿದರೆ. ಅದೇ ಕೆಲಸವನ್ನು ಕೆಳಜಾತಿಯವರು ಮಾಡಿದರೆ ತಪ್ಪಾಗಿ ಶಿಕ್ಷೆಗೆ ಒಳಾಗುತ್ತವೆ. ಒಂದು ಪಾರಂಪರಿಕ ಸಮಾಜದಲ್ಲಿ ಜಾತಿ ವ್ಯವಸ್ಥೆ ಎಷ್ಟು ಕ್ರೂರವಾಗಿದ್ದಿತು ಎನ್ನುವುದಕ್ಕೆ ಇವು ಸಾಕ್ಷಿಯಾಗುತ್ತವೆ. ಅಲ್ಲದೆ ಕಿಟ್ಟಿ ಸ್ನೇಹಿತರು ಬ್ರಾಹ್ಮಣರ ಅನಂತನನ್ನು 'ಅನಂತ' ಎಂದು ಕರೆದರೆ ತಪ್ಪು 'ಅನಂತಯ್ಯ' ಎಂದು ಕರೆಯಬೇಕೆಂದು ಹೇಳುವುದು ಸಾವಿತ್ರಮ್ಮ ಮಕ್ಕಳನ್ನು ಕಂಡಾಗ 'ಶೂದ್ರ ಮುಂಡೇವ ಎಂದು ಬೈಯುವುದು ಕಿಟ್ಟಿಗೆ ಸಹಿಸಲಾಗುತ್ತಿರಲಿಲ್ಲ. ಅಲ್ಲದೆ ಕಿಟ್ಟಿಯ ಅತ್ತೆ ಕಮಲಮ್ಮ ಮಂತ್ರವಾದಿಯನ್ನು ನಂಬಿ ಪೂಜೆ ಹಾಕಿಸುವುದು. ತನ್ನದೇ ನಂಬಿಕೆಯಂತೆ ಆಗಾಗ ಗುಡಿಗೆ ಹೋಗಿ ಬರುವುದು. ಸಿಳ್ಳ ಅಳುಕೂಗಿನ ಹಕ್ಕಿಯ ಬಗ್ಗೆ ಕಿಟ್ಟಿಗೆ ಹೇಳುವುದು ಇವೆಲ್ಲವೂ ಪರಂಪರೆಯನ್ನು ನಂಬಿ ಬದುಕುತ್ತಿರುವುದು ಜನರ ನಂಬಿಕೆಗಳೇ ಆಗಿವೆ.

ಇಲ್ಲಿನ ಸ್ತ್ರೀ ಪಾತ್ರಗಳು ಈ ಪರಂಪರೆ ಹಾಕಿದ ಕಟ್ಟುಪಾಡುಗಳನ್ನು ಮೀರಿ ಬದುಕುವಲ್ಲಿ ವಿಫಲವಾಗುತ್ತ ಅದರೊಳಗೇ ಸಿಕ್ಕಿ ನೋವನ್ನು ಅನುಭವಿಸುತ್ತ ತಮ್ಮ ಬದುಕನ್ನು ಸವೆಸುತ್ತವೆ. ಕಿಟ್ಟಿಯಂತೆಯೇ ಈ ರಾಕ್ಷಸ ಗ್ರಾಮದಿಂದ ಪಾರಗಲು ಬಯಸುತ್ತವೆ.

ಈಗೆ ಕೊಪ್ಪಲು ಗ್ರಾಮದ ಪಂಚಾಯತ್ತಿಯಿಂದ ಪ್ರಾರಂಭವಾದ ಹೋರಾಟ ಪೋಲಿಸರು ಊರಿಗೆ ಪ್ರವೇಶ ಮಾಡುವ ಮೂಲಕ ಒಂದು ರೂಪ ಪಡೆಯುತ್ತದೆ. ಮೇಲ್ವರ್ಗದವರ ನ್ಯಾಯ ವ್ಯವಸ್ಥೆಯಲ್ಲಿಯೇ ನಡೆಯುತ್ತಿದ್ದ ತೀರ್ಮಾನಗಳು ಕಾನೂನು ವ್ಯವಸ್ಥೆಯ ಕಡೆ ವಾಲುತ್ತವೆ. ಹೊಸೂರಿನ ಶಿವಗಂಗ ಅವನ ಸ್ನೇಹಿತರು ಹಿಂದಿನ ನ್ಯಾಯ ವ್ಯವಸ್ಥೆಯನ್ನು ವಿರೋಧಿಸುತ್ತಾರೆ. ಕಾರಣ ಇಲ್ಲಿ ಮೇಲ್ಜಾತಿಯವರಿಗೆ ಒಂದು ನ್ಯಾಯವಾದರೆ ಕೆಳಜಾತಿಯವರಿಗೇ ಒಂದು ನ್ಯಾಯವಾಗಿದ್ದಿತು. ಈ ಕಾರಣದಿಂದಾಗಿ ಪ್ರತಿಯೊಬ್ಬರಿಗೂ ಒಂದೇ ನ್ಯಾಯ ಸಿಗುವಂತೆ ಪರಿವರ್ತನೆಯ ಕಡೆ ಗ್ರಾಮಗಳನ್ನು ಬದಲಾಯಿಸಲು ಪ್ರಯತ್ನಿಸಿ ಸಫಲರಾಗುತ್ತಾರೆ.

ಇಲ್ಲಿ ಕಿಟ್ಟಿ ಕೇವಲ ತನ್ನ ಅತ್ತೆಯನ್ನು ಕಂಡು ಕನಿಕರಪಡದೆ ತಮ್ಮ ನಾಯಿಯನ್ನು ಕಿರುಬ ಹೊತ್ತುಕೊಂಡು ಹೋಗಿದ್ದಕ್ಕೆ ದು:ಖಿಸುತ್ತ ಮನೆಯ ಗೌರಿ ಕಡಸು ಮದ್ದು ಸಿಡಿದು ಸತ್ತದ್ದಕ್ಕೆ ನಾಗಿಯ ಅಜ್ಜಿ ಸತ್ತಿದ್ದಕ್ಕೆ, ಕೆಂಚ ದೇವಿಯರಿಗೆ ಪಂಚಾಯತಿಯಲ್ಲಿ ಹೊಡೆದಿದ್ದಕ್ಕೆ, ಕೊನೆಗೆ ತನ್ನ ಮಾವನನ್ನು ಪೋಲೀಸರು ಎಳೆದುಕೊಂಡು ಹೋಗಿದ್ದಕ್ಕೆ ತನ್ನ ಅತ್ತೆಯ ಸಾವನ್ನು ಕಂಡು ಹೆದರುತ್ತಾನೆ ಇಲ್ಲಿನ

ಕಾಡು ಇವನಿಗೆ ವಿಚಿತ್ರವೆನಿಸಿ ಇದು ನಿಜವಾಗಿಯು ರಾಕ್ಷಸಲೋಕದಂತೆ, ಇಲ್ಲಿರುವವರು ರಾಕ್ಷಸರೇ ಎಂದು ತೀರ್ಮಾನಕ್ಕೆ ಬಂದುಬಿಡುತ್ತಾನೆ.

ಈ ಕೊಪ್ಪಲು ಗ್ರಾಮಕ್ಕೆ ಮಂಡ್ಯದಿಂದ ನಾಟಕಕ್ಕೆ ಡ್ರೆಸ್ಸು ತರಿಸುವುದು, ಕಿಟ್ಟಿಯನ್ನು ಸ್ಕೂಲಿಗೆ ಸೇರಿಸಿ ಮಾವ ಕಿಟ್ಟಿಗೆ ಸ್ಕೂಲಿಗೆ ಹೋಗಲು ಒತ್ತಾಯಿಸುವುದು ಇವೆಲ್ಲವೂ ಆಧುನಿಕತೆಯ ಸ್ಪರ್ಶದಿಂದಲೇ ಆಗಿದೆ.

ಹೀಗೆ ಈಡೀ ಕಾದಂಬರಿಯನ್ನು ಆಲನಹಳ್ಳಿಯವರು ಒಬ್ಬ ಮುಗ್ದ ಬಾಲಕ ಕಿಟ್ಟಿಯಿಂದಲೇ ನೋಡುತ್ತ ಕೊಪ್ಪಲಿನಲ್ಲಿ ನಡೆಯುವ ಪ್ರತಿಯೊಂದು ಘಟನೆಯಲ್ಲೂ ಕಿಟ್ಟಿ ನೇರವಾಗಿ ಪ್ರವೇಶಿಸುತ್ತಾನೆ. ನಾಟಕ ನೋಡಲು ಹೋಗುವುದು, ಪಂಚಾಯಿತಿಗೆ ಹೋಗುವುದು, ಸಂತೆಗೆ ಹೋಗುವುದು, ತನ್ನ ಅತ್ತೆಯೊಂದಿಗೆ ಗುಡಿಗೆ ಹೋಗುವುದು, ಸಿಳ್ಳನೊಂದಿಗೆ ಕಾಡೊಳಗೆಹೋಗುವುದು, ನಾಗಿಯ ಜೊತೆ ಸ್ಕೂಲಿಗೆ ಹೋಗುವುದು, ಅಯ್ನೋರ ಅನೈತಿಕ ವ್ಯವಹಾರ ಹೀಗೆ ಪ್ರತಿಯೊಂದನ್ನು ಕಿಟ್ಟಿಯ ಮೂಲಕ ನೋಡುತ್ತ ಕಿಟ್ಟಿ ಇದೊಂದು ರಾಕ್ಷಸ ಲೋಕವೆಂದು ತೀರ್ಮಾನಿಸುವುದು, ಈ ರಾಕ್ಷಸರು ತಾನು ಅಜ್ಜಿಯಿಂದ ಕೇಳಿದ ಕತೆಗಳಲ್ಲಿನ ಪಾತ್ರಗಳಾಗಿದ್ದು, ಆ ರಾಕ್ಷಸ ಪಾತ್ರಗಳು ನೆನಪಿಗೆ ಬರುತ್ತವೆ. ಕೊನೆಗೆ ಕಿಟ್ಟಿ ತನ್ನ ಊರಿಗೆ ಮರಳಿ ಹೋಗುವ ಬಯಕೆಯೊಂದಿಗೆ ಯಾರಾದರೂ ತನ್ನನ್ನು ಕರೆದುಕೊಂಡು ಹೋಗಲಿ ಎಂಬ ಆಸೆಯಲ್ಲಿ ಕಾಯುತ್ತಾ ಕೂರುತ್ತಾನೆ, ಚಿಕ್ಕ ಬಾಲಕನ ಮೂಲಕ ಕತೆ ಹೇಳುವುದು ಹಳೆಯದಾದರು ಪಾತ್ರಗಳನ್ನುಕಿಟ್ಟಿಯ ಮೂಲಕವೇ ನೋಡುತ್ತಿರುವುದು ವಿಶೇಷ ತಂತ್ರವಾಗಿದೆ.

ಅಡಿ ಟಿಪ್ಪಣಿ

1.ಗಿರಡ್ಡಿ ಗೋವಿಂದರಾಜು: ಕಾದಂಬರಿ ವಸ್ತು ಮತ್ತು ತಂತ್ರ ಸ್ನೇಹ ಪ್ರಕಾಶನ : 2000 ಪುಟ 3

2. ಗಿರಡ್ಡಿ ಗೋವಿಂದರಾಜು: ಕಾದಂಬರಿ ವಸ್ತು ಮತ್ತು ತಂತ್ರ ಸ್ನೇಹ ಪ್ರಕಾಶನ : 2000 ಪುಟ 4

3.ಹಾಲತಿ ಸೋಮಶೇಖರ್ : ಪಿ.ಲಂಕೇಶ್, ನವಕರ್ನಾಟಕ ಪ್ರಕಾಶನ, 2006, ಪುಟ 14

4. ರಾಘವೇಂದ್ರ ಪಾಟೀಲ: ಸಾಹಿತ್ಯ ಸಂವಾದ : ಸಂವಾದ ಪ್ರಕಾಶನ : 2000 ಪುಟ : 89-90

5) ನವ್ಯಕಾಲದ ಪ್ರಮುಖ ಕಾದಂಬರಿಕಾರರಲ್ಲಿ ಶ್ರೀಕೃಷ್ಣ ಆಲನಹಳ್ಳಿ ಮತ್ತು ಪಿ.ಲಂಕೇಶ್

ಹೊಸಗನ್ನಡ ಸಾಹಿತ್ಯದಲ್ಲಿ ನವ್ಯಕಾಲಘಟ್ಟವು ಸ್ವಾತಂತ್ರ್ಯ ನಂತರ ಅಂದರೆ 1950 ರಿಂದ ಪ್ರಾರಂಭವಾಯಿತು. ನವ್ಯ ಸಾಹಿತ್ಯವು ಮೊದಲು ವಿ.ಕೃ. ಗೋಕಾಕರ ಮುಂಬೈ ಸಾಹಿತ್ಯ ಸಮ್ಮೇಳನದಲ್ಲಿನ 'ಸಾಹಿತ್ಯ ಮತ್ತು ನವ್ಯತೆ' ಎಂಬ ಉಪನ್ಯಾಸದಿಂದ ಪ್ರಾರಂಭವಾಗಿ ಗೋಪಾಲಕೃಷ್ಣ ಅಡಿಗರ 'ನಡೆದುಬಂದ ದಾರಿ' ಯಿಂದ ಒಂದು ರೂಪ ಪಡೆದುಕೊಂಡು ಬೆಳೆಯಲು ಪ್ರಾರಂಭಿಸಿತು. ನವ್ಯತೆಯು ಕನ್ನಡ ಕಾದಂಬರಿಯಲ್ಲಿ ಪ್ರಭಾವಿಯಾಗಿ ಕಂಡು ಬಂದದ್ದು 1960 ರನಂತರ. 1961 ರಲ್ಲಿ ಪ್ರಕಟವಾದ ಶಾಂತಿನಾಥ ದೇಸಾಯಿಯವರ 'ಮುಕ್ತಿ' ಯನ್ನು ನವ್ಯಮಾರ್ಗದ ಪ್ರಥಮ ಕಾದಂಬರಿ ಎಂದು ಕರೆಯಬಹುದು. ಇಲ್ಲಿಂದ ಪ್ರಾರಂಭವಾದ ನವ್ಯತೆಯ ಅಂಶಗಳನ್ನುಳ್ಳ ಕಾದಂಬರಿಗಳು ಅಪಾರ ಸಂಖ್ಯೆಯಲ್ಲಿ ಪ್ರಕಟವಾದವು.

ನವ್ಯಕಾಲಘಟ್ಟದ ಪ್ರಮುಖ ಕಾದಂಬರಿಕಾರರೆಂದರೆ ತೇಜಸ್ವಿ ಯು.ಆರ್. ಅನಂತಮೂರ್ತಿ, ಲಂಕೇಶ್, ಆಲನಹಳ್ಳಿ, ಶಾಂತಿನಾಥ ದೇಸಾಯಿ, ಎಸ್.ಎಲ್. ಭೈರಪ್ಪ, ಯಶವಂತ ಚಿತ್ತಾಲ, ರಾಮಾನುಜನ್, ವೈಕುಂಠರಾಜು ಮುಂತಾದವರುಗಳು. ಇವರೆಲ್ಲರೂ ತಮ್ಮ ಕಾದಂಬರಿಗಳ ವೈಶಿಷ್ಟ್ಯತೆಯಿಂದ ವಿಶಿಷ್ಟರಾಗಿದ್ದಾರೆ. ಇವರುಗಳಲ್ಲಿ ಆಲನಹಳ್ಳಿ ಮತ್ತು ಲಂಕೇಶರು ತಮ್ಮ ಕಾದಂಬರಿಗಳ ವಸ್ತುವಿನ ಆಯ್ಕೆ, ನಿರೂಪಣಾ ದೃಷ್ಟಿಕೋನಗಳ ವಿಶೇಷತೆಯಿಂದಾಗಿ ನವ್ಯಕಾಲಘಟ್ಟದಲ್ಲಿ ತಮ್ಮದೇ ಆದ ಸ್ಥಾನವನ್ನು ಉಳಿಸಿಕೊಂಡಿದ್ದಾರೆ.

ಶ್ರೀ ಕೃಷ್ಣಆಲನಹಳ್ಳಿಯವರು ತಮ್ಮ ಮಿಂಚಿನ ಪ್ರತಿಭೆ ಮತ್ತು ಅದ್ಭುತ ಕಥನ ಶಕ್ತಿಗಳಿಂದ ಕನ್ನಡದ ಅತ್ಯುತ್ತಮ ಕಾದಂಬರಿಕಾರರಲ್ಲಿ ಒಬ್ಬರಾಗಿರುವರು. ತಮ್ಮ ಬರವಣಿಗೆಯನ್ನು ಆರಂಭಿಸಿದ್ದು, ನವ್ಯ ಸಾಹಿತ್ಯ ಉತ್ತುಂಗ ಸ್ಥಿತಿಯಲ್ಲಿದ್ದಾಗ – ಓದುಗರನ್ನೂ, ಸಹೃದಯರನ್ನು ಉಪೇಕ್ಷಿಸಿ, ಪ್ರತಿಮೆ, ಸಂಕೇತ, ಶಿಲ್ಪ ಸೌಂದರ್ಯಗಳಲ್ಲಿ ತಲ್ಲೀನರಾಗಿದ್ದ ನವ್ಯರ ನಡುವೆಯೇ ಕುಡಿಯೊಡೆದ ಆಲನಹಳ್ಳಿ ತಮ್ಮ ಕೃತಿಗಳಿಂದ ಓದುಗರನ್ನು ಸೂಜಿಗಲ್ಲಿನಂತೆ ಸೆಳೆದುಕೊಂಡಿದ್ದು, ಓದುಗವಲಯವನ್ನು ಗಮನಾರ್ಹ ರೀತಿಯಲ್ಲಿ ವಿಸ್ತರಿಸಿಕೊಂಡದ್ದು ಅವರ ವಿಶಿಷ್ಟ ವ್ಯಕ್ತಿತ್ವವನ್ನು ತೋರುತ್ತದೆ.

"ನವ್ಯ ಪ್ರಕಾರದ ಅತ್ಯುತ್ತಮ ಅಂಶಗಳನ್ನು ಸ್ವೀಕರಿಸಿಯೂ ಅದಕ್ಕೆ ಅಂಟಿಕೊಳ್ಳದೆ ಉಳಿದದ್ದು ಆಲನಹಳ್ಳಿಯವರ ವಿಶೇಷ. ಬಹುಪಾಲು ನವ್ಯ ಲೇಖಕರಂತೆ ತಮ್ಮ ಕೃತಿಗಳಿಗೆ ಪ್ರೇರಣೆಯನ್ನು ಕಾಮು, ಕಾಪ್ಕಾ ಅವರಿಂದ ಪಡೆಯದೆ, ಕುವೆಂಪು, ರಾವ್ ಬಹದ್ದೂರ್ ಅವರಂಥ ಲೇಖಕರಿಂದ ಪಡೆದ ಅನಾಥ ಪ್ರಜ್ಞೆ , ಉಸಿರು ಕಟ್ಟಿಸುವ ನಗರ ಜೀವನ, ಮಧ್ಯಮ ವರ್ಗದ ತಲ್ಲಣಗಳು, ಸಮೃದ್ಧ ಗ್ರಾಮೀಣ ಬದುಕಿನ ಅನುಭವಗಳನ್ನು ಬೊಗಸೆಯಲ್ಲಿ ತುಂಬಿಕೊಂಡು ಕೃತಿ ರಚಿಸಿದ ಆಲನಹಳ್ಳಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟರಾದರು. ಇವರು ತಮ್ಮ ಗ್ರಾಮೀಣ ಅನುಭವಗಳಿಗೆ ನಿಷ್ಠರಾಗಿ ಅತ್ಯಂತ ರಭಸದಿಂದ ಕೃತಿಗಳನ್ನು ಕಟ್ಟಿದರು. ಅಪಾರ ಜನಪ್ರಿಯತೆ, ಜನಮನ್ನಣೆಯನ್ನು ಗಳಿಸಿ ಕನ್ನಡದ ಮಹತ್ವದ ಕಾದಂಬರಿಕಾರರು ಎನಿಸಿಕೊಂಡರು"[1].

ನವ್ಯ ಸಾಹಿತ್ಯ ಸಂದರ್ಭಕ್ಕೆ ಕೃಷ್ಣರ ಪ್ರತಿಕ್ರಿಯೆ ಬಹುಶ: ಬೆರಗಿನದಾಗಿತ್ತು. ಕನ್ನಡದ ಪರಂಪರಾಗತ ಸಾಹಿತ್ಯದ ವಿದ್ಯಾರ್ಥಿಯಾಗಿದ್ದ ಕೃಷ್ಣ ಪರಂಪರೆಗೆ ಹೊರತಾದ, ಪರಂಪರೆಯನ್ನೇ ಪ್ರಶ್ನಿಸುವ ಈ ಹೊಸ ವಿಚಾರ ಕ್ರಾಂತಿಯನ್ನು ಮುಕ್ತ ಮನಸ್ಸಿನಿಂದಲೇ ಸ್ವೀಕರಿಸಿದರು. ಆದರೆ ವೈಚಾರಿಕವಾಗಿಯಲ್ಲ. ಭಾವನಾತ್ಮಕವಾಗಿ. ಆದುದರಿಂದಲೇ ಇವರ ಕಾವ್ಯ ಕೃತಿಗಳಾಗಲಿ, ಕಥೆ ಕಾದಂಬರಿಗಳಾಗಲಿ ನವ್ಯವೆಂದು ಅನಿಸದೆ ಇರುವುದು.

"ಶ್ರೀಕೃಷ್ಣ ಆಲನಹಳ್ಳಿಯವರ ಅನುಭವ ಗ್ರಹಿಸುವ ಬಗೆ ಬೆರಗು ಗೊಳಿಸುತ್ತದೆ. ಒಂದೇ ಘಟನೆಯನ್ನು ಹಲವು ಜನ ಹೇಳುವಾಗ ಅವರವರ ಪೂರ್ವಾನು ಗ್ರಹಗಳು ಕೆಲಸ ಮಾಡಿ ಪಾತ್ರಗಳಿಗೆ ವಾಸ್ತವಕ್ಕೆ ಮೀರಿದ ಬಣ್ಣ ಬಳಿಕ ದುರಂತವನ್ನೇ ಹೆಚ್ಚು ಕಾಣುತ್ತೇವೆ. ಆದರೆ ಆಲನಹಳ್ಳಿ, ಪ್ರತಿ ಪಾತ್ರವನ್ನು ಆಸಕ್ತಿಯಿಂದ ವೀಕ್ಷಿಸಿದ್ದಾರೆ. ತುಂಬು ಸಹೃದಯತೆಯಿಂದ ಅರ್ಥೈಸಿದ್ದಾರೆ. ಸಾಮಾನ್ಯ ಲೇಖಕನೊಬ್ಬನ ಬರಹದಲ್ಲಿ ವಿವರಗಳ ಕಳಕೊಂಡು ಕಪ್ಪು-ಬಿಳುಪಾಗುವ ಚಿತ್ರಗಳು, ವಾಸ್ತವದ ಆ ತುಣುಕುಗಳು, ಅಂತರ್ನೋಟಗಳು ಇವರ ಕಾದಂಬರಿಗಳಲ್ಲಿ ಅತಿ ಸಹಜವಾಗಿ ತೆರೆದುಕೊಳ್ಳುತ್ತವೆ"[2].

"ಆಲನಹಳ್ಳಿಯವರ 'ಕಾಡು' ಕಿರು ಕಾದಂಬರಿ ಬಹು ದೊಡ್ಡ ಹೆಸರು ಮಾಡಿರುವಂತಿದ್ದು. ಇಂದಿಗೂ ಕೂಡ ಕೃಷ್ಣರ ಕೃತಿಗಳಲ್ಲಿ ಏಕಮಾತ್ರವಾಗಿ ಹೆಸರಿಸಬಹುದಾದರೆ ಇದನ್ನೇ ಹೆಸರಿಸಬೇಕಾಗುತ್ತದೆ. ಆದರೂ 'ಕಾಡು' ಕೃತಿಯ ಶ್ರೇಷ್ಠತೆಯಿರುವುದು ನವ್ಯ ಕಾದಂಬರಿಯಾಗಿಯಲ್ಲ. ಒಂದು ಸಮೂಹದ ಕ್ರೌರ್ಯವನ್ನು ಚಿಕ್ಕ ಬಾಲಕನೊಬ್ಬನ ಮುಗ್ಧ ದೃಷ್ಟಿಕೋನದಿಂದ ತೋರಿಸುವ ಸೃಜನಶೀಲ ಕೌಶಲ ಈ

ಕೃತಿಯನ್ನು ಬಹುಶ: ಅನನ್ಯವಾಗಿ ಮಾಡಿತೆಂದು ಕಾಣುತ್ತದೆ. ಹಾಗೆ ನೋಡಿದರೆ ನವ್ಯ ದೃಷ್ಟಿಕೋನಕ್ಕೆ ಇದು ತೀರ ವಿರುದ್ಧವಾದ್ದೆಂದೇ ಹೇಳಬೇಕು. ಕಾರಣ ಕಾಡು ಕೃತಿಯ ನಿರೂಪಣಾ ದೃಷ್ಟಿ ಚಿಕ್ಕ ಹುಡುಗನದ್ದು ಎಂದಲ್ಲ. ನವ್ಯ ದೃಷ್ಟಿಕೋನದಲ್ಲಿ ಸಾರ್ವತ್ರಿಕವಾದದ್ದೆಂದರೆ ಐರನಿ (ವ್ಯಂಗ್ಯ, ಅಣಕು)ಭಾವನಾತ್ಮಕವಾಗಿ ಕೃಷ್ಣ ನವ್ಯ ಸಾಹಿತ್ಯ ಪರಿಸರಕ್ಕೆ ಸ್ಪಂದಿಸಿದರೂ, ಆತನದು ಬಹುಮುಖೀ ಪ್ರಜ್ಞೆಯಾಗಿರಲಿಲ್ಲ. ಐರನಿ –ಎನ್ನುವುದು ಅವನ ಜಾಯಮಾನಕ್ಕೆ ಸೇರಿದುದಲ್ಲ. ಆದ್ದರಿಂದಲೇ ಕೃಷ್ಣನ ಕೆಲವೊಂದು ಕವಿತೆಗಳನ್ನು ಬಿಟ್ಟರೆ ಬೇರೆಲ್ಲಿಯೂ ನವ್ಯದ ಛಾಯೆಯನ್ನು ಕೂಡ ಕಾಣಲಾರೆವು. ಭಾಷಾಶೈಲಿ, ನಿರೂಪಣಾ ವಿಧಾನ ಒಟ್ಟಾರೆ ತಾಂತ್ರಿಕತೆ – ಯಾವುದರಲ್ಲೂ ಕೃಷ್ಣ ಸಾಹಿತಿಗಳ ಸಾಹಿತಿಯಾಗದೆ ಕೇವಲ ಓದುಗರ ಸಾಹಿತಿಯಾಗುವುದನ್ನೆ ಇಷ್ಟಪಟ್ಟ ಹಾಗೆ ಕಾಣುತ್ತದೆ. ಈ ಅರ್ಥದಲ್ಲಿ ಕೃಷ್ಣ ನವೋದಯ ಕವಿಗಳಿಗೂ, ಅ.ನ.ಕೃ. ತ.ರಾ.ಸು. ಮುಂತಾದ ಪ್ರಗತಿಶೀಲ ಸಾಹಿತಿಗಳಿಗೂ ಹತ್ತಿರವಾದವರು. ಯಾಕೆಂದರೆ ಇವರೆಲ್ಲರೂ ಓದುಗರನ್ನು ನೇರವಾಗಿ ತಲುಪಲು ಬಯಸಿದವರು. ಸಾಹಿತ್ಯದ ಅಕ್ಷರ ರೂಪವನ್ನು ಒಂದು ಅನಿವಾರ್ಯ ಅಡ್ಡಿಯೆನ್ನುವ ರೀತಿಯಲ್ಲಿ ಸಹಿಸಿದವರು"[2] . ಈಗಿದ್ದೂ ಕೃಷ್ಣರದು ಯಾತಕ್ಕೆ ಭಿನ್ನ ರೀತಿಯ ಸಾಹಿತ್ಯವೆಂದರೆ, ಭಾವನಾತ್ಮಕವಾಗಿ ಅವರು ಗಾಂಭೀರ ಸಾಹಿತ್ಯಕ್ಕೆ ಕಮಿಟೆಡ್ ಆಗಿದ್ದುದೇ ಕಾರಣವಾಗಿದೆ. ಕೃಷ್ಣ ಜನಪ್ರಿಯತೆಯನ್ನು ಬಯಸಿದರೂ, ಜನಪ್ರಿಯತೆಗೆಂದೇ ಸಾಹಿತ್ಯ ರಚನೆ ಮಾಡಲಿಲ್ಲ. ಅಪಾರ ಓದುಗ ಬಳಗವನ್ನು ಬಯಸಿದರೂ, ಅವರು ಹೇಗೆ ಪ್ರತಿಕ್ರಿಯಿಸುತ್ತಾರೆ. ಏನು ಬಯಸುತ್ತಾರೆ ಎನ್ನುವುದನ್ನು ಮನಸ್ಸಿನಲ್ಲಿಟ್ಟುಕೊಂಡು ಇಂಥಾ ವಸ್ತುವನ್ನಾಗಲಿ, ಶೈಲಿಯನ್ನಾಗಲಿ ಆರಿಸಿಕೊಳ್ಳಲಿಲ್ಲ. ನವ್ಯ ಚಳುವಳಿ ಕುರಿತಾದ ಅವನ ಧೋರಣೆಗೂ ಇದೇ ಮಾತು ಹೊಂದುತ್ತದೆ. ನವ್ಯದ ತಂತ್ರವನ್ನು ಬಳಸಿಕೊಳ್ಳುವುದು. ಆ ಕಾಲದಲ್ಲಿ ಸಹಜವಾದ ಮಾರ್ಗವಾಗಿದ್ದರೂ ಕೃಷ್ಣ ಅದರಿಂದ ತನ್ನ ದೂರವನ್ನು ಕಾಯ್ದುಕೊಂಡವರೆನ್ನುವುದು ಗಮನಾರ್ಹವಾದ ಸಂಗತಿ. ತನಗೆ ತಾನೆ ಸಹಜವಾಗುವುದು. ತನ್ನ ವಿಧಾನವನ್ನು ತಾನಾಗಿ ರೂಪಿಸಿಕೊಳ್ಳುವುದು ಅವರಿಗೆ ಮುಖ್ಯವಾಗಿತ್ತು. ಈ ಎಲ್ಲ ವಿಚಾರಗಳಿಂದಾಗಿ ಕೃಷ್ಣ ನವ್ಯ ಕಾಲಘಟ್ಟದಲ್ಲಿ ಪ್ರಮುಖರೆನಿಸಿಕೊಂಡಿದ್ದಾರೆ.

ಅದೇ ರೀತಿ ಹೊಸಗನ್ನಡ ಸಾಹಿತ್ಯದ ಮಹತ್ವದ ಬರಹಗಾರರಲ್ಲಿ ಒಬ್ಬರಾದ ಪಿ.ಲಂಕೇಶರದು ಬಹುಮುಖ ಪ್ರತಿಭೆ ಮತ್ರವಲ್ಲ. ವೈವಿಧ್ಯಮಯ ಬದುಕು ಸಹ ಆಗಿದ್ದಿತು. ಕನ್ನಡ ಮತ್ತು ಇಂಗ್ಲೀಷ್ ಭಾಷಾ ಸಾಹಿತ್ಯಗಳಿಗೆ ಅತ್ಯಂತ ತೀವ್ರವಾಗಿ

ಸ್ಪಂದಿಸುವ ಇವರು ತಮ್ಮ ಸೃಜನಶೀಲ ರಚನೆಗಳನ್ನು ಸ್ವಂತಿಕೆಯನ್ನು ಮೆರೆದ ಸಾಹಿತಿ. ಇದೇ ಸಾಹಿತ್ಯ ಬಹುಮುಖವಾಗಿದೆ. ಅನೇಕ ಸಾಹಿತ್ಯಕ ಮತ್ತು ಸಾಮಾಜಿಕ ಸಮಸ್ಯಗಳ ಚರ್ಚೆಗೆ ವೇದಿಕೆ ಕಲ್ಪಿಸಿದರು.ಜೀವನದ ಕೊಳರು, ಕ್ಷುದ್ರತೆಗಳತ್ತ ಲಂಕೇಶರು ಗಮನ ಹರಿಸಿದರು. ತೀರ ಸಾಮಾನ್ಯವಾಗಿರುವ ಮನುಷ್ಯರ ಚಿತ್ತದಲ್ಲಿ ಹುತ್ತಗಟ್ಟಿದಂತಿರುವ ಅನೇಕ ಸಂಕೀರ್ಣ ಭಾವನೆಗಳ ಅಭಿವ್ಯಕ್ತಿಗಾಗಿ ಇವರು ತಮ್ಮ ಲೇಖನಿಯನ್ನು ಮುಡಿಪಾಗಿಟ್ಟರು. ಹಾಗಾಗಿ ಕಥೆ, ಕವನ, ನಾಟಕ, ಕಾದಂಬರಿ, ವಿಮರ್ಶೆ, ಆತ್ಮಕಥನ ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ಮಾತ್ರವಲ್ಲ. ಪತ್ರಿಕಾ ಬರವಣಿಗೆ, ಚುಟುಕ ಪ್ರತಿಕ್ರಿಯೆ ಸಂವಾದ, ಟೀಕೆ ಟಿಪ್ಪಣಿ ಮೊದಲಾದ ಎಲ್ಲ ಪ್ರಕಾರಗಳಲ್ಲೂ ತಮ್ಮ ತೀವ್ರತೆಯನ್ನು ಮೆರೆದರು.

"ವ್ಯಕ್ತಿ ಮತ್ತು ಸಮಾಜ ಪರಸ್ಪರ ಸಂದಿಸುವ ಬಿಂದುವಿನಲ್ಲಿ ಸಂಸ್ಕೃತಿ ಅರಳಬೇಕು. ಒಂದು ಸಮಾಜದ ಅವ್ಯವಸ್ಥೆಗೆ ಪ್ರತಿಯೊಬ್ಬ ವ್ಯಕ್ತಿ ಹೇಗೆ ಹೊಣೆಗಾರನಾಗುತ್ತಾನೋ ಹಾಗೆಯೇ ವ್ಯಕ್ತಿ ಅನುಭವಿಸುವ ನೋವು – ನಲಿವುಗಳಿಗೆ ಸಮಾಜದ ವ್ಯವಸ್ಥೆ ಕೂಡ ಕಾರಣವಾಗುತ್ತದೆ. ಇಂಥಲ್ಲಿ ನವ್ಯ ಸಾಹಿತ್ಯ ಮತ್ತು ದಲಿತ ಬಂಡಾಯ ಸಾಹಿತ್ಯದ ಧ್ಯೇಯ– ಧೋರಣೆಗಳು ಮಿಳಿತಗೊಂಡು ಹೊಸ ತತ್ವ ಅರಳಬೇಕಾಗುತ್ತದೆ. ಈ ಅರಳುವಿಕೆಗೆ ಸಂಚಲನೆಗೆ ಕೊಟ್ಟಿದ್ದು ಲಂಕೇಶರ ಸಾಹಿತ್ಯ"[4].

"ಲಂಕೇಶರ ಬದುಕು ಮತ್ತು ಸಾಹಿತ್ಯದ ಪರಿಶೀಲನೆ ಎಂದರೆ ಅದೊಂದು ಶುದ್ಧ ಮಾನವತ್ವದ ವಿವಿಧ ಮುಖಗಳ ಅಧ್ಯಯನ ಮತ್ತು ವಿಮರ್ಶನ. ಬದಲಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಘಟ್ಟಗಳಲ್ಲಿ ಬರಹಗಾರನಾದವನ ಜೀವಂತ ಪ್ರತಿಕ್ರಿಯೆ ಕಂಗೊಳಿಸುವುದನ್ನು ಲಂಕೇಶರ ಸಾಹಿತ್ಯದಲ್ಲಿ ಕಾಣುತ್ತೇವೆ. ಅವರ ಸಾಹಿತ್ಯದಲ್ಲಿ ಕಾಣುತ್ತೇವೆ. ಅವರ ಸಾಹಿತ್ಯದಲ್ಲಿ ಜೀವಂತಿಕೆ ಪುಟಿಯುತ್ತಿರುತ್ತದೆ. ಯಾವಾಗಲು ಸಾಹಿತ್ಯ ಸೃಷ್ಟಿ ತನ್ನನ್ನು ತಾನು ಒಡ್ಡಿಕೊಂಡು ಹೋರಾಡುವುದರ ಮೂಲಕ ಹುಟ್ಟುತ್ತದೆ ಎಂದು ನಂಬಿದವರು ಇವರು. ವ್ಯಕ್ತಿಗಿರುವ ಪರಿಮಿತಿಗಳು ಅವರಿಗೆ ಚೆನ್ನಾಗಿ ಗೊತ್ತಿದೆ. ಘೋಷಣೆ ಅವರು ಇಷ್ಟಪಡದ ಪರಿಕರವಾದರೂ ಅವರ ಘೋಷಣೆ ಬೇರೆಯೇ ರೀತಿಯದು. ಶಬ್ದಗಳಲ್ಲಿಯ ಗುಡುಗು ಮಿಂಚು ಹುಟ್ಟಿಸುವ ಗುಣದ್ದು"[5].

ನವ್ಯ ಪ್ರಜ್ಞೆಯ ಉನ್ನತ ಶಿಖರವಾಗಿರುವ ಲಂಕೇಶರ ವ್ಯಕ್ತಿತ್ವ ಮತ್ತು ಸಾಹಿತ್ಯ ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ಮಹತ್ವ ಪೂರ್ಣವಾದುವು. ಏಕೆಂದರೆ

ಸಾಂಸ್ಕೃತಿಕ ವಾಗ್ವಾದಗಳಿಗೆ ಅವರು ಸಾಹಿತ್ಯಕ ವೇದಿಕೆಯೊಂದನ್ನು ರೂಪಿಸಿಕೊಟ್ಟರು. ಮನುಷ್ಯ ಸಂಬಂಧದ ಸಂಕೀರ್ಣತೆಗಳನ್ನು ಕಾಣಿಸಿ ಅದಕ್ಕೆ ಹಲವು ಹೊಸ ಆಯಾಮಗಳನ್ನು ದೊರಕಿಸಿಕೊಟ್ಟರು. ಮನುಷ್ಯ ಸಂಬಂಧಗಳಲ್ಲಿನ ಸಂವಹನದ ಬಿರುಕು ಮತ್ತು ತೊಡಕುಗಳನ್ನು ಲಂಕೇಶ ಅವರು ಕಲಾತ್ಮಕವಾಗಿ ಚಿತ್ರಿಸಿಕೊಟ್ಟಿದ್ದಾರೆ. ಕಾದಂಬರಿಗಳು ಲಂಕೇಶರ ಬೆಳವಣಿಗೆಯ ಹಾದಿಯನ್ನು ತೋರಿದವು. ಮೊದಲನೆಯ ಕಾದಂಬರಿ 'ಬಿರುಕು' ನವ್ಯ ಧೋರಣೆಯ ಪ್ರಾತಿನಿಧಿಕ ಕೃತಿಯಾಗಿ ಬಂದರೆ ಎರಡನೆಯ ಕಾದಂಬರಿ 'ಮುಸ್ಸಂಜೆಯ ಕಥಾಪ್ರಸಂಗ' ವಾಸ್ತವವಾಗಿ ಬರವಣಿಗೆಯಾಗಿ ಸಾಮೂಹಿಕ ನೆಲೆಯ ಬೇರೆ ಬೇರೆ ಆಯಾಮಗಳನ್ನು ಕಾಣಿಸಿಕೊಟ್ಟಿತು. ಕೊನೆಯ ಕಾದಂಬರಿ 'ಅಕ್ಕ' ನವ್ಯ ಪ್ರಜ್ಞೆಯ ಸೆಳೆತ ಮತ್ತು ಲಂಕೇಶರ ಆಲೋಚನೆಗಳಲ್ಲಿ ಮಿಳತಗೊಂಡಿವೆ. ನವ್ಯವನ್ನು ಸಮಾಜ ಮುಖಿಯಾಗಿಸಿದ ಪ್ರಾತಿನಿಧಿಕ ಕೃತಿಯಾಗಿ ದಲಿತ – ಬಂಡಾಯ ಚಿಂತನೆಗಳನ್ನು ಮೂಲದ್ರವ್ಯವನ್ನಾಗಿಸಿಕೊಂಡ ಕೃತಿಯಾಗಿ ಅದು ಮೂಡಿಬಂದಿದೆ.

ಮನುಷ್ಯ ಜೀವನದ ಎಲ್ಲ ಘಟ್ಟಗಳನ್ನು ನಾವು ಲಂಕೇಶರ ಸಾಹಿತ್ಯದಲ್ಲಿ ಕಾಣುತ್ತೇವೆ. ಸಾಹಿತ್ಯದ ಹೊಸ ಬಗೆಯ ಶೈಲಿ ಮತ್ತು ತಂತ್ರಗಳ ಬಳಕೆಯತ್ತ ಒಲವನ್ನೂ, ವಿವಿಧ ಬಗೆಯ ಒಳನೋಟಗಳ ಚಿತ್ರಣದತ್ತ ನಿರಂತರ ಆಸಕ್ತಿಯನ್ನು ಇಟ್ಟುಕೊಂಡಿದ್ದ ಅವರು ಚಿತ್ರಿಸಿದ್ದು. ವಾಸ್ತವ ಬದುಕಿನ ಕಹಿಯನ್ನು ಮತ್ತು ಸುಖದ ಕನಸಿನ ಸಿಹಿಯನ್ನು, ವರ್ಗ– ವರ್ಣ ಮತ್ತು ಲಿಂಗ ಸಂಬಂಧೀ ಆಲೋಚನೆಗಳು ಇವರಲ್ಲಿ ಹೇಳಿಕೆಗಳಾಗಿ ಬರದೆ, ಸೃಜನಶೀಲ ನೆಲೆಗಟ್ಟಿನಲ್ಲಿ ಬದುಕನ್ನು ಚಿತ್ರಿಸುವ ರೂಪದಲ್ಲಿ ಬರುತ್ತವೆ. ಮನುಷ್ಯನ ಮೂಲಭೂತ ಅನ್ವೇಷಣೆಯೇ ನವ್ಯವೆಂದೂ,ಬದುಕಿನ ಶೈಲಿಯ ಒಂದು ಅಂಗವಾಗಿ ನವ್ಯತೆ ಕಾಣಿಸಿಕೊಳ್ಳುವುದೆಂದೂ ವಿಶ್ಲೇಷಿಸಿಕೊಟ್ಟ ಮೊದಲ ಗಂಭೀರ ಬರಹಗಾರ ಲಂಕೇಶರು.

ನವ್ಯದ ವ್ಯಕ್ತಿ ವಿಶಿಷ್ಟವಾದೀ ಲಕ್ಷಣಗಳಿಂದ ರೂಪಿತಗೊಂಡ ಅವರ ಮನಸ್ಸು ಮತ್ತು ವ್ಯಕ್ತಿತ್ವಗಳು ಅವರ ಬರಹದ ಮೇಲೆ ನೇರವಾಗಿ ಪರಿಣಾಮ ಬೀರಿವೆ. ವ್ಯವಸ್ಥೆಯ ವಂಚನೆ, ಮೋಸ, ಥಳಕುಗಳು ಅವುಗಳಿಂದ ಶೋಷಣೆಗೆ ಒಳಗಾಗುವ ವ್ಯಕ್ತಿಗಳು: ಮೋಸಗೊಳಿಸುವ ಮತ್ತು ಮೋಸಕ್ಕೆ ಒಳಗಾಗುವ ಪ್ರತೀಕಗಳತ್ತ ಅವರ ಆಸಕ್ತಿ ಹರಿಯುತ್ತಿತ್ತು. ತಾನು ಹುಟ್ಟಿ ಬೆಳೆದು ಬಂದ ಪರಿಸರಕ್ಕೆ ಪರಕೀಯನಾಗುವ ಆಂತರಿಕ ತಲ್ಲಣ ಮತ್ತು ತಳಮಳಗಳು, ವ್ಯಕ್ತಿತ್ವಕ್ಕೊಂದು ನಿಲ್ದಾಣವಿಲ್ಲದೇ ಸದಾ ಚಡಪಡಿಸುವ, ತಹತಹಿಸುವ ಭ್ರಮಾಧೀನ ಬದುಕು, ಮನುಷ್ಯನ ಕುಬ್ಜತೆ–ಕ್ಷುದ್ರತೆ,

ಕ್ಷುಲ್ಲಕತೆ – ಸಣ್ಣತನ, ಸಿನಿಕತನ, ವ್ಯಕ್ತಿಯ ಅಂತರಂಗ ನಿರೀಕ್ಷಣೆ ಮತ್ತು ವ್ಯಕ್ತಿತ್ವದ ನಡುವಿನ ಸಂಘರ್ಷ, ಕಾಮ ಮತ್ತು ಅದರ ಲೋಲುಪತೆ– ಇವೆಲ್ಲ ಲಂಕೇಶರ ಸಾಹಿತ್ಯದಲ್ಲಿ ಇರುವಂತಹ ಅಂಶಗಳೇ ಆಗಿವೆ.

ನವ್ಯ ಪರಿಸರ ಹೆಣ್ಣನ್ನು ಪುರುಷ ಕಣ್ಣಿನಲ್ಲಿ ನೋಡಿತು. ಜೊತೆಗೆ ಗಂಡು – ಹೆಣ್ಣಿನ ಸಂಬಂಧದ ಸ್ವರೂಪವನ್ನು ವ್ಯಕ್ತಿಗತ ದೃಷ್ಟಿಕೋನದಲ್ಲಿಟ್ಟು ಪರಿಶೀಲಿಸಿತು. ಲಂಕೇಶರ ಮೊದಲ ಬರಹಗಳಲ್ಲಿ ಮಹಿಳಾ ಸಂವೇದನೆಗಳು ಸಂದರ್ಭದ ಕೂಸುಗಳಾಗಿ ಬರುತ್ತವೆಯೇ ಹೊರತು ಸ್ವತಂತ್ರ ವ್ಯಕ್ತಿತ್ವದ ಸ್ವಾವಲಂಬೀ ನೆಲೆಯಲ್ಲಿ ವಿಶ್ಲೇಷಣೆಗೊಂಡಿಲ್ಲ. ಆದರೆ ಬದಲಾದ ನವ್ಯೋತ್ತರ ಸಂದರ್ಭದಲ್ಲಿ ಲಂಕೇಶರು ಹೆಣ್ಣಿನ ಶಕ್ತಿ – ಸಾಧ್ಯತೆಗಳತ್ತ ತಮ್ಮ ಬರಹವನ್ನು ಕೇಂದ್ರೀಕರಿಸಿದರು. ಹೀಗಾಗಿ ಸ್ತ್ರೀ – ಪುರುಷರ ಸಮಾನತೆ, ಮಹಿಳಾ ಸ್ವಾತಂತ್ರ್ಯ, ಹೆಣ್ಣು – ಗಂಡಿನ ನಡುವಣ ಬಿಕ್ಕಟ್ಟು, ಅಹಂಕಾರ ದ್ವೇಷ, ಪ್ರತೀಕಾರ, ಅಸಹಾಯಕತೆಗಳು, ಸ್ತ್ರೀ ಶೋಷಣೆ ಮತ್ತು ಸ್ತ್ರೀ ಚೈತನ್ಯ, ಜೀವನದ ಯಾವುದೇ ಚಿಕ್ಕಟ್ಟಿನಲ್ಲೂ ಬದುಕಿನ ಹಂಬಲವನ್ನು ಮತ್ತು ಬದುಕನ್ನು ರೂಪಿಸಿಕೊಳ್ಳುವ ಛಲವನ್ನು ತೋರುವ ಹೆಣ್ಣುಗಳು ಲಂಕೇಶರ ಕಾದಂಬರಿಗಳಲ್ಲಿ ಚಿತ್ರಿತವಾಗಿವೆ.

ಸ್ವಾತಂತ್ರ್ಯೋತ್ತರ ಗ್ರಾಮ ಭಾರತದಲ್ಲಿ ಆಧುನಿಕತೆ ಉಂಟು ಮಾಡಿದ ಬದಲಾವಣೆಯನ್ನು, ಬದಲಾವಣೆಗೆ ಅಣಿಗೊಂಡಿರುವ ಆಧುನಿಕ ಮನಸ್ಸುಗಳನ್ನು ಮತ್ತು ಹಳ್ಳಿಗಳ ಸ್ಥಿತಿಗತಿಗಳಲ್ಲಿ ಉಂಟಾದ ಸಾಮಾಜಿಕ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಲಂಕೇಶ ಕೃತಿಗಳನ್ನು ಕಾಣಬಹುದಾಗಿದೆ.

ತಮ್ಮ ಕೃತಿಗಳ ರಚನೆಯ ವೈಶಿಷ್ಟ್ಯತೆಯಿಂದಾಗಿ ಶ್ರೀಕೃಷ್ಣ ಅಲನಹಳ್ಳಿ ಮತ್ತು ಪಿ.ಲಂಕೇಶರು ನವ್ಯ ಕಾಲಘಟ್ಟದ ಪ್ರಮುಖ ಕಾದಂಬರಿಕಾರರಾಗಿದ್ದಾರೆ.

ಲಂಕೇಶರ ಬದುಕು ಮತ್ತು ಬರಹ

ಹೊಸಗನ್ನಡ ಸಾಹಿತ್ಯದ ಅತ್ಯಂತ ವಿಲಕ್ಷಣ ಮತ್ತು ದೈತ್ಯ ಸ್ವರೂಪದ ಪ್ರತಿಭೆ ಲಂಕೇಶರು. ಇವರ ಬದುಕು ಮತ್ತು ಸಾಹಿತ್ಯ ಸ್ವರೂಪ ವಿಶಿಷ್ಟವಾಗಿದೆ. ಲಂಕೇಶರು ಬದುಕಿ ಬಾಳಿದ ಸಾಮಾಜಿಕ ಮತ್ತು ಸಾಂಸ್ಕೃತಿಕ ಸನ್ನಿವೇಶಗಳು ಅವರೊಳಗಿನ ಪ್ರತಿಭಾ ಪ್ರವಾಹದಿಂದ ಎಲ್ಲ ಸೆಲೆಗಳನ್ನು ಹೊರಹೊಮ್ಮಿಸುವುದಕ್ಕೆ ಪೂರಕವಾಗಿ ಕೆಲಸ ಮಾಡಿದುವೆಂಬುದು ಬಹು ದೊಡ್ಡ ಚೋದ್ಯವೇ ಆಗಿದೆ.

ನವ್ಯ ಸಾಹಿತ್ಯ ಮತ್ತು ದಲಿತ ಬಂಡಾಯ ಸಾಹಿತ್ಯದ ಧ್ಯೇಯ ಧೋರಣೆಗಳಿಗೆ ಬದ್ಧವಾದರೂ ಬಹುಬೇಗ ಇವೆರಡನ್ನು ಪ್ರತ್ಯೇಕವಾಗಿ ನೋಡದೆ, ಇವೆರಡೂ ಸಿದ್ಧಾಂತಗಳನ್ನೂ ಬೆಸೆಯುವ, ಆ ಮುಖೇನ ಕಾಣಿಸಿಕೊಂಡ ಸಾಂಸ್ಕೃತಿಕ ಸಂರಚನೆಗಳನ್ನು ತಮ್ಮ ಎಲ್ಲಾ ಬರಹಗಳಲ್ಲಿ ವಸ್ತು, ಪಾತ್ರ, ಸಂಭಾಷಣೆ, ಶೈಲಿಗಳಲ್ಲಿ ಇಡಿಯಾಗಿಯೂ, ಬಿಡಿಬಿಡಿಯಾಗಿಯೂ ವ್ಯಕ್ತಪಡಿಸಿರುವುದು ಕಂಡು ಬರುತ್ತದೆ.

ಮನುಷ್ಯನ ಸಣ್ಣತನ, ಮುಗ್ಧತೆ, ಪೊಳ್ಳು ಸ್ಥಿತಿಗತಿಗಳನ್ನು ಬಹಿರಂಗಗೊಳಿಸುವ ಮಾಧ್ಯಮವಾಗಿ ಸಾಹಿತ್ಯವನ್ನು ದುಡಿಸಿಕೊಂಡ ಕನ್ನಡ ಪ್ರತಿಭೆ ಲಂಕೇಶರದು. ನವವಸಾಹತುಶಾಹಿಯಿಂದ ಉಂಟಾದ ಬದುಕಿನ ಪಲ್ಲಟ, ಜಿಜ್ಞಾಸೆ, ಸಂಕೀರ್ಣತೆ, ಮನಸ್ಸಿನಾಳದ ಭೋಳೆತನ, ಖಿನ್ನಮನಸ್ಸಿನ ಉದ್ವಿಗ್ನತೆ, ತೀಕ್ಷ್ಣವಾದ ವಿಡಂಬನೆ ಅವರ ಸಾಹಿತ್ಯದ ಪ್ರಧಾನ ನೆಲೆಗಳು. ನಗರಾಭಿಮುಖ ಚಲನೆ, ಪಟ್ಟಣ-ಹಳ್ಳಿಯ ಮುಖಾಮುಖಿ, ಈ ಬಿಕ್ಕಟ್ಟಿನಲ್ಲಿ ನಡೆಸುವ ಸಾಂಸ್ಕೃತಿಕ ಶೋಧನೆಯಾಗಿ ಲಂಕೇಶರ ಸಾಹಿತ್ಯ ಮೈದಾಳುತ್ತದೆ. ತನ್ನ ಅರಿವಿಗೂ, ಇರವಿಗೂ ನಡುವಿನ ಬಿಕ್ಕಟ್ಟು ಲಂಕೇಶರನ್ನು ಬಹುವಾಗಿ ಕಾಡುತ್ತದೆ.

ಲಂಕೇಶರದು ಪೂಸಿ ಹೊಡೆಯುವ ಬರವಣಿಗೆಯಲ್ಲ, ಟೀಕಿಸುವ ಓದುಗನನ್ನು ತೀವ್ರಗೊಳಿಸುವ ಬರವಣಿಗೆ. ಖಡಾ-ಖಂಡಿತವಾದ ಮಾತು ಮತ್ತು ಕಂಠೋಕ್ತ ನುಡಿಯಲ್ಲಿ ಯಾವುದನ್ನೂ ಆದರೂ ಮುಚ್ಚು ಮರೆಯಿಲ್ಲದೆ ಹೇಳಬಹುದು. ಏನನ್ನು? ಎಷ್ಟನ್ನು? ಮತ್ತು ಹೇಗೆ? ಹೇಳಬೇಕೆಂಬುದರ ನಿರಂತರ ಶೋಧ ನಡೆಸುವುದು ಅವರ ಬರವಣಿಗೆಯ ವೈಶಿಷ್ಟ್ಯ.

ಮನುಷ್ಯನ ಮೂಲ ಪ್ರವೃತ್ತಿಗಳ ಬಗ್ಗೆ ಸಹಾನುಭೂತಿ ಇರಿಸಿಕೊಂಡು, ತಮ್ಮ ಸೃಜನಶೀಲ ಸಂದರ್ಭದ ಕೇಂದ್ರ ಕಾಳಜಿಯಲ್ಲಿ ನಾಗರಿಕ ಬದುಕಿನ ದುರಂತವನ್ನು

‘ಕಂಡದ್ದನ್ನು ಕಂಡ ಹಾಗೆ‘ ಹೇಳುವ ‘ಪ್ರಸ್ತುತ’ ವಾದದ್ದನ್ನು ಅತ್ಯಂತ ತೀವ್ರತೆಯಿಂದ ಬರೆಯುವ ಲಂಕೇಶರು ವ್ಯಕ್ತಪಡಿಸುವ ಸಿಟ್ಟು ಸಾಮಾಜಿಕ ಪ್ರೀತಿಯದು; ದುಷ್ಟ ರಾಜಕಾರಣದ ಮೇಲಿನ ಕೋಪದ್ದು: ಆದರೆ ಸ್ವಾರ್ಥ ಮೂಲದ್ದಲ್ಲ. ‘ನನ್ನೆಲ್ಲ ಆನಂದ ಬರೆಯುವುದರಲ್ಲಿ‘ ಎನ್ನುವ ಲಂಕೇಶರ ಬರವಣಿಗೆಯಲ್ಲಿ ಅವರ ಬಾಲ್ಯದ ನೆನಪುಗಳು ಬದುಕಿನುದ್ದಕ್ಕೂ ಪ್ರಭಾವಿಸಿವೆ. ಅವರ ಅಭಿವ್ಯಕ್ತಿಗೆ ದಕ್ಕಿರುವುದು ಮನುಷ್ಯನ ಒಳಗಿನ ಟೊಳ್ಳುತನ, ಸಣ್ಣತನ, ಅವಮಾನ, ಸಂಕಟ, ನೋವು ಇತ್ಯಾದಿ ನಕಾರಾತ್ಮಕ ಅಂಶಗಳೇ. ಸುಂದರ ಸಮಾಜಕ್ಕಾಗಿ ಕನಸುವ, ಸಮಾಜವನ್ನು ಹಾಳುಗೆಡಹುತ್ತಿರುವ ಅನಿಷ್ಟದ ಬಗ್ಗೆ ಆಕ್ರೋಷ ವ್ಯಕ್ತಪಡಿಸುವ, ಪ್ರಜಾಪ್ರಭುತ್ವದ ಹೆಸರಿನಲ್ಲಿ ನಡೆಯುತ್ತಿರುವ ಅನ್ಯಾಯದ ವಿರುದ್ಧ ಸಿಡಿದೇಳುವ ಗುಣ ಅವರದು. ಆದ್ದರಿಂದಲೇ ಅವರೆನ್ನುತ್ತಾರೆ “ಲೇಖಕ ಯಾರಿಗೆ ಬರೆಯಬೇಕು? ಮುಖ್ಯವಾಗಿ ತನಗೇ; ತನ್ನ ವೃತ್ತಿಗೆ, ತನ್ನ ಅನುಭವಕ್ಕೆ ಅನ್ಯಾಯ ಮಾಡದಿರುವುದಕ್ಕೆ“*6. ತನ್ನ ಒಳಗಿನ ತುಡಿತದ ನೆಲೆಗಳನ್ನು ಕಂಡುಕೊಳ್ಳುವ ಪ್ರಯತ್ನವೇ ನಿಜವಾದ ಸಂವೇದನಾಶೀಲ ಬರಹಗಾರನ ಲಕ್ಷಣ.

ಲಂಕೇಶರು ತಮ್ಮ ಬರವಣಿಗೆಯನ್ನು ಕುರಿತು“ನಾನು ಅನೇಕ ಸಲ ಬರೆಯುವುದು ಕಾಲ ಮತ್ತು ಸಂದರ್ಭದ ಒತ್ತಾಯಕ್ಕೆ ಸಿಕ್ಕು ಯಾವಾಗಲೋ ಬರೆಯುತ್ತೇನೆ. ಅದು ಅತ್ಯಂತ ಪ್ರಾಮಾಣಿಕನಾಗಿ ನನ್ನನ್ನು ನನ್ನೊಳಗಿನ ಶೂನ್ಯವನ್ನು ಬಿಚ್ಚಿಡುತ್ತದೆ. ಆದರೆ ನನ್ನಲ್ಲೇನೋ ಅತ್ಯಮೂಲ್ಯವಾದದ್ದೊಂದು ಇದೆಯೆಂದು ನನಗೆ ಗೊತ್ತಿದೆ. ಅದನ್ನು ಪ್ರತಿಭೆಯೆಂದು ಕರೆಯಬಹುದು. ನಾನು ಬಹಳ ಅಹಂಕಾರಿ. ಅತೀ ಜಂಬದವನು. ಆದರೆ ಅದು ನನ್ನಲ್ಲಿದೆ. ಅದನ್ನು ಮುಟ್ಟಿ ನೋಡಬಲ್ಲೆ ಅನಿಸುವ ಹಾಗಿದೆ. ಒಳ್ಳೆಯ ಭರ್ಜರಿಯಾಗಿ ಬೆಳೆದ ಕುಂಬಳಕಾಯಿಯ ಹಾಗಿದೆ. ನನ್ನನ್ನು ಅದು ಪುಳಕಗೊಳಿಸುತ್ತದೆ. ಅದೊಂದು ನನಗಿರುವ ಭರವಸೆ. ಇಲ್ಲದಿದ್ದರೆ ಇಷ್ಟು ಹೊತ್ತಿಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೆ. ಅದು ನನ್ನ ಒಳಗೂ – ಹೊರಗೂ ಇದ್ದು ನನಗೆ ಸಹಿಸಿಕೊಳ್ಳುವುದಕ್ಕೆ ಸಹಾಯ ಮಾಡಿದೆ. ನನ್ನ ಹೊರಗಿನ ಬದುಕು ಆಶ್ಚರ್ಯಕರವಾಗಿದೆ. ಕೆಲವರು ಸಂವೇದನಾಶೂನ್ಯರಾಗಿ ಎಷ್ಟು ಸಂತೋಷವಾಗಿರುತ್ತಾರೆಂದು ಆಶ್ಚರ್ಯವಾಗುತ್ತದೆ. ಆ ಸಂತೋಷ ಒಂದು ಮುಖವಾಡವಿರಬಹುದು. ಆದರೆ ನಾನು, ಈ ಬಡಪ್ರಾಣಿ ಮುಖವಾಡವನ್ನು ಧರಿಸಲಾರೆ“*7.

ಹೀಗೆನ್ನುವ ಲಂಕೇಶರಿಗೆ ಒಂದು ಮುಖವಿಲ್ಲ. ಅಧ್ಯಾಪಕ, ನಿರ್ದೇಶಕ, ಕೃಷಿಕ, ನಟ, ರಾಜಕಾರಣಿ, ಪತ್ರಿಕೋದ್ಯಮಿ – ಹೀಗೆ ಹಲವು ಹತ್ತು ಮುಖಗಳು. ಈ ಬಗೆಯ ದಶರೂಪಗಳಲ್ಲಿ ತನ್ನ ಪ್ರತಿಭಾ ವಿಲಾಸವನ್ನು ಮೆರೆದು ಸಾಂಸ್ಕೃತಿಕ ರಾಯಭಾರಿಯಾಗಿ ಕನ್ನಡ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದ ಲೇಖಕ. ಈ ಸಂದರ್ಭದಲ್ಲಿ ಅವರ ಈ ಹೇಳಿಕೆ ಗಮನಾರ್ಹವಾಗುತ್ತದೆ. " ಸೃಜನಶೀಲತೆಯ ಹಲವು ಮಾಧ್ಯಮಗಳನ್ನು ಹುಡುಕಿ ಹೊರಟವನು ನಾನು. ಆದರೆ ಯಾವಾಗಲೂ ಜನರನ್ನು ತಲುಪಬೇಕೆನ್ನುವುದೇ ನನ್ನ ಉದ್ದೇಶ. ಕತೆ, ಕಾದಂಬರಿ, ಕವನ, ನಾಟಕ ಬರೆದೆ. ಇನ್ನೂ ಹೆಚ್ಚು ಜನರನ್ನು ತಲಪಬೇಕೆನಿಸಿದಾಗ ಸಿನಿಮಾ ಮಾಡಿದೆ. ಪತ್ರಿಕೆ ಪ್ರಾರಂಭಿಸಿದೆ. ಈ ಗುರಿ ನನಗೆ ಮೊದಲಿನಿಂದಲೂ ಇತ್ತು"*8 ಎನ್ನುತ್ತಾರೆ.

ಜನರನ್ನು ಮುಟ್ಟಬೇಕೆಂಬ ಲಂಕೇಶರಂಥ ಪ್ರಬುದ್ಧ ಬರಹಗಾರರ ಆಶಯಗಳು ಸಾಮಾಜಿಕ ಆಶಯಗಳಾಗಿರುತ್ತವೆ. ಯಾರಿಗಾಗಿ ನಾವು ಬರೆಯಬೇಕು ಎಂಬ ಪ್ರಶ್ನೆ ಸದಾ ಲಂಕೇಶರಲ್ಲಿ ಜಾಗೃತವಾಗಿರುತ್ತಿತ್ತು. ಸಾಹಿತ್ಯ ಮತ್ತು ಸಮಾಜದ ಸಂಬಂಧಗಳ ಹುಡುಕಾಟವೇ ಇದು. ಲಂಕೇಶರು ನಮ್ಮ ನಡುವಿನ ಅನನ್ಯ ಬರಹಗಾರರಾಗಿದ್ದವರು. ಅವರ ಸೃಜನಶೀಲ ಪ್ರತಿಭೆಗೆ ಹಲವು ಮುಖಗಳಿವೆ. ಇವತ್ತಿನ ಬದುಕಿಗೆ ಇಂದೇ ತುರ್ತಿನಲ್ಲಿ, ತೀಕ್ಷ್ಣವಾಗಿ ಪ್ರತಿಕ್ರಿಯಿಸುವ ಅವರ ಸೂಕ್ಷ್ಮ ಮನಸ್ಸು ಕಾಲದಿಂದ ಕಾಲಕ್ಕೆ ಬೆಳೆಯುತ್ತಾ ಬಂದ ಬಗೆ ಅತ್ಯಂತ ಕುತೂಹಲಕಾರಿಯಾದ ಸಂಗತಿ. ಹೀಗೆ ಲಂಕೇಶರ ಬದುಕು ಮತ್ತು ಸಾಹಿತ್ಯದ ಪರಿಶೀಲನೆ ಎಂದರೆ ಅದೊಂದು ಶುದ್ಧ ಮಾನವತ್ವದ ವಿವಿಧ ಮುಖಗಳ ಅಧ್ಯಯನ ಮತ್ತು ವಿಮರ್ಶನ.

ಲಂಕೇಶರು 1935 ರ ಮಾರ್ಚ 8 ರಂದು ಅರೆ ಮಲೆನಾಡಿನ ಕೊನಗವಳ್ಳಿಯಲ್ಲಿ ಲಿಂಗಾಯಿತ ಕುಟುಂಬದ ನಂದಿಬಸಪ್ಪ ಮತ್ತು ದೇವೀರಮ್ಮ ಅವರ ಐದನೇ ಮಗನಾಗಿ ಹುಟ್ಟಿದರು. ಇವರ ಪ್ರಾಥಮಿಕ ವಿದ್ಯಾಭ್ಯಾಸ ನಡೆದದ್ದು ಹಾರನಹಳ್ಳಿಯಲ್ಲಾದರೆ, ಇಂಟರ್ ಮೀಡಿಯೇಟ್ ಶಿಕ್ಷಣ ಪಡೆದದ್ದು ಶಿವಮೊಗ್ಗದಲ್ಲಿ (1952-55) ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇಂಗ್ಲೀಷ್ ಎಂ.ಎ., ಶಿಕ್ಷಣವನ್ನು (1958-59) ಪಡೆದರು.

ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವಾಗಲೇ (1955-56) ಜಿ.ಪಿ.ರಾಜರತ್ನಂರವರ ಪ್ರಭಾವ – ಪ್ರೇರಣೆಗಳಿಂದ ಕವನ ಕಟ್ಟಿದರು. 1956 ರವರೆಗಿನ ಲಂಕೇಶರ ಇಂಚರದಪದ್ಯಗಳು ಪದ್ಯಾಂಜಲಿ ಎಂಬ

ಜಿ.ವಿ.ರಾಜರತ್ನಂರ ಸಂಪಾದಕತ್ವದ ಪುಸ್ತಕದಲ್ಲಿ ಪ್ರಕಟವಾದುವು. ಕನ್ನಡದ ಶ್ರೇಷ್ಠ ಪ್ರತಿಭೆಯೊಂದು ಬೆಳಕಿಗೆ ಬರಲು ಇದು ಕಾರಣವಾಯಿತು. 1961 ರಲ್ಲಿ ಲಂಕೇಶರು ಇಂದಿರಾ ಅವರನ್ನು ವಿವಾಹವಾದರು.

1959 ರಿಂದ 1962 ರವರೆಗೆ ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕ ರಾಗಿದ್ದ ಲಂಕೇಶರು ಅನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ (1962-65), ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ (1965-66) ಮತ್ತು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ (1966-78) ಅಧ್ಯಾಪಕರಾಗಿ ಸೇವೆ ಸಲ್ಲಿಸಿ, 1978 ರಲ್ಲಿ ಅಧ್ಯಾಪಕರ ವೃತ್ತಿಗೆ ರಾಜೀನಾಮೆ ನೀಡಿ ಸಿನಿಮಾರಂಗದಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ಅಧ್ಯಾಪಕ ವೃತ್ತಿಗೆ ರಾಜೀನಾಮೆ ನೀಡುವ ಮುನ್ನವೇ ಸಿನಿಮಾ ನಿರ್ದೇಶಕರಾಗಿದ್ದ ಲಂಕೇಶರು 1979 ರಲ್ಲಿ 'ಪಲ್ಲವಿ' ಚಿತ್ರವನ್ನು ನಿರ್ದೇಶಿಸಿದರು. ಈ ಚಿತ್ರ ನಿರ್ದೇಶನಕ್ಕೆ ಅವರಿಗೆ ರಾಷ್ಟ್ರ ಪ್ರಶಸ್ತಿ ಬಂದಿತು. ಅವರ ಮೊದಲ ಪ್ರಯತ್ನವೇ ಯಶಸ್ಸನ್ನು ತಂದುಕೊಟ್ಟಿತು. ನಂತರ 'ಎಲ್ಲಿಂದಲೋ ಬಂದವರು', 'ಅನುರೂಪ', 'ಖಂಡವಿದೆಕೋ' ಚಿತ್ರಗಳನ್ನು ನಿರ್ದೇಶಿಸಿದರು. 1980 ರಲ್ಲಿ 'ಲಂಕೇಶ್ ಪತ್ರಿಕೆ' ಆರಂಭಿಸಿದರು. ಇದು ಕರ್ನಾಟಕದ ಸಾಮಾಜಿಕ ರಾಜಕಾರಣದಲ್ಲಿ ಪ್ರಧಾನ ಪಾತ್ರವಹಿಸಿತು.

1970 ರ ವೇಳೆಗೆ ನವ್ಯ ಕವಿಗಳ ಪ್ರಾತಿನಿಧಿಕ ಪದ್ಯಗಳ ಸಂಕಲನವಾದ ಅಕ್ಷರ ಹೊಸ ಕಾವ್ಯವನ್ನು ಸಂಪಾದಿಸಿದರು. ಮುಂದೆ ಪಾಂಚಾಲಿ(1974) ಎಂಬ ದೀಪಾವಳಿ ಸಂಚಿಕೆ ಹೊರತಂದು ವಿಶೇಷ ಮಾದರಿ ಒದಗಿಸಿದರು.

'ಪತ್ರಿಕೆ' ಲಂಕೇಶರ ಬರವಣಿಗೆಗೆ ದೊಡ್ಡ ವ್ಯಾಪ್ತಿ ತಂದಿತು. ಹೊಸ ತತ್ವ, ಹೊಸ ಚಿಂತನೆ, ಸಾಹಿತ್ಯಕ ವ್ಯಾಖ್ಯಾನ,ವಿಮರ್ಶೆ, ಟೀಕೆ–ಟಿಪ್ಪಣೆಗಳು ಬಂದವು. ಈ ಮಧ್ಯೆ ಮತ್ತೊಂದು ಪ್ರಯೋಗ ಪ್ರಾರಂಭಿಸಿ, ಕರ್ನಾಟಕದ ಹಳ್ಳಿಗಳ ಕಡೆ ಭಾಷಣ ಮಾಡಲು ಪ್ರವಾಸ ಹೊರಟರು. ಆನಂತರ 'ಪ್ರಗತಿರಂಗ' ಎಂಬ ರಾಜಕೀಯ ಸಂಘಟನೆ ಕಟ್ಟಿದರು. ಇದರಲ್ಲಿ ಯಶಸ್ವಿಯಾಗಲಿಲ್ಲ. ಆದರೆ ರಾಜಕೀಯ ಪ್ರವೇಶಾಕಾಂಕ್ಷೆಯಿಂದ ಅವರು ಮಾಡಿದ ಸಾವಿರಾರು ಮೈಲಿಗಳ ಪಯಣ, ಕಂಡ

ಅನುಭವಿಗಳು, ಕೆಲವೇ ವಾರಗಳಲ್ಲಿ ಕಲ್ಲು ಕರಗುವ ಸಮಯದ ಕಥೆಗಳಾದವು. ಈ ಕಥಾ ಸಂಕಲನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆಯಿತು.

ಲಂಕೇಶರು ಚಳುವಳಿಯಲ್ಲೂ ಮುಂದಿದ್ದರು. 1978 ರ ಬರಹಗಾರರ ಒಕ್ಕೂಟ ರಚನೆಯ ಕೇಂದ್ರ ವ್ಯಕ್ತಿಗಳಲ್ಲಿ ಅವರೂ ಒಬ್ಬರು. ಎಂಭತ್ತರ ದಶಕದಲ್ಲಿ ಗೋಕಾಕ್ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಇಡೀ ದೇಶವೇ ಮತೀಯ ಗಲಭೆಯಿಂದ ತತ್ತರಿಸುತ್ತಿದ್ದಾಗ ಆಯೋಧ್ಯೆಯಲ್ಲಿ ರಾಮಮಂದಿರ ನಿರ್ಮಿಸುವ ಸಲುವಾಗಿ ಹಿಂದೂ ಸ್ವಾಮಿಗಳು ಇಟ್ಟಿಗೆ ಕಳುಹಿಸುತ್ತಿದ್ದ ಸಂದರ್ಭದಲ್ಲಿ "ಇಟ್ಟಿಗೆ ಪವಿತ್ರವಲ್ಲ, ಜೀವ ಪವಿತ್ರ" ಎಂದು ಬರೆದರು.

ಹಳ್ಳಿಯಲ್ಲಿ ಹುಟ್ಟಿ ಬೆಳೆದ ಕೃಷಿಕ ಲಂಕೇಶ್, ಹಳ್ಳಿ ಮತ್ತು ಪಟ್ಟಣದ ಸಂಕೀರ್ಣ ಬದುಕನ್ನು ಇಡಿಯಾಗಿ ಗ್ರಹಿಸಿದ ಲೇಖಕ. ಕೊನಗವಳ್ಳಿಯಿಂದ ಪಿಳ್ಳಗಾನ ಹಳ್ಳಿವರೆಗೆ ಅವರ ಪಯಣ. ನಗರದಲ್ಲಿದ್ದು ಒಂದಿಷ್ಟು ಭೂಮಿ ಹಿಡಿದು ಬೇಸಾಯ ಮಾಡಿ, ಹಸು ಸಾಕಿ ಹಾಲು ಮಾರುವವರ ಕಷ್ಟ, ರಾಗಿ ಬೆಳೆದವರ ನಷ್ಟ ಇತ್ಯಾದಿಗಳನ್ನೆಲ್ಲ ತಮ್ಮ ಪತ್ರಿಕೆಯಲ್ಲಿ ಬರೆದರು.

ಎಲ್ಲ ಒತ್ತಡಗಳಲ್ಲಿಯೂ ಅವರ ಆದ್ಯಯನ – ಬರಹ ಯಾವ ಎಗ್ಗಿಲ್ಲದೆ ಸಾಗಿತು. 1958 ರಲ್ಲಿ 'ವಾಮನ' ಕತೆ ಬರೆದ ಲಂಕೇಶರು 1963 ರ ವೇಳೆಗೆ 'ಕೆರೆಯ ನೀರನು ಕೆರೆಗೆ ಚೆಲ್ಲಿ' ಕಥಾಸಂಕಲವನ್ನು ಪ್ರಕಟಿಸಿದರು. 1970 ರ ವೇಳೆಗೆ 'ನಾನಲ್ಲ', 1973 ರಲ್ಲಿ 'ಉಮಾಪತಿಯ ಸ್ಕಾಲರ್‌ಷಿಪ್ ಯಾತ್ರೆ', 1990 ರಲ್ಲಿ ಕಲ್ಲು ಕರಗುವ ಸಮಯ ಮತ್ತು ಇತರೆ ಕಥೆಗಳು, "1996 ರಲ್ಲಿ 'ಉಲ್ಲಂಘನೆ ಮತ್ತು ಇತರ ಕಥೆಗಳು' ಕಥಾ ಸಂಕಲನಗಳು ಬಂದವು.

1973 ರಲ್ಲಿ ತಲೆಮಾರು ಸಂಕಲನವನ್ನು ಪ್ರಕಟಿಸಿದ ಲಂಕೇಶರು, 1976 ರಲ್ಲಿ 'ಬಿಚ್ಚು' ಕವನ ಸಂಕಲನವನ್ನು ಹೊರತಂದರು. ಈ ಎರಡೂ ಸಂಕಲನಗಳನ್ನು ಒಳಗೊಂಡಂತೆ 45 ವರ್ಷಗಳಾ ಅವಧಿಯಲ್ಲಿ ಬರೆದ ತಮ್ಮ ಪದ್ಯಗಳನ್ನು 'ಚಿತ್ರ ಸಮೂಹ' ಎಂಬ ಹೆಸರಿನಲ್ಲಿ 1999 ರಲ್ಲಿ ಪ್ರಕಟಿಸಿದರು.

1963 ರಲ್ಲಿ ಟಿ. ಪ್ರಸನ್ನನ ಗೃಹಸ್ಥಾಶ್ರಮ ಎಂಬ ನಾಟಕ ಬರೆದರು. 'ನಂತರ ತೆರೆಗಳು', 'ನನ್ನ ತಂಗಿಗೊಂದು ಗಂಡು ಕೊಡಿ', 'ಗಿಳಿಯು

ಪಂಜರದೊಳಿಲ್ಲ', 'ಸಿದ್ಧತೆ', 'ಪೋಲಿಸರಿದ್ದಾರೆ ಎಚ್ಚರಿಕೆ' ಹಾಗೂ 'ಕ್ರಾಂತಿ ಬಂತು ಕ್ರಾಂತಿ' 1993 ರಲ್ಲಿ ಗುಣಮುಖ ನಾಟಕಗಳು ಪ್ರಕಟವಾದವು.

ಕನ್ನಡ ರಂಗಭೂಮಿಯ ಸೊರಗಿದ್ದ ಎಪ್ಪತ್ತರ ದಶಕದಲ್ಲಿ ಲಂಕೇಶರು ಕನ್ನಡ ರಂಗಭೂಮಿಗೆ ವಿಶೇಷ ಕಸುವನ್ನು, ಜೀವಂತಿಕೆಯನ್ನು ತಂದುಕೊಟ್ಟರು. 'ಪ್ರತಿಮ ನಾಟಕ ರಂಗ' ವನ್ನು ಆರಂಭಿಸಿ ಹೊಸ ನಾಟಕಕಾರರ 'ಗೋಡೆಬೇಕೆ ಗೋಡೆ', ಕೊಡೆಗಳು, 'ಟಿಂಗರ ಬುಡ್ಡಣ್ಣ', ಹಿಟ್ಟಿನ ಹುಂಜ', ತೆರೆಗಳು', ಟಿ. ಪ್ರಸನ್ನನ 'ಗೃಹಸ್ಥಾಶ್ರಮ', 'ಯಮಳ ಪ್ರಶ್ನೆ', 'ಚಾಳೀಶ' ಮುಂತಾದ ನಾಟಕಗಳನ್ನು ನಿರ್ದೇಶಿಸಿ, ಹೊಸ ರಂಗಭೂಮಿಯನ್ನು ಸಿದ್ಧಗೊಳಿಸಿದರು.

ಲಂಕೇಶರು ಅನುವಾದದಲ್ಲಿಯೂ ವಿಶಿಷ್ಟ ಛಾಪನ್ನು ಮೂಡಿಸಿದರು. 1971 ರಲ್ಲಿ ಸೊಫೋಕ್ಲೀಸ್‌ನ ದೊರೆ ಈಡಿಪಸ್ ಮತ್ತು ಅಂತಿಗೊನೆ ಹಾಗೂ 1974 ರಲ್ಲಿ ಬೋದಿಲೇರನ ಪಾಪದ ಹೂಗಳು ಕೃತಿಗಳನ್ನು ಅನುವಾದ ಮಾಡಿ ಯಶಸ್ವಿಯಾದರು.

1967 ನವ್ಯ ಮಾದರಿಯ 'ಬಿರುಕು' ಕಾದಂಬರಿ ಬರೆದ ಲಂಕೇಶರು 1978 ರ ವೇಳೆಗೆ ವಾಸ್ತವ ಮಾದರಿಯ 'ಮುಸ್ಸಂಜೆ ಕಥಾಪ್ರಸಂಗ' ಬರೆದರು. 1991 ರ ವೇಳೆಗೆ ಬರೆದ 'ಅಕ್ಕ'ಕಾದಂಬರಿಯು ಇನ್ನೊಂದು ಬಗೆಯಲ್ಲಿ ಪ್ರಾಮುಖ್ಯ ಪಡೆಯಿತು. 1970 ರಲ್ಲಿ 'ಪ್ರಸ್ತುತ', 1975 ರಲ್ಲಿ 'ಕಂಡದ್ದು ಕಂಡ ಹಾಗೆ' ವಿಮರ್ಶಾ ಕೃತಿಗಳನ್ನು ಪ್ರಕಟಿಸಿದರು.

1980 ರಲ್ಲಿ ಜುಲೈನಲ್ಲಿ ಆರಂಭಿಸಿದ 'ಲಂಕೇಶ್ ಪತ್ರಿಕೆ' ಯಲ್ಲಿ ಲಂಕೇಶ್ ಇಪ್ಪತ್ತು ವರ್ಷಗಳು ನಿರಂತರವಾಗಿ ಬಹಳ ಮೌಲಿಕವಾದ ಸಂಪಾದಕೀಯಗಳನ್ನು ಬರೆದರು. ಅವುಗಳನ್ನು ಟೀಕೆ – ಟಿಪ್ಪಣಿ ಎಂಬ ಹೆಸರಿನಲ್ಲಿ ಪ್ರಕಟಿಸಿದರು.

ಲಂಕೇಶರು ಅಷ್ಟಕ್ಕೇ ನಿಲ್ಲಲಿಲ್ಲ. ತಮ್ಮ ಬದುಕಿನ ಚರಿತ್ರೆಯನ್ನು ದಾಖಲಿಸುವ 'ಹುಳಿಮಾವಿನಮರ' ವನ್ನು 1997 ರಲ್ಲಿ ಹೊರ ತಂದರು. ಅಪಾರ ಪ್ರೀತಿ, ಗೌರವ, ಸಿಟ್ಟು, ದ್ವೇಷ– ಇವೆಲ್ಲಾ ಗುಣಗಳನ್ನು ಸಕಾರಣವಾಗಿ ತೋರುವ ಕನ್ನಡ ಸಾಂಸ್ಕೃತಿಕ ಸಂದರ್ಭದ ಯಾವುದೇ ಘಟನೆಯ ಸಮಯದಲ್ಲೂ ಎಲ್ಲರೂ ಕುತುಹಲದಿಂದ ಗಮನಿಸಬಹುದಾದ ವ್ಯಕ್ತಿಯಾಗಿ ವಿಸ್ಮಯ ಹುಟ್ಟಿಸುತ್ತಲೇ ಬಂದ ಲಂಕೇಶರು ಒಳ್ಳೆಯ

ಮನಸ್ಸುಳ್ಳ ಎಲ್ಲರೂ ಗೌರವಿಸಬಹುದಾಗಿದ್ದ ಅಪರೂಪದ ಅಪ್ಪಟ ಕನ್ನಡ ಪ್ರತಿಭೆ. ತಣ್ಣಗೆ ಹೊರಟು ಹೋದದ್ದು 2000 ದ ಜನವರಿ 25 ರಂದು.

ಪತ್ರಕರ್ತ ಜಿ.ಪಿ.ಬಸವರಾಜು ಲಂಕೇಶರನ್ನು ಹೀಗೆ ಕಂಡಿದ್ದಾರೆ: "ಮುಟ್ಟಿದರೆ ಮುನಿಯುವ", ಸ್ಫೋಟಿಸುವ, ಹರಿಹಾಯುವ, ರೇಗುವ, ತನ್ನ ಬಗೆಗೆ ಬೀಗುವ ವಿವಾದಾತ್ಮಕ, ವಿಶಿಷ್ಟ ಪ್ರತಿಭೆಯ ಲೇಖಕ ಪಿ.ಲಂಕೇಶ್ ದೈತ್ಯ ಎನ್ನುವ ಪದದ ಒಳ್ಳೆಯ ಮತ್ತು ಕೆಟ್ಟ ಎರಡೂ ಅರ್ಥಗಳನ್ನು ಹಚ್ಚಬಹುದಾದ ಲೇಖಕರು. ಜೀವನದ ಪ್ರತಿಕ್ಷಣವನ್ನು ಹನಿ–ಹನಿಯಾಗಿ ಕುಡಿದುಬಿಡುವ ಅದಮ್ಯ ಜೀವನೋತ್ಸಾಹವನ್ನು ತೋರುತ್ತ, ಕಣ್ಣು, ಕಿವಿ, ಮೂಗು ಇತ್ಯಾದಿ ಪಂಚೇಂದ್ರಿಯಗಳನ್ನು ಚುರುಕಾಗಿ, ಕ್ರಿಯಾಶೀಲವಾಗಿ ಇಟ್ಟುಕೊಂಡು ಅಬ್ಬರಿಸಿ ಹಾಗೆಯೇ ಆಲೋಚಿಸುವ, ಮತ್ತೆ ಮೌನವಾಗಿ ತನ್ನ ಒಳದನಿಯನ್ನು ಕೇಳಿಸಿಕೊಳ್ಳಬಲ್ಲ ಸಾಮರ್ಥ್ಯವನ್ನು ಗುಣವನ್ನು ಪಡೆದವರು. ಒರಟುತನವನ್ನು, ಒಗರನ್ನು ಜೀವನೋತ್ಸಾಹವನ್ನು ಪ್ರೀತಿ–ರಾಗಗಳನ್ನು, ಅಸೂಯೆ ಅಸಹನೆಗಳನ್ನು, ತುಂಟಾಟ, ಕಿಲಾಡಿತನ, ಕಿಡಿಗೇಡಿ ಗುಣಗಳನ್ನು ಇಟ್ಟುಕೊಂಡೇ ಜಗತ್ತನ್ನು ನೋಡಬಲ್ಲ, ವಿಶ್ಲೇಷಿಸಬಲ್ಲ, ಸ್ಪಂದಿಸಬಲ್ಲ ಲಂಕೇಶ್ 60 ದಾಟಿದರೂ ಹಣ್ಣಾಗದವರು. ತಣ್ಣಗೆ ನಿಂತು ನೋಡಬಲ್ಲ. ಮಾಗಿ ಸಿಹಿಯಾಗಬಲ್ಲ ಗುಣ ಅವರ ಜಾಯಮಾನಕ್ಕೆ ಅಂಟಿದ್ದೇ ಅಲ್ಲ. ಉರಿಯುವ, ಸಿಡಿಯುವ, ಕಿಡಿಕಾರುವ ಮತ್ತು ಈ ಮೂಲಕವೇ ಬದುಕುವ ಲಂಕೇಶ್ ಕ್ಷುದ್ರ ಯುವಕನೇ"*9.

ಲಂಕೇಶರ ಸಾಹಿತ್ಯದ ಬೇರುಗಳು ಸಾಹಿತ್ಯೇತರ ನೆಲೆಗಳಿಂದ ಹರಳುಗಟ್ಟಿರುವಂಥವು. ತಮ್ಮ ಯೌವ್ವನದವರೆಗಿನ ದಿನಗಳನ್ನು ಹಳ್ಳಿಯಲ್ಲಿ ಕಳೆದ ಲಂಕೇಶರ ಜೀವನಾನುಭವನ್ನು ಹೀರಿಕೊಂಡು ಬೆಳೆಯಾಲಾರಂಭಿಸಿದ್ದು, ಅಲ್ಲಿಂದಲೇ ತನ್ನನ್ನು ತಾನೇ ಬರೆದುಕೊಂಡ, ತನ್ನ ತುಡಿತವನ್ನು ತಾನೆ ಸಾಕಾರಗೊಳಿಸಿಕೊಂಡ ಸಾಹಿತಿ ಅವರು. ಬೇರೆ ಬೇರೆ ಆಯಾಮಗಳಲ್ಲಿ ಪ್ರಯೋಗಕ್ಕಿಳಿಯುವ ಲಂಕೇಶರ ಪ್ರತಿಭೆಗೆ ಲೋಹಿಯಾ, ಅಂಬೇಡ್ಕರ್, ಗಾಂಧೀಜಿಯಂಥವರ ಸಾಮಾಜಿಕ ಚಿಂತನೆಗಳು,ಸಮಕಾಲೀನ ಮೌಲ್ಯಗಳು, ಹುಟ್ಟಿ ಬಂದ ಪರಿಸರ. ಒಳಗಿನ ಹೊರಗಿನ ಒತ್ತಡಗಳು ಕಾರಣಗಳಾಗಿವೆ.

ಗಾಂಧೀಜಿಯವರ ಚಿಂತನೆಗಳ ಬಗ್ಗೆ ವ್ಯಾಮೋಹವನ್ನಿರಿಸಿಕೊಂಡಿದ್ದ, ಅಂಬೇಡ್ಕರ್–ಲೋಹಿಯಾರ ಚಿಂತನೆಗಳ ಬಗ್ಗೆ ಚಿಂತನೆಯನ್ನು ಬೆಳೆಸಿಕೊಂಡಿದ್ದ ಲಂಕೇಶರದ್ದು, ಅಬ್ರಾಹ್ಮಣ್ಯ ದೃಷ್ಟಿಕೋನ. ಕರ್ನಾಟಕದಲ್ಲಿ ಸಾಮಾಜಿಕ ಚಿಂತನೆ

ನಡೆಸಿದವರು ಸಮಾಜಶಾಸ್ತ್ರಜ್ಞರು, ಕುವೆಂಪು, ಅನಂತಮೂರ್ತಿ, ಲಂಕೇಶ್, ತೇಜಸ್ವಿಯಂತಹ ಕನ್ನಡ ಬರಹಗಾರರು. ಹಳ್ಳಿಯ ಜೀವನದ ಸಂಸ್ಕಾರದಿಂದ ಬಂದಂಥ ಮುಗ್ಧತೆ, ಬ್ರಾಹ್ಮಣೇತರ ಸಾಹಿತ್ಯಕ ಚಳುವಳಿಯ ಚಾರಿತ್ರಿಕ ಪರಿಣಾಮ ನವ್ಯೋತ್ತರ ಅನುಭವದಿಂದ ಒತ್ತಡ ಲಂಕೇಶರನ್ನು ವೈಚಾರಿಕ – ಸಾಂಸ್ಕೃತಿಕ ಚಿಂತಕರನ್ನಾಗಿಸಿತು.

ಶ್ರೀಕೃಷ್ಣ ಆಲನಹಳ್ಳಿಯವರ ಬದುಕು ಮತ್ತು ಬರಹ

ನವ್ಯ ಸಾಹಿತ್ಯ ಚಳುವಳಿಯ ಉಚ್ಛ್ರಾಯ ಕಾಲದಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದ ಕೃಷ್ಣ ಸುಮಾರು ಎರಡೂವರೆ ದಶಕಗಳ ಕಾಲ ತನ್ನ ಹೆಸರನ್ನು ವಿರಾಜಮಾನವಾಗಿ ಬೆಳಗಿಸಿದವರು. ಕೃಷ್ಣ ಅವರ ಆಸಕ್ತಿ ಸಾಹಿತ್ಯ ಕೃತಿಗಳನ್ನು ನಿರ್ಮಿಸುವಷ್ಟಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಸಾಹಿತ್ಯದ ಪರಿಸರ ನಿರ್ಮಾಣದಲ್ಲೂ ಅಷ್ಟೇ ಆಸಕ್ತಿ ಹೊಂದಿದ್ದವರು. ಬದುಕಿನಲ್ಲಿ ಯಾವುದನ್ನೂ ನಿರಾಕರಿಸದ ಕೃಷ್ಣ ಸಮಕಾಲೀನ ಸಾಹಿತ್ಯ ಚಳುವಳಿಗೆ ಸ್ಪಂದಿಸಿದ ರೀತಿಯೂ ಇದೇ. ಇವರು ಕಥೆಯನ್ನು ಕಥೆಯಾಗಿ, ಕವಿತೆಯನ್ನು ಕವಿತೆಯಾಗಿ, ಬರಹಗಾರರನ್ನು ಬರಹಗಾರರಾಗಿ ಸ್ವೀಕರಿಸಿದವರು.

ಶ್ರೀಕೃಷ್ಣ ಆಲನಹಳ್ಳಿಯವರು ಹೆಗ್ಗಡದೇವನ ಕೋಟೆ ತಾಲೂಕು ಆಲನಹಳ್ಳಿಯಲ್ಲಿ ಬೆಟ್ಟೇಗೌಡ, ಸಣ್ಣಮ್ಮ ದಂಪತಿಗಳ ಮಗನಾಗಿ 03/04/1942 ರಲ್ಲಿ ಜನಿಸಿದರು. ಸುಮಾರು 11 ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿ ಮಧ್ಯವಯಸ್ಸಿನಲ್ಲೇ ಹೃದಯಾಘಾತದಿಂದ ತೀರಿಕೊಂಡ ಪ್ರತಿಭಾವಂತ ಕವಿ, ಕತೆಗಾರ, ಕಾದಂಬರಿಕಾರ. ಬರೆದ ಹಲವೇ ಕೃತಿಗಳು ಬಹಳ ಮೌಲ್ಯಯುತವಾದವುಗಳಾಗಿ ಅವರಿಗೆ ಹಲವು ಪ್ರಶಸ್ತಿಯನ್ನು ತಂದು ಸಾಹಿತ್ಯದ ಇತಿಹಾಸದಲ್ಲಿ ಅವರ ಹೆಸರನ್ನು ಚಿರಸ್ಥಾಯಿಯಾಗಿಸಿವೆ. 'ಮಣ್ಣಿನ ಹಾಡು', 'ಕಾಡು' (1972), ಪರಸಂಗದ ಗೆಂಡೆ ತಿಮ್ಮ (1978), 'ಭುಜಂಗಯ್ಯನ ದಶಾವತಾರಗಳು'(982)ಕಾದಂಬರಿಗಳು. 'ಗ್ರಾಮಾಯಣ ಸಮೀಕ್ಷೆ', 'ಅವಲೋಕನ', 'ಅಂತ:ಕರಣ'ಸಂಪಾದನ ಕೃತಿಗಳು'. ತಪ್ತ (1970) ಫೀನಿಕ್ಸ್ (1975), ಗೀಜಗನಗೂಡು ಅವರ ಕಥಾ ಸಂಕಲನಗಳು. 'ಡೋಗ್ರಾ ಪಹಾಡಿ ಪ್ರೇಮ ಗೀತೆಗಳು' ಅನುವಾದಿತ ಕೃತಿ. ಇವರ ಪ್ರತಿಭೆಗೆ ಸಂದಿರುವ ಪ್ರಶಸ್ತಿಗಳೆಂದರೆ, ತಮ್ಮ ಅಭ್ಯಾಸದ ವಿಷಯವಾದ ತತ್ವಶಾಸ್ತ್ರದಲ್ಲಿ ಹೆಚ್ಚು ಅಂಕಗಳನ್ನು ಪಡೆದುದಕ್ಕೆ ಚಿನ್ನದಪದಕ. 'ಮಣ್ಣಿನ ಹಾಡು' ಕವನ ಸಂಕಲನಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ, 'ಕಾಡು' ಕಾದಂಬರಿಗೆ ಕರ್ನಾಟಕ ರಾಜ್ಯ ಪ್ರಶಸ್ತಿಯು ದೊರೆತಿದೆ. ಜಾನಪದ ಸಾಹಿತ್ಯ ಸಂಗ್ರಹ, ಪ್ರವಾಸ ಇವರ ಇತರ ಹವ್ಯಾಸಗಳಾಗಿದ್ದವು. ಇವರ 'ಕಾಡು' ಗಿರೀಶ್ ಕಾರ್ನಾಡರ ನಿರ್ದೇಶನದಲ್ಲಿ ಚಲನಚಿತ್ರವಾಗಿ ರಾಷ್ಟ್ರ ಪ್ರಶಸ್ತಿ ಗಳಿಸಿತು. 'ಗೀಜನಗೂಡು' ಸಹ ಚಲನಚಿತ್ರವಾಗಿ ಹೆಸರು ಮಾಡಿತು. ಮಾರುತಿ ಶಿವರಾಂ ನಿರ್ದೇಶನದ 'ಪರಸಂಗದ ಗೆಂಡೆತಿಮ್ಮ' 'ಭುಜಂಗಯ್ಯನ ದಶಾವತಾರಗಳು'

ಚಲನಚಿತ್ರಗಳಾಗಿ ಬಹುಖ್ಯಾತಿಯನ್ನು ಪಡೆದವು. ಆಲನಹಳ್ಳಿ ಕೃಷ್ಣ ಕನ್ನಡಕ್ಕಿಂತ ಮಲೆಯಾಳಂ ಸಾಹಿತ್ಯದಲ್ಲಿ ಬಹುದೊಡ್ಡ ಲೇಖಕನೆನಿಸಿಕೊಂಡವರು. ಕಾಡು ಕಾದಂಬರಿಯನ್ನು Forest ಎಂಬ ಹೆಸರಿನಲ್ಲಿ ಶಾಂತಿನಾಥ ದೇಸಾಯಿಯವರು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. ಇವರ ನೆನಪಿಗಾಗಿ ಗೆಳೆಯರು 'ಕಾಡಿನ ಹುಡುಗ ಕೃಷ್ಣ' ಎಂಬ ಅಭಿನಂದನ ಗ್ರಂಥವನ್ನು ಪ್ರಕಟಿಸಿದ್ದಾರೆ.

ರಾಷ್ಟ್ರಕವಿ ಕುವೆಂಪು ಅವರು ಶ್ರೀಕೃಷ್ಣರನ್ನು ಕುರಿತು ಹೀಗೆ ಹೇಳಿದ್ದಾರೆ. "ಆಲನಹಳ್ಳಿಯವರ ಅದಮ್ಯ ಜೀವನೋತ್ಸಾಹ, ಉಜ್ವಲವಾದ ಪ್ರತಿಭೆ ಹಾಗೂ ಸೃಜನಶೀಲ ಸಾಮರ್ಥ್ಯಗಳು ಯಾರನ್ನಾದರೂ ಬೆರಗುಗೊಳಿಸುವಂಥವು. ಅವರು ಕವಿಯಾಗಿ, ಕತೆಗಾರರಾಗಿ, ಕಾದಂಬರಿಕಾರರಾಗಿ ಸಾರಸ್ವತ ಲೋಕದಲ್ಲಿ ಅಳಿಸಲಾಗದ ಹೆಜ್ಜೆ ಗುರುತುಗಳನ್ನು ಬಿಟ್ಟು ಹೋಗಿದ್ದಾರೆಂಬುದು ಸಮಾಧಾನದ ಸಂಗತಿಯಾದರೂ, ಅವರ ಅಕಾಲಮರಣದಿಂದಾಗಿ ಕನ್ನಡಕ್ಕೆ ತುಂಬಲಾರದ ನಷ್ಟವಾಯಿತೆಂಬುದು ದು:ಖದ ವಿಷಯವಾಗಿದೆ. ಅವರ ದುರಂತ ಜೀವನಕ್ಕೆ ಅವರ ಕೃತಿಗಳೇ ಶಾಶ್ವತ ಸ್ಮಾರಕಗಳೆಂದು ತಿಳಿದು ತೃಪ್ತಿ ಪಡೆಯಬೇಕಾಗಿದೆ."*10.

ಪು.ತಿ.ನ. ಅವರು ಕೃಷ್ಣರನ್ನು ಕುರಿತು "ಕೃಷ್ಣ ಬಹು ಚುರುಕು ಬುದ್ಧಿಯ ಸದಾ ಪುಟಿಸುತ್ತಿದ್ದ ನಗೆಯ, ಅದಮ್ಯ ಉತ್ಸಾಹದ ರಸಿಕ ಸಾಹಿತಿ ಹಾಗೂ ಸಹೃದಯ. ಬಹು ಪಟುವಾದ ಮಾತುಗಾರಿಕೆ, ಬೀಸುನೋಟ, ಹಳೆಗಾಲದ ಕೆಲಸಕ್ಕೆ ಬಾರದ ಸರಕುಗಳಲ್ಲಿ ತಾತ್ಸಾರ, ಹೊಸಕಾಲದ ಚೇತನೋದ್ದೀಪದ ನಿಟ್ಟುಗಳಲ್ಲಿ ಚುರುಕು ನಡೆ-ಬರವಣಿಗೆಯಲ್ಲಿ ಹೊಚ್ಚ ಹೊಸತನ, ಸಾರವತ್ತಾದುದನ್ನು ಗುರುತಿಸುವ ನೇರ ದೃಷ್ಟಿ, ತೆಗಳಿಕೆಯಲ್ಲೂ ಹೊಗಳಿಕೆಯಲ್ಲೂ, ಧಾರಾಳತನ, ಬಹು ಆಕರ್ಷಕ ವ್ಯಕ್ತಿ ಶ್ರೀ ಆಲನಹಳ್ಳಿ"*11.

ಹೀಗೆ ಆಲನಹಳ್ಳಿಯವರು ತಮ್ಮ ಬರವಣಿಗೆಯ ವೈಶಿಷ್ಟ್ಯತೆಯಿಂದಾಗಿ ಕನ್ನಡ ಸಾಹಿತ್ಯದಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದಾರೆ.

ಅಡಿಟಿಪ್ಪಣಿ

1. ಹಾಲತಿ ಸೋಮಶೇಖರ್ : ಪಿ.ಲಂಕೇಶ್, ನವಕರ್ನಾಟಕ ಪ್ರಕಾಶನ, 2006, ಪುಟ 14
2. ಹಾಲತಿ ಸೋಮಶೇಖರ್ : ಪಿ.ಲಂಕೇಶ್, ನವಕರ್ನಾಟಕ ಪ್ರಕಾಶನ, 2006, ಪುಟ 14
3. ಹಾಲತಿ ಸೋಮಶೇಖರ್ : ಪಿ.ಲಂಕೇಶ್, ನವಕರ್ನಾಟಕ ಪ್ರಕಾಶನ, 2006, ಪುಟ 15
4. ಹಾಲತಿ ಸೋಮಶೇಖರ್ : ಪಿ.ಲಂಕೇಶ್, ನವಕರ್ನಾಟಕ ಪ್ರಕಾಶನ, 2006, ಪುಟ 18
5. ಕಾಡಿನ ಹುಡುಗ ಕೃಷ್ಣ : ಡಿ.ಎಸ್. ನಾಗಭೂಷಣ, ಸಂವಾದ ಪ್ರಕಾಶನ 1990, ಪುಟ 3.
6. ಕಾಡಿನ ಹುಡುಗ ಕೃಷ್ಣ : ಡಿ.ಎಸ್. ನಾಗಭೂಷಣ, ಸಂವಾದ ಪ್ರಕಾಶನ 1990, ಪುಟ 3,4
7. ಕಾಡಿನ ಹುಡುಗ ಕೃಷ್ಣ : ಡಿ.ಎಸ್. ನಾಗಭೂಷಣ, ಸಂವಾದ ಪ್ರಕಾಶನ 1990, ಪುಟ 86. 87
8. ಕಾಡಿನ ಹುಡುಗ ಕೃಷ್ಣ : ಡಿ.ಎಸ್. ನಾಗಭೂಷಣ, ಸಂವಾದ ಪ್ರಕಾಶನ 1990, ಪುಟ 76
9. ಕಾಡಿನ ಹುಡುಗ ಕೃಷ್ಣ : ಡಿ.ಎಸ್. ನಾಗಭೂಷಣ, ಸಂವಾದ ಪ್ರಕಾಶನ 1990, ಪುಟ 12, 13
10. ಹಾಲತಿ ಸೋಮಶೇಖರ್ : ಪಿ.ಲಂಕೇಶ್, ನವಕರ್ನಾಟಕ ಪ್ರಕಾಶನ, 2006, ಪುಟ 105
11. ಹಾಲತಿ ಸೋಮಶೇಖರ್ : ಪಿ.ಲಂಕೇಶ್, ನವಕರ್ನಾಟಕ ಪ್ರಕಾಶನ, 2006, ಪುಟ 105

ಸಾರ ರೂಪ

ಹೊಸಗನ್ನಡ ಸಾಹಿತ್ಯದ ಮಹತ್ವದ ಬರಹಗಾರರಲ್ಲಿ ಪಿ. ಲಂಕೇಶ್ ಮತ್ತು ಶ್ರೀಕೃಷ್ಣ ಆಲನಹಳ್ಳಿ ಪ್ರಮುಖರಾದವರು. ಲಂಕೇಶರದು ಬಹುಮುಖ ಪ್ರತಿಭೆ ಮಾತ್ರವಲ್ಲ, ವೈವಿದ್ಯಮಯ ಬದುಕೂ ಸಹ ಆಗಿದ್ದಿತು. ಲಂಕೇಶರ ಸಾಹಿತ್ಯ ಬಹುಮುಖವಾಗಿದೆ. "ತೀರಾ ಸಾಮಾನ್ಯ ಮನುಷ್ಯನ ಮನಸ್ಸಿನಲ್ಲಿರುವ ಅನೇಕ ಸಂಕೀರ್ಣ ಭಾವನೆಗಳ ಅಭಿವ್ಯಕ್ತಿಗಾಗಿ ತಮ್ಮ ಬರಹವನ್ನು ಮುಡಿಪಾಗಿಟ್ಟರು, ಇವರು ತಮ್ಮ ಕತೆ, ಕವನ, ನಾಟಕ, ಕಾದಂಬರಿ, ವಿಮರ್ಶೆ, ಆತ್ಮಕಥನ ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ಮಾತ್ರವಲ್ಲದೆ ಪತ್ರಿಕಾ ಬರವಣಿಗೆ, ಸಂವಾದ, ಟೀಕೆ-ಟಿಪ್ಪಣಿ ಮೊದಲಾದ ಎಲ್ಲಾ ಪ್ರಕಾರಗಳಲ್ಲೂ ತಮ್ಮ ತೀವ್ರತೆಯನ್ನು ಮೆರೆದವರು

ಸಮಾಜದ ಸಮಸ್ಯೆಗಳು, ಹಣ-ಜಾತಿ-ವರ್ಗ-ವರ್ಣ-ಲಿಂಗ ಸಂಬಂಧೀ ಚಿಂತನೆಗಳು, ಹೆಣ್ಣು-ಗಂಡಿನ ಸಾಮಾಜಿಕ ಪಾತ್ರ ನಿರ್ವಹಣೆ, ಶಿಕ್ಷಣ, ಉದ್ಯೋಗ, ರಾಜಕೀಯ ಸಂಸ್ಥೆಗಳು, ಸಾಹಿತ್ಯಕ ಚಳುವಳಿಗಳು ಮತ್ತು ಸಾಮಾಜಿಕ ಸ್ಥಿತ್ಯಂತರಗಳು ಅವರ ಸಾಹಿತ್ಯವನ್ನು ಪ್ರಭಾವಿಸಿವೆ. ಒಂದು ವ್ಯವಸ್ಥೆಯ ವಂಚನೆ, ಮೋಸ, ಥಳಕುಗಳು, ಅವುಗಳಿಂಡ ಶೋಷಣೆಗೆ ಒಳಗಾಗುವ ವಸ್ತುಗಳು; ಮೋಸಗೊಳಿಸುವವರ ಕಡೆ ಇವರ ಆಸಕ್ತಿ ಇರುವುದನ್ನು ಅಕ್ಕ ಕಾದಂಬರಿಯಲ್ಲಿ ಕಾಣಬಹುದು.

ಲೇಖಕರು 'ಅಕ್ಕ' ಕಾದಂಬರಿಯಲ್ಲಿ ಆದುನಿಕ ಸಮಾಜದ ಸೌಕರ್ಯದ ಬದುಕು ಮತ್ತು ಪ್ರೀತಿ-ಸಂಬಂದಗಳು ಪರಸ್ಪರ ಮುಖಾ ಮುಖಿಯಾಗುವುದನ್ನು ಕ್ಯಾತ-ದೇವೀರಿಯವರ ಗಾಢ ಸಂಬಂದಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ಇಲ್ಲಿ ನಡೆಯುವ ಪ್ರತಿಯೊಂದು ಘಟನೆಗಳಿಗೂ ಕ್ಯಾತನನ್ನು ಪ್ರತ್ಯಕ್ಷ ಸಾಕ್ಷಿಯನ್ನಾಗಿ ತಂದು ಸಮಲೀನ ಸಮಾಜದಲ್ಲಿ ರಾಜಕೀಯ ಮತ್ತು ಹಣದ ಪ್ರಭಾವಗಳನ್ನು ವಿವರಿಸಿದ್ದಾರೆ.

ಇಂದಿನ ಸಿನಿಮಾ, ಶಿಕ್ಷಣ, ಚಳವಳಿಗಳ ಸ್ವರೂಪ ಬದಲಾಗುತ್ತಿದ್ದು ಇಲ್ಲಿನ ಜನರ ಬದುಕು ಅತಂತ್ರ ಸ್ಥಿತಿಯಲ್ಲಿರುವುದನ್ನು ಪದ್ದಿ, ಸತ್ಯನಾರಾಯಣ, ಶಂಕರ್ರಾವ್ರು, ರಂಗಜೆಟ್ಟಿ,ನಾಗ್ರ-ಖಡವರ ಮೂಲಕ ಕಟ್ಟಿಕೊಟ್ಟಿದ್ದಾರೆ. ಹಣದಿಂದಾಗಿ ಬರುವ ಸೌಲಭ್ಯ, ಸಂಕಟ,ನೋವು,ಸಂತೋಷ,ಹಾದರ,ಅನ್ಯಾಯ, ಕುಡಿತ,ಜೂಜು,ಲಂಚಗಳಿಗೆ ಪ್ರೇರೇಪಿಸುವುದರ ಮೂಲಕ ಒಂದು ಸಮಾಜ ಅವನತಿಯೆಡೆಗೆ ಸಾಗುತ್ತಿರುವುದರ ಚಿತ್ರಣ ಕೊಟ್ಟು, ಇವುಗಳ ವಿರುದ್ದ ಹೋರಾಡಲು ಕ್ಯಾತನಂತ ಬಾಲಕನಿಗೆ

ಸಾದ್ಯವಾಗದೇ ಇರುವ ಸ್ಥಿತಿಯನ್ನು ಲೇಖಕರು ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ ಎನಿಸುತ್ತದೆ.

ಅದೇ ರೀತಿ ಶ್ರೀಕೃಷ್ಣ ಆಲನಹಳ್ಳಿಯವರು 'ಕಾಡು' ಕಾದಂಬರಿಯಲ್ಲಿ ಕೊಪ್ಪಲ ಗ್ರಾಮದ ಚಿತ್ರಣ ಕೊಡುವುದರ ಮೂಲಕ ಒಂದು ಪರಂಪರಾಗತ ಸಮಾಜದ ಬೇರುಗಳಾದ ಊಳಿಗಮಾನ್ಯ ವ್ಯವಸ್ಥೆ, ಜಾತಿಪದ್ಧತಿ, ನಂಬಿಕೆ, ಆಚರಣೆಗಳ ಸ್ವರೂಪವನ್ನು ಕಿಟ್ಟಿಯಂತಹ ಮುಗ್ಧ ಬಾಲಕನಮೂಲಕ ಕಟ್ಟಿಕೊಟ್ಟಿದ್ದಾರೆ.

' ಕಾಡು' ವಿನಲ್ಲಿಯ ಕಿಟ್ಟಿಗೆ ಕೊಪ್ಪಲು ಗ್ರಾಮ ಒಂದು ರೀತಿಯ ಕಾಡೇ ಆಗಿ ಕಾಣುತ್ತದೆ. ಕಾಡಿನ ನಿಗೂಢತೆಯ ಅನುಭವವೇ ಕೊಪ್ಪಲಿನಲ್ಲಿ ಆಗುತ್ತದೆ ಕೊಪ್ಪಲು ಗ್ರಾಮದಲ್ಲಿ ನಡೆಯುವ ಪ್ರತಿಯೊಂದು ಚಟುವಟಿಕೆಗಳೂ ಸಹ ಈಡೀ ಒಂದು ಪರಂಪರೆಯ ಸಮಾಜದ ಚಿತ್ರಣವೇ ಆಗಿ ಕೃಷ್ಣರು ಮೂಡಿಸಿದ್ದಾರೆ. ಕೊಪ್ಪಲಿನಲ್ಲಿರುವ ಊಳಿಗಮಾನ್ಯ ವ್ಯವಸ್ಥೆ, ಈ ವ್ಯವಸ್ಥೆಯನ್ನುಪೋಷಿಸುತ್ತಿರುವ ಚಂದ್ರೇಗೌಡರ ನ್ನೊಳಗೊಂಡ ಗೌಡರ ಸಮೂಹ, ತಾವು ಮಾಡುವ ಅನ್ಯಾಯದ ಕೆಲಸಗಳಿಗೆ ಮಂಡ್ಯದಿಂದ ನಾಟಕಕ್ಕೆಂದು ಸೀನು,ತರಿಸುವುದು ಬಣ್ಣ ಹಾಕಿ ಪಾರ್ಟು ಮಾಡಿಸುವುದು ತಮ್ಮ ಅನ್ಯಾಯಗಳಿಗೆ ಬಣ್ಣ ಹಾಕಿ ಮುಚ್ಚಿಹಾಕುವ ಪ್ರಯತ್ನವೇ ಆಗಿದೆ.

ಗೌಡರ ಅನ್ಯಾಯಗಳನ್ನು ಏಕಾಂಗಿಯಾಗಿ ಎದುರಿಸುವ ಶಿವಗಂಗ ಮಾಡುವ ಹೋರಾಟ ನಮ್ಮ ಎಲ್ಲಾ ಚಳವಳಿಗಳ ದುರಂತವನ್ನು ಸೂಚಿಸುತ್ತಿದ್ದು, ಕಿಟ್ಟಿಗೆ ತನ್ನ ಸ್ನೇಹಿತನನ್ನು 'ಅನಂತಯ' ಎಂದು ಕರೆಯಲು ಹೇಳುವುದು ಇಷ್ಟವಾಗುವುದಿಲ್ಲ, ಜೊತೆಗೆ ಅರ್ಥವಾಗುವುದಿಲ್ಲ ಇಲ್ಲಿ ಕೃಷ್ಣ ಅವರು ಅಂದಿನ ಕಾಲದಲ್ಲಿದ್ದ ವಯಸ್ಸಿಗೆ ಮೀರಿದ ಜಾತಿ ಪ್ರಾಧಾನ್ಯತೆಯನ್ನು ವಿವರಿಸಿದ್ದಾರೆ.

ಕಮಲಮ್ಮ ತನ್ನ ಗಂಡ ಇಟ್ಟುಕೊಂಡವಳ ಮನೆಗೆ ಹೋಗದಂತೆ ತಡೆಯಲು ಪೂಜೆಹಾಕಿಸುವುದು ತನ್ನ ಗಂಡನ ಅನೈತಿಕ ವ್ಯವಹಾರವನ್ನು ಪ್ರತಿಭಟಿಸುವುದೇ ಆಗಿದೆ.

ಈ ಕಾದಂಬರಿಯಲ್ಲಿ ಊಳಿಗಮಾನ್ಯ ಶೋಷಕ ವರ್ಗಗಳ ವ್ಯವಸ್ಥೆಯಿಂದಾಗಿ ಕೇವಲ ಕೆಳವರ್ಗದವರ ಸ್ವಾತಂತ್ರ್ಯವನ್ನು ಕಸಿಯುವುದಷ್ಟೇ ಅಲ್ಲದೆ ಮೇಲ್ವರ್ಗದ ಸ್ತ್ರೀಯರ ಸ್ವಾತಂತ್ರ, ಆಸೆಗಳನ್ನು ನಾಶಗೊಳಿಸುವುದನ್ನು ಕಮಲಮ್ಮ, ಸಾವಿತ್ರಮ್ಮ, ಕಲ್ಯಾಣಿಯ ಮೂಲಕ ಕಾಣಬಹುದು. ನಾಗಿಯ ಅಜ್ಜಿ ಸಾಯುವುದರ ಮೂಲಕ ಒಂದು ಪಾರಂಪರಿಕ ಸಮಾಜದ ನಂಬಿಕೆಗಳೇ ನಾಶವಾಗುವುದಕ್ಕೆ ಸಾಕ್ಷಿಯಾಗಿವೆ.

ಹೀಗೆ ಲಂಕೇಶ್ ಮತ್ತು ಆಲನಹಳ್ಳಿಯವರು ತಮ್ಮ 'ಅಕ್ಕ' ಹಾಗೂ 'ಕಾಡು' ಕಾದಂಬರಿಗಳ ಚಿಕ್ಕ ಬಾಲಕರ ಮೂಲಕ ಎರಡು ಸಮಾಜಗಳ ಚಿತ್ರಣ ಕಟ್ಟಿಕೊಟ್ಟಿದ್ದಾರೆ.

ಗ್ರಂಥ ಋಣ

1. ಕಾಡು : ಶ್ರೀಕೃಷ್ಣಆಲನಹಳ್ಳಿ
   ಐ ಬಿ ಎಚ್ ಪ್ರಕಾಶನ; ಗಾಂಧಿನಗರ ಬೆಂಗಳೂರು
   1988
2. ಅಕ್ಕ : ಪಿ. ಲಂಕೇಶ್
   ಲಂಕೇಶ್ ಪ್ರಕಾಶನ; ಬಸವನಗುಡಿ, ಬೆಂಗಳೂರು
   2007
3. ಕಾಡಿನ ಹುಡುಗ ಕೃಷ್ಣ : ಡಿ. ಎಸ್. ನಾಗಭೂಷಣ
   ಸಂವಾದ ಪ್ರಕಾಶನ; ಮಲ್ಲಾಡಿಹಳ್ಳಿ, ಚಿತ್ರದುರ್ಗ
   1991
4. ಸಾಹಿತ್ಯ ಸಂವಾದ : ರಾಘವೇಂದ್ರ ಪಾಟೀಲ
   ಸಂವಾದ ಪ್ರಕಾಶನ ಮಲ್ಲಡಿಹಳ್ಳಿ, ಚಿತ್ರದುರ್ಗ
   2000
5. ಕಾದಂಬರಿ ; ವಸ್ತು ಮತ್ತು ತಂತ್ರ ಗಿರಡ್ಡಿ ಗೋವಿಂದರಾಜು
   ಸ್ನೇಹ ಪ್ರಕಾಶನ, ಬೆಂಗಳೂರು
   1987
6. ಹೊಸಗನ್ನಡ ಸಾಹಿತ್ಯ ಚರಿತ್ರೆ ; ಎಲ್. ಎಸ್. ಶೇಷಗಿರಿರಾವ್
   ಅಂಕಿತ ಪುಸ್ತಕ, ಬೆಂಗಳೂರು
   2002
7. ಸಾಹಿತ್ಯ ವಿಮರ್ಶೆ ; ಜಿ. ಎಚ್. ನಾಯಕ್
   ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ
   1988

8. ಕನ್ನಡ ಕಥನ ಸಾಹಿತ್ಯ; ಕಾದಂಬರಿ, ಡಾ.ಜಿ.ಎಸ್.
ಆಮೂರ ಭಾನಾಮತಿ ಶಾ
2006
9. ಶತಮಾನದ ಕನ್ನಡ ಸಾಹಿತ್ಯ; ಜಿ.ಹೆಚ್.ನಾಯಕ್
ರಾಘವೇಂದ್ರ ಪ್ರಕಾಶನ, ಅಂಕೋಲಾ
2000
10. ಸಾಹಿತ್ಯ; ಎಸ್.ಎಲ್. ಶೇಷಗಿರಿರಾವ್
ಸಪ್ನ ಬುಕ್ ಹೌಸ್, ಬೆಂಗಳೂರು
2004
11. ಯುಗಧರ್ಮ ಮತ್ತು ಸಾಹಿತ್ಯ ದರ್ಶನ; ಕೀರ್ತಿನಾಥ ಕುರ್ತುಕೋಟಿ
ಕರ್ನಾಟಕ ಸರ್ಕಾರ,
1983
12. ಪಿ. ಲಂಕೇಶ್; ಹಾಲತಿ ಸೋಮಶೇಖರ್,
ನವಕರ್ನಾಟಕ ಪ್ರಕಾಶನ,
2006
13. ಸಾಹಿತ್ಯ ಸಂಧರ್ಭ ಟಿ.ಪಿ ಅಶೋಕ
ಅಕ್ಷರ ಪ್ರಕಾಶನ,
ಸಾಗರ 1991